Lastly, there is no provision in the Bill and it is necessary and it is this. After all, all land reforms are made for enhancing food production. The Bill, as it stands, does not throw any burden or responsibility either on the tenant or the cultivating land-holder to efficiently cultivate land. It is possible to have an average minimum production every year and the average produce may be fixed on the basis of the crop cutting experiment and the notified average yield by the Government from year to year. If the owner-cultivator or the tenant-cultivator falls below such an average, there should be some remedy to penalise him and he should be made to produce more. Unless this is made, people do not take this matter seriously. Land has got a social and economic aspect. Land is not merely a matter to be enjoyed by landlords and tenants on their own account. These people owe a higher duty to the nation by putting it to higher production. With these remarks I support the principles of the Bill.

(Sri Shankarappa, Sri Arumugham and others rose.)

SRI C. M. ARUMUGHAM.—Mr. Speaker, when Sri Khot was speaking, the Speaker said that I shall have the next opportunity of speaking. At least after Sri Shankarappa, I must get a chance to speak.

MR. DEPUTY SPEAKER.—No, no. After Sri Shankarappa Sri Gaonkar will speak and then you can speak.

*ಶ್ರೀ ಬಿ. ಎಸ್. ಶಂಕರಪ್ಪ (ಹೊಸದುರ್ಗ).—ನನಗೆ ಮಾತನಾಡುವುದಕ್ಕೆ ಅವಕಾಶಕೊಟ್ಟದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೂ, ಅದಕ್ಕೂ ಮಿಗಿಲಾಗಿ ಮಾನ್ಯ ಸ್ನೇಹಿತರಾದ ಗಾವಂಕರ್ ಅವರಿಗೂ ವಂದಿಸಿ ನಾನು ಮಾತನಾಡುತ್ತೇನೆ. ಭೂ ಸುಧಾರಣೆಯನ್ನು ತರುತ್ತಾರೆ ಎಂದು ಹೇಳುವ ರಭಸದಿಂದ ದೇಶದ ಜನಗಳಲ್ಲಿ ಒಂದು ಕ್ರಾಂತಿ ಉಂಟಾಗಿದೆ. ಅದಕ್ಕೆ ಕಾರಣ ಏನು ಎಂದು ಆಲೋಚನೆಮಾಡಬೇಕು. ಆ ರೀತಿ ಕ್ರಾಂತಿ ಉಂಟಾಗುವುದಕ್ಕೆ ಏನು ಕಾರಣ ಎಂದರೆ ಈ ಬಿಲ್ಲನ್ನು ತಂದು ಜಮೀನಿನ ಮೇಲೆ ಬರುವ ಆದಾಯವನ್ನು ಮಿತಿಗೊಳಿಸಬೇಕು ಎನ್ನುವುದು. ಜಮೀನು ಮಾಡತಕ್ಕ ರೈತಾಪಿ ವರ್ಗದವಲ್ಲಿ ಇನ್ನು ಮುಂದೆ ಸರ್ಕಾರ ತಮ್ಮ ಮೇಲೆ ದ್ವೇಷಾಸೂಯೆಯಿಂದ ಜಮೀನು ಮಾಡತಕ್ಕವನ ಆದಾಯವನ್ನು ಕಡಮೆಮಾಡಿ ಬೇರೆ ಕಸಬುದಾರರಂತೆ ಜೀವನ ಮಾಡುವುದಕ್ಕೆ ಅವಕಾಶಕೊಡವುದಿಲ್ಲ ಎನು ವಭಾವನೆ ಮೂಡಿದೆ. ಭೂಮಿಯಲ್ಲಿ ಆದಾಯವನ್ನು ಹೆಚ್ಚುಮಾಡಬೇಕಾದದ್ದು ನ್ಯಾಯ. ಭೂಮಿ ಯಾರಿಗೆ ಬೇಕು. ಯಾರಿಗೆ ಹೆಚ್ಚು ಭೂಮಿ ಬೇಕು, ಎಷ್ಟು ಇರಬೇಕು ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಭೂಮಿಯನ್ನು

ದೇವರು ಏತಕ್ಕೆ ನಿರ್ಮಾಣಮಾಡಿದ್ದಾನೆ? ಪ್ರಪಂಚದಲ್ಲೆಲ್ಲಾ ಭೂಮಿಯನ್ನು ನಿರ್ಮಾಣಮಾಡಬಹುದಾಗಿತ್ತು. ಆದರೆ ಸ್ವಲ್ಪ ಭಾಗ ನೀರು ಮಾಡಿದ್ದಾನೆ. ಭೂಮಿಯಲ್ಲಿ ಬೆಳೆ ತೆಗೆಯಬೇಕು, ತಿನ್ನಬೇಕು. ಯಾರು ಭೂಮಿಯಲ್ಲಿ ಆಸಕ್ತಿಯಿಂದ ಚೆನ್ನಾಗಿ ಬೆಳೆ ಬೆಳೆಯುತ್ತಾನೆಯೋ ಅದು ಅವನ ವಶದಲ್ಲಿ ಇರಬೇಕು. ಅಲ್ಲದೆ ಚುನಾವಣಾ ಕಾಲದಲ್ಲಿ ಉಳುವವನೇ ಭೂಮಿಯ ಒಡೆಯ ಎಂದು ಹೇಳಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ನೀವೂ ಹೇಳಿದ್ದೀರಾ!

ಶ್ರೀ ಬಿ. ಎಸ್. ಶಂಕರಪ್ಪ.—ನಾನೂ ಅದನ್ನು ಸಪೋರ್ಟ್ ಮಾಡುತ್ತೇನೆ. ಚುನಾವಣೆಯಲ್ಲಿ ಗೆದ್ದು ಇಲ್ಲಿಗೆ ಬಂದ ಕೂಡಲೇ ಆಡಳಿತ ಪಕ್ಷಕ್ಕೆ ಸೇರಿದವರು ಈ ಮಸೂದೆಯನ್ನು ತಂದಿರುವುದು ತುಂಬ ಆಶ್ಚರ್ಯವಾಗಿದೆ. ಭೂಮಿ ಇರತಕ್ಕವರಿಗೆ ನೌಕರಿ, ಕೈಗಾರಿಕೆ ಅಥವಾ ಬಸ್ ಲೈನ್ಸ್ ಇದ್ದರೂ ಸಹ ಅವರಿಗೆ ಮಿತಿ ಏನೂ ಇಲ್ಲದೆ ಭೂಮಿಯಿಂದಲೇ ಜೀವನಮಾಡುವವರಿಗೆ ಮಿತಿ ಇಟ್ಟಿರುವುದು ದೊಡ್ಡ ತಪ್ಪು. ಶ್ರೀ ಪುಟ್ಟಸ್ವಾಮಿ ಅವರು ಹೇಳಿದ ಹಾಗೆ ಭೂಮಿಯಿಂದ ಜೀವನಮಾಡುವವರಿಗೆ ಒಂದು ಮಿತಿಯನ್ನು ಮಾಡಬೇಕಾಗಿದೆಯೇ ಹೊರತು ಬಾಕಿಯವರಿಗೆ ಕಡಮೆ ಮಿತಿ ಮಾಡಬಹುದು. ಒಬ್ಬ ಮನುಷ್ಯನಿಗೆ 200, 300 ಎಕರೆ ಇರಬೇಕೆಂದರೆ ಅದು ಸಾಧ್ಯವಿಲ್ಲ. ಯಾರಾದರೂ ಅಷ್ಟು ವ್ಯವಸಾಯಮಾಡುತ್ತೇವೆ ಎಂದು ಹೇಳಿದರೆ ಅದು ತಪ್ಪು, ಅವರಿಗೆ ವ್ಯವಸಾಯದ ಅನುಭವವಿಲ್ಲ ಎಂದು ಹೇಳಬೇಕಾಗಿದೆ

ಸೀಲಿಂಗ್ ವಿಷಯದಲ್ಲಿ ಮಾನ್ಯ ರೆವಿನ್ಯೂ ಸಚಿವರು ಹೇಳಿದ ಪ್ರಕಾರ ಸೀಲಿಂಗ್ 180 ಎಕರೆ ಖುಷ್ಕಿ ಬರುತ್ತದೆ. ನನ್ನ ಕಾನ್ಸ್ಟಿಟ್ಯೂಯೆನ್ಸಿಯಲ್ಲಿ 180 ಎಕರೆ ಖುಷ್ಕಿ ಇಟ್ಟುಕೊಂಡಿರತಕ್ಕ ರೈತರು ಸಿಕ್ಕುವುದಿಲ್ಲ. ಭೂ ಸುಧಾರಣೆ ಬರುವುದಕ್ಕೆ ಮುಂಚೆ ಭೂ ಸುಧಾರಣೆ ಆಗಿದೆ. ಬಿಲ್ಲು ಜಾರಿಗೆ ಬಂದ ಕಾಲದಲ್ಲಿ ಜಮೀನು ಸಿಕ್ಕ ಜಮೀನಿನಿಂದ ಸುಖವಾಗಿ ಜೀವನ ಮಾಡತಕ್ಕ ಮನುಷ್ಯನಿಗೆ ಜಮೀನು ಬಿಟ್ಟಿಲ್ಲ. ಜತ್ತಿ ಸಮಿತಿ ರಿಪೋರ್ಟ್ ಬಂದ ಕಾಲದಿಂದ ಇತ್ತೀಚೆಗೆ ಜೋಡಿದಾರರು ಟೆನೆಂಟ್ಸನ್ನು ಆಚೆ ಒಡಿಸಿ ಜಮೀನು ಮಾರಾಟಮಾಡಿದ್ದಾರೆ. ಇದನ್ನು ರದ್ದು ಮಾಡಿದರೆ ಕೆಲವರಿಗೆ ಜಮೀನು ಸಿಕ್ಕುತ್ತದೆಯೇ ವಿನಾ, ಬೇರೆಯವರಿಗೆ ಜಮೀನು ಸಿಕ್ಕುವುದಿಲ್ಲ. ಭೂಮಿ ಎನ್ನತಕ್ಕದ್ದು ಒಂದು ಸ್ವತ್ತು, ಅದಕ್ಕೆ ಖರೀದಿ ಉಂಟು, ಮಾರಬಹುದು ಎನ್ನುವ ಮನೋಭಾವನೆಯಿಂದ ಭೂಮಿ ಕೆಲವರ ಕೈ ಸೇರಿಕೊಂಡಿದೆ. ಭೂಮಿಯನ್ನು ಚೆನ್ನಾಗಿ ವ್ಯವಸಾಯಮಾಡಿ ಸುಖವಾಗಿ ಇರಲಿ ಎನ್ನುವುದೇ ಉದ್ದೇಶ. ಆದರೆ ಜನ ಸುಮ್ಮನೆ ಕೂತಿರಲಿ ಎಂದಲ್ಲ. ಹಾಗೆ ಆದರೆ ಭೂಮಿಯನ್ನು ವ್ಯವಸಾಯಮಾಡುವ ಜನ ನಿರುದ್ಯೋಗಿಗಳಾಗಿ ಭೂಮಿಯಿಂದ ಉತ್ಪತ್ತಿ ಆಗುವುದಕ್ಕೆ ಕಷ್ಟವಾಗುತ್ತದೆ. ಭೂ ಸುಧಾರಣೆಮಾಡಬೇಕು ಎಂದು ಹೇಳುವುದರಲ್ಲಿ ನಾನೂ ಒಬ್ಬ. ಭೂ ಸುಧಾರಣೆ ಮಾಡುವ ಕಾಲದಲ್ಲಿ ಖುಷ್ಕಿ, ತರಿ, ಬಾಗಾಯಿತು ಎಂದು ಮಾಡಿಕೊಂಡು ಬರತಕ್ಕ ವರಮಾನವನ್ನು ಲೆಕ್ಕಾಚಾರ ಹಾಕಿಕೊಂಡು ಸಂಸಾರದ ಖರ್ಚು ಅದರಲ್ಲಿ ಹುಟ್ಟುವಂತೆ ಇರಬೇಕು. 3,600 ರೂಪಾಯಿಗಳ ವರಮಾನ ಬರತಕ್ಕ ಜಮೀನು ಇರಬೇಕು ಎಂದು ಹೇಳುತ್ತಾರೆ. ಬಿಲ್ಲಿನಲ್ಲಿ ಲ್ಯಾಂಡ್ ಕಮಿಷನನಲ್ಲಿರತಕ್ಕ ಅಧಿಕಾರಿಗಳಿಗೆ 3½ ಸಾವಿರ ರೂಪಾಯಿ ಸಂಬಳ ಕೊಡಬೇಕೆಂದು ಹೇಳಿದ್ದಾರೆ. ಇದರಿಂದ ಜಮೀನುಮಾಡತಕ್ಕ ಮನುಷ್ಯರಲ್ಲಿ ಕ್ರಾಂತಿ ಬರುತ್ತದೆ. ಆದ್ದರಿಂದ ವ್ಯವಸಾಯಗಾರನಿಗೆ ಎಷ್ಟು ಬೇಕು ಎಂದು ಅವನ ಆದಾಯದ ಮೇಲೆ ಲೆಕ್ಕಾಚಾರ ಹಾಕಿಕೊಂಡು ಒಂದು ಪರಿಮಿತಿ ಇಡುವುದು ಸೂಕ್ತ. ಅವರ ಕಸುಬು ಏನು ಎನ್ನುವುದನ್ನು ನೋಡಬೇಕು. ಸೀಲಿಂಗ್, ಎಗ್ಜೆಂಷನ್, ಕಾಂಪೆನ್‌ಸೇಷನ್ ಈ ಮೂರು ವಿಷಯಗಳೂ ಇದರಲ್ಲಿವೆ. 20 ವರ್ಷಗಳ ಮುಂಚೆ ಇದ್ದ ಜಮೀನನ್ನು ಮಾರುತ್ತಾ ಬಂದು ಬಿಟ್ಟು ಅದರಲ್ಲಿ ಏನೂ ಉಳಿದಿರುವುದಿಲ್ಲ. ಕೂಲಿ ಮಾಡುವುದಕ್ಕೂ ಶಕ್ತಿ ಇರುವುದಿಲ್ಲ. ಆರೋಗ್ಯ ಕೆಟ್ಟುಹೋಗಿರುತ್ತದೆ. ಸೀಲಿಂಗ್ ಲಿಮಿಟ್ ಹಾಕದ ಜಮೀನನ್ನು ಬಹಳ ದಿವಸ ಬಿಡುವುದಿಲ್ಲ. ಆದ್ದರಿಂದ ಸೀಲಿಂಗ್ ಲಿಮಿಟ್ ಇಡುವುದು ಸೂಕ್ತ.

ಒಬ್ಬ ಸದಸ್ಯರು.—ಸ್ವಂತ ಬೇಸಾಯಕ್ಕೆ ಏನು ಹೇಳುತ್ತೀರಿ?

ಶ್ರೀ ಬಿ. ಎಸ್. ಶಂಕರಪ್ಪ.—ಈಗ ಒಬ್ಬ ಮಗ ಡೆಪ್ಯುಟಿ ಕಮೀಷನರ್, ಇನ್ನೊಬ್ಬ ಮಗ ಮಿನಿಸ್ಟರು ಆಗಿದ್ದಾನೆ. ದೊಡ್ಡ ಫ್ಯಾಮಿಲಿ ಇದೆ. ಅವರಿಗೆ ಬಸ್ ಲೈನ್ ಇದೆ. ಅವರಿಗೆ ಒಂದು ಮಿತಿ. ಏನೂ ಇಲ್ಲದೆ ಇರುವವರಿಗೆ ಒಂದು ಮಿತಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಮಿನಿಸ್ಟರಿಗೆ ಬೇಡ ಎಂದು ಹೇಳುತ್ತೀರಾ?

ಶ್ರೀ ಬಿ. ಎಸ್. ಶಂಕರಪ್ಪ.—ಅವರಿಗೆ ಆದಾಯ ಎಷ್ಟು ಬರುತ್ತದೆ ಅದಕ್ಕೆ ಲೆಕ್ಕಹಾಕಿ. ಅವರಿಗೆ ಏತಕ್ಕೆ ಎಗ್ಜಮ್‌ಷನ್; ಉದ್ದೇಶಪೂರ್ವಕವಾಗಿ ಯಾರೋ ಕೆಲವು ಜನರ ಒತ್ತಾಯದ ಪರಿಣಾಮವಾಗಿ ಆ ರೀತಿ ಮಾಡಿದಹಾಗೆ ಕಾಣುತ್ತದೆ. ಕಾಫಿಗೆ ಎಗ್ಜಮ್‌ಷನ್ ಕೊಟ್ಟಿರುವುದನ್ನು ಒಪ್ಪಿಕೊಳ್ಳಬಹುದು. ಕಾರಣ ಇಷ್ಟೆ. ಕಾಫಿಯನ್ನು ಬಯಲುಸೀಮೆಯಲ್ಲಿ ಬೆಳೆಯುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಅದು ದೈವದತ್ತವಾದ ಸಂಪತ್ತು. ಹವಾಮಾನಬೇಕು ಮಳೆಬೇಕು. ಅನುಕೂಲ ಕಲ್ಪಿಸಲು ಕಾಫೀಬೋರ್ಡು ಇದೆ, ಲೇಬರ್ ಆಕ್ಟ್ ಇದೆ. ಆದ್ದರಿಂದ ಅದಕ್ಕೆ ಒಂದು ಪಕ್ಷ ಎಗ್ಜೆಂಷನ್ ಮಾಡಿಕೊಳ್ಳಬಹುದು. ಬಾಗಾಯ್ತಿಗೆ ಎಗ್ಜೆಂಷನ್ ಏತಕ್ಕೆ? ಇವೊತ್ತಿನ ದಿವಸ ಹತ್ತು ವರ್ಷಗಳ ಮುಂಚೆ ಒಂದು ಟನ್ ಅಡಿಕೆಗೆ ಎಷ್ಟು ಬೆಲೆ ಇತ್ತು? ಇವೊತ್ತು ಒಂದು ಟನ್ನಿಗೆ ಎಷ್ಟು ಇದೆ? ಖುಷ್ಕಿ, ಬಾಗಾಯಿತು, ತರೀ ಇವುಗಳನ್ನ ಎಲ್ಲಕಡೆಯೂ ಮಾಡಲು ಅವಕಾಶವಿದೆ; ಕಾಫಿತೋಟ ಮಾಡುವುದಕ್ಕಾಗುವುದಿಲ್ಲ. ಕಾಫಿ ವ್ಯವಸಾಯ ಮಾಡುವುದು ಕಷ್ಟ. ಬಲಾಢ್ಯರು, ಧನಿಕರು ಮಾಡಬಹುದು. ಸಾಮಾನ್ಯವಾದ ಜನರು ಮಾಡುವುದಕ್ಕಾಗುವುದಿಲ್ಲ. ಅದಕ್ಕೆ ಎಗ್ಜಮ್‌ಷನ್ ಮಾಡಬಹುದು. ಬಾಗಾಯಿತಿಗೆ ಏತಕ್ಕೆ ಕೊಡಬೇಕು? ನಾನು ತೆಂಗಿನ ತೋಟ ಇರುವ ಪ್ರದೇಶದಿಂದ ಬಂದಂಥವನು. 10–20 ಎಕರೆ ಏತಕ್ಕೆ ಬೇಕು? ಆ ರೀತಿ ಎಗ್ಜಮ್‌ಷನ್ ಕೊಡುವುದರಿಂದ ಜನಗಳಲ್ಲಿ ಉದ್ರೇಕವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಎಗ್ಜೆಂಷನ್ ಇರಕೂಡದು. ಕಾಂಪೆನ್‌ಸೇಷನ್ ಕೊಡುವ ಕಾಲದಲ್ಲಿ ಅಡಕೆಗೂ ತೆಂಗಿಗೂ ರಿಯಾಯಿತಿಯನ್ನು ಕೊಡಬೇಕು. ಖುಷ್ಕಿ ಜಮೀನಿಗೆ ಕೊಡುವುದಕ್ಕೂ ಇದಕ್ಕೂ ವ್ಯತ್ಯಾಸ ಇದೆ. ಇಲ್ಲಿ ಎಂಟು ವರ್ಷದವರೆಗೆ ಆದಾಯ ಬರುವುದಿಲ್ಲ. ಅಲ್ಲಿಯವರೆಗೆ ಖರ್ಚುಮಾಡಬೇಕು. ಆದ್ದರಿಂದ ತೆಂಗು ಮತ್ತು ಅಡಕೆ ಇರುವ ಜಮೀನುಗಳಿಗೆ ಹೆಚ್ಚು ಕಾಂಪೆನ್‌ಸೇಷನ್ ಕೊಟ್ಟರೆ ತಪ್ಪಾಗುವುದಿಲ್ಲ.

Sri A. R. KARISIDDAPPA (Arsikere).—I am not able to follow the member. ಸ್ವಂತ ಸಾಗುವಳಿ ಮಾಡತಕ್ಕ ರೈತನಿಗೆ ಮಿತಿ ಇರಬಾರದು ಎಂದು ಹೇಳುತ್ತೀರಾ? ತೆಂಗಿನ ತೋಟಕ್ಕೆ ಎಗ್ಸೆಂಷನ್ ಕೊಡಕೂಡದು ಎಂದು ಹೇಳುತ್ತೀರಾ? ಅದರಲ್ಲಿ ಸ್ವಂತ ಸಾಗುವಳಿ ಮಾಡತಕ್ಕ ರೈತನಿಗೆ ಮಿತಿ ಇರಬಾರದೇ ಅಥವಾ ಒಂದು ವೇಳೆ ಹಾಕಿದರೆ ಎಷ್ಟು ಹಾಕಬೇಕು ಎಂಬುದನ್ನು ಸ್ವಲ್ಪ ಹೇಳಬೇಕು.

ಶ್ರೀ ಬಿ. ಎಸ್. ಶಂಕರಪ್ಪ.—ನಾನು ಮೊದಲೇ ಹೇಳಿದ್ದೇನೆ. ಜಮೀನು ಸಾಗುಮಾಡುವುದಕ್ಕೆ ಶಕ್ತಿ ಇರಬೇಕು. ಸೀಮೆಯೆಲ್ಲಾ ಮಾಡುತ್ತೇನೆ ಎಂದರೆ ಅದು ಆಗುವುದಿಲ್ಲ. ಅದನ್ನು ಸೆಲೆಕ್ಟ್ ಕಮಿಟಿಯವರು ಪರಿಶೀಲನೆಮಾಡುತ್ತಾರೆ. ಮತ್ತು ಬಾಗಾಯಿತು ಎಷ್ಟು, ತರೀ ಎಷ್ಟು, ಖುಷ್ಕಿ ಎಷ್ಟು ಇರಬೇಕು ಎನ್ನುವುದನ್ನು ವಿಧಾಯಕ ಮಾಡುತ್ತಾರೆ. ಆ ರೀತಿ ವಿಧಾಯಕ ಮಾಡುವಾಗ, ಬೇರೆಯವರಿಗೆ ಎಷ್ಟು ಆದಾಯ ಬರುತ್ತದೋ ಅಷ್ಟೇ ಆದಾಯ ಇವರಿಗೂ ಬರುವ ಹಾಗೆ ಇರಬೇಕು.

Sri A. R. KARISIDDAPPA.—The main object of the Bill is to increase food production. Can they grow food in plantations?

Sri B. S. SHANKARAPPA.—It is not only to increase the food production but also to solve the problem of agricultural labourer, tenants and middle class people who want to own lands. That is what is stated in the Second Five-Year Plan.

11 A.M.

ಆದ್ದರಿಂದ ವೈಯಕ್ತಿಕವಾಗಿ ಟೆನೆಂಟುಗಳನ್ನು ಬಲವಂತದಿಂದ ಕರೆದುಕೊಂಡು ಬಂದು ಪುನಃ ಅವರನ್ನು ಆಚೆ ಓಡಿಸತಕ್ಕಂಥಾದ್ದು ಈಗ ಸಾಮಾನ್ಯವಾಗಿದೆ. ಇಂಥಾದ್ದನ್ನೆಲ್ಲಾ ರಿಸರ್ಚ್ ಮಾಡುವ ಅವಕಾಶವನ್ನು ಈ ಮಸೂದೆಯಲ್ಲಿ ಮಾಡಿಕೊಡಬೇಕು. ಉಳುವವನೇ ಭೂ ಒಡೆಯ ಎಂದು ಹೇಳುವುದಕ್ಕನುಸಾರವಾಗಿ ಟೆನೆಂಟ್ಸ್ ಪರವಾಗಿ ಸರ್ಕಾರದವರು ಹೆಚ್ಚಿನ ಸಹಾಯುಮಾಡುವಂತೆ ಅವರಿಗೆ ತಿಳಿವಳಿಕೆಕೊಡಬೇಕು. ಗೇಣೀದಾರರು ಬಹಳ ಬಡವರು, ಭೂಮಿಯಲ್ಲಿ ಕಷ್ಟಪಟ್ಟು ವ್ಯವಸಾಯ ಮಾಡುವವರು. ಅವರ ಪರವಾಗಿ ಕೋರ್ಟುಗಳಲ್ಲಿ ಭೂ ವ್ಯವಹಾರ ನಡೆಸಲು ನ್ಯಾಯ ಸಿಕ್ಕುವಂತೆ ಸರ್ಕಾರದವರು ಇದರಲ್ಲ ವ್ಯವಸ್ಥೆಮಾಡಿಕೊಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ ಹೇಳುವುದಾದರೆ, ಇನ್ನು ಕೋ-ಆಪರೇಟಿವ್ ಫಾರಂ ವಿಷಯ. ಎರಡು ಪಾರ್ಟಿ, ಮೂರು ಪಾರ್ಟಿ, ನಾಲ್ಕು ಪಾರ್ಟಿಗಳು ನಮ್ಮಲ್ಲಿ ಇರುತ್ತವೆ. 2/3 ಭಾಗ ಜನ ಒಂದು ಕೋ-ಆಪರೇಟಿವ್ ಫಾರಂ ಮಾಡುತ್ತೇವೆಂದು ಹೇಳಿದರೆ ಬಹಳ ತೊಂದರೆಯಾಗುತ್ತದೆ. ಕೆಲವರು ಕೋ-ಆಪರೇಟಿವ್ ಎಂಬ ಶಬ್ದವನ್ನೇ ಈ ಮಸೂದೆಯಿಂದ ತೆಗೆದು ಹಾಕಬೇಕು ಎಂದು ಹೇಳುತ್ತಾರೆ. ಹಿಂದೆ ನೆಹರೂ ಫಾರಂ, ಗಾಂಧಿ ಫಾರಂ ಎಂದು ಇತ್ತು. ಸರ್ಕಾರಕ್ಕೆ ಅದರಿಂದಾಗಿ ಎಷ್ಟೋ ಹಣ ವ್ಯಯವಾಗಿದೆ. ಈಗ ಅದರ ಕಥೆ ಏನಾಗಿದೆಯೆಂಬುದನ್ನು ಪರಿಶೀಲನೆಮಾಡಿದರೆ ಕೋ-ಆಪರೇಟಿವ್ ಫಾರಂ ಯಶಸ್ವಿಯಾಗುವುದೇ ಇಲ್ಲ. ನೆಹರೂ ಮಟ್ಟದಲ್ಲಿರುವಂತೆ ಕೋ-ಆಪರೇಟಿವ್ ಫಾರಂ ಬರಬೇಕು ಎಂದರೆ ಹೇಗೆ ಬರುತ್ತವೆ? ಗ್ರಾಮಗಳಲ್ಲಿ 2/3 ಭಾಗ ಜನ ಸಹಕಾರ ಕೃಷಿಗೆ ಒಪ್ಪಿದರೆ ಉಳಿದ 1/3 ಭಾಗ ಜನರೂ ಆ ರೀತಿ ಒಪ್ಪಬೇಕೆಂದು ಕಡ್ಡಾಯ ಮಾಡುವುದರಿಂದ ಅನಾಹುತವಾಗುವುದು ಖಂಡಿತವೆಂದು ನಾನು ಹೇಳುತ್ತೇನೆ. ಅಮೃತಮಹಲ್ ಕಾವಲಿನಲ್ಲಿ 16,000 ಎಕರೆಗೊಂದು ಕೋ-ಆಪರೇಟಿವ್ ಫಾರಂ ಕಟ್ಟಿ; ಬೇಡ ಎಂದು ಹೇಳುವುದಿಲ್ಲ. ಆದರೆ ಜನರನ್ನು ಬಲವಂತಮಾಡುವುದು ಬೇಡವೆಂದು ನಾನು ತಮಗೆ ಅರಿಕೆಮಾಡುತ್ತೇನೆ. ಕಾನೂನುಗಳು ದೇಶದಲ್ಲಿ ಸುಲಭವಾಗಿ ಜಾರಿಗೆ ಬರಬೇಕು. ಇದು ಭೂಮಿ ವಿಷಯ. ಇದನ್ನು ಜಾರಿಗೆ ಕೊಡುವುದು ಬಹಳ ಕಷ್ಟ. ಮ್ಯುಟೇಷನ್, ಇಂಡೆಕ್ಸ್ ಆಫ್ ಲ್ಯಾಂಡ್, ಅಸೆಸ್‌ಮೆಂಟ್—ಇವುಗಳ ಬಗ್ಗೆ ಎಷ್ಟೋ ಸೆಕ್ಷನ್‌ಗಳನ್ನು ಹಾಕಿಕೊಂಡಿದ್ದೀರಿ. ಅವುಗಳನ್ನೆಲ್ಲಾ ನ್ಯಾಯಾಧೀಶರು ಕೂತುಕೊಂಡು ತೀರ್ಮಾನಮಾಡಬೇಕೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಒಟ್ಟಿನಲ್ಲಿ ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಬೇಕಾಗಿರುವುದರಿಂದ ಇದನ್ನು ಪರಿಶೀಲನೆ ಮಾಡುವ ತಜ್ಞರು ಎಲ್ಲಾ ವಿಚಾರಗಳನ್ನು ಚೆನ್ನಾಗಿ, ದೀರ್ಘವಾಗಿ ಪರ್ಯಾಲೋಚಿಸಿ ಜನಗಳಿಗಾಗತಕ್ಕ ಹಿಂಸೆಯನ್ನು ತಪ್ಪಿಸುವುದಕ್ಕೆ ಅನುಕೂಲವಾದಂಥ, ಒಂದು ಸುಖೀರಾಜ್ಯಕ್ಕನುಗುಣವಾದ ಭೂ ಸುಧಾರಣಾ ಕಾನೂನನ್ನು ದೇಶದಲ್ಲಿ ಜಾರಿಗೆತರುತ್ತಾರೆಂದು ನಂಬಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—Sri Gaonkar.

Sri C. M. ARUMUGHAM.—Sir, I submit that the Hon'ble Speaker said yesterday that I would be given a chance to day. In fact he said that I would be given the first chance. I leave it to your consideration. I only request you to allow me to speak for five minutes.

Mr. DEPUTY SPEAKER.—You will get your chance.

Sri S. D. GAONKAR (Karwar).—Sir, I rise to support the Bill under consideration of this House. The Bill under consideration is a very important one as it is going to affect the destiny of a number of tenants and the small holders. I have heard my Hon'ble friends speaking for and against the Bill. Sir, many of my Hon'ble friends from the opposition have said that the Bill is not in the interests of the tenants and also the small holders. I am not prepared to accept this view at all. With due respect to my Hon'ble friends, I say this. Sir, from the Bill it can be seen that the Government has

taken a particular policy and the policy is that the tiller should be the owner of the soil. It is a very good policy and as citizens of India it is our duty to see that the tiller is elevated to thy position of a small holder.

This tenancy legislation is not a new thing to the people coming from the Bombay Karnatak area and the Hyderabad Karnatak area. We have been accustomed to this sort of legislation for the last twenty years. There was the first Tenancy Act in 1939. After that there was another Act in 1948 and thereafter another in the year 1956, Before the introduction of these Acts, the tenant in our area used to pay half the crop share or sometimes even more than that. But on account of the implementation of these various Acts, the tenant is paying now eight annas per gunta or twenty rupees per acre, whichever is less. From this it can be seen that the Act that is in force in Bombay Karnatak area and also in the Hyderabad Karnatak area are more progressive than the Acts under the consideration of this House Many of the people from my area say that the present Act is like a cloud which makes a lot of noise but gives practically no rain. But that should not be the aim of this Act. This must make little noise and give ample rain To me, it appears that this Bill has got three main features. The first is the fixing of minimum and maximum rents and the price at which the tenants can purchase the occupancy rights. The second is the prohibition of creation of further leases and the right of resumption of land leased out. The third is the fixing of ceiling and family holdings.

Sir, the Government are very particular in bringing all the parts together by enforcing a uniform law throughout the State. But if we go through the provisions of the Bill, I personally feel that the uniformity has not at all been achieved. To show this, I will come to section 11 of this Bill. It says :

> "(1) Subject to the provisions of this Act, and notwithstanding any law, custom, usage, agreement or the decree or order of a court to the contrary,—
>
> (*a*) the rent payable by a tenant shall be paid annually ; and
>
> (*b*) such rent shall not exceed one-fourth of the gross produce or its value in cash in the case of land possessing facilities for assured irrigation from a tank or a river channel, and one-fifth of the gross produce or its value in cash in the case of any other land."
>
> " Provided that where the rent payable by any tenant under any contract or under any law in force immediately before the appointed day was less than the maximum rent specified in clause (*b*), such tenant shall not be liable to pay more than such rent : "

These two things are quite contrary. With one voice we say that we must try to bring in uniform legislation through out the State. But, here we find that there is a lot of difference between the man from old Mysore and the man from Bombay or Hyderabad Karnatak area. This should not be our aim. As far as possible within the four corners we must try to bring in uniform legislation. My Hon'ble friend the Revenue Minister might very well say that some sort of guidance has been given by the Planning Commission and we cannot go back. Well, I agree to that. When provisions of this Bill are to be extended to the old Mysore the small holder or the landlord will be hard hit. But, what is their percentage ? My Hon'ble friend has already stated that in the New State of Mysore 67 per cent of the agriculturists are owner-cultivators ; about 13 per cent are tenants and 5 per cent are receivers. Roughly speaking only 3 per cent are going to be affected by this measure. Thus including Bombay and Hyderabad area I personally feel that it may not be even 1½ per cent. If 1½ per cent of our people are to be affected by this measure I feel that we must take steps irrespective of any criticism.

Then this disparity in rent will lead to another complication. Sections 51 and 81 speak regarding compensation.

(SRI S. D. GAONKAR)

There two sections are quite contrary to each other. Section 51 says:

"The land-owner, landlord and all other persons interested in the land shall for the extinguishment of their rights in the lands vesting in the State under section 47, be entitled to compensation which shall be as determined under sub-section (2):

"Provided that where the tenant holds land from intermediaries compensation shall be paid to the land-owner and intermediaries in the same proportion in which the rent paid for the land by the tenant was being appropriated by them immediately before the date of vesting."

Here it says that the compensation to be paid to the landlords is 15 times the rent. By way of rent in our area a small holder gets about Rs. 20 per acre and for the same area in the old Mysore it will fetch about Rs. 40 to 50.

Sri KADIDAL MANJAPPA.—It depends upon the nature of the land and the quantum of produce.

Sri S. D. GAONKAR.—At the most it will not be less than Rs. 35 to 40. So, fifteen times this rent would be Rs. 600 per acre whereas in Bombay or Hyderabad area it will not fetch more than Rs. 300. This is clear injustice.

Sri KADIDAL MANJAPPA.—What is the amount for areca garden?

Sri S. D. GAONKAR.—It is same. Practically there is no difference.

So, to achieve our aim as far as possible discrimination should not be made. If one acre in old Mysore fetches Rs. 600, the same acre in Bombay or Hyderabad must fetch the same amount of money. That is my principle. I do not want to say that this should be extended to Bombay or Hyderabad area. The rates prevailing in our area should be extended to old Mysore area.

Regarding occupancy rights, of course, the section is very clear that if the tenant will be given the right to purchase occupancy right he will have to pay the price in 20 instalments. Here while asking the tenant to pay for purchasing the occupancy right by instalments, we have to take into consideration his annual income. Supposing a person purchases about an acre or two at the rate of Rs. 600 per acre. It will be Rs. 1,200 for two acres. Supposing he cultivates about 5 or 6 acres of land. The income derived out of this land will not be sufficient for the maintenance of his family and as such he will not be in a position to pay any amount towards instalments. So the tenant will not pay any instalments and automatically he will forfeit his right. For this what I feel is that there should not be any compulsion. The tenants who feel that they must purchase occupancy rights, should be prepared to pay at least half of the amount of the entire land. Yesterday my Hon'ble friend Sri Veerendra Patil suggested that it would lead to further complications. It is a fact. Supposing the Government takes the responsibility to recover and supposing the tenant does not pay, the question of tenancy arises. So in order to have certain definiteness the Government must take this aspect into consideration.

Sri KADIDAL MANJAPPA.—Do you suggest that he should be continued as a tenant?

Sri S. D. GAONKAR.—I am of the opinion that he should be continued as a tenant and under no circumstances his position should be disturbed.

The second thing is about the prohibition of lease and fixity of tenure. In this connection, I refer to section 8 of the Bill. Here, as per the All-India Congress Resolution of the Nagpur Session it has been decided to popularise co-operative farming. If this works out to be a success I personally feel that further creation of fragments will not be there. But, I personally feel that prohibition of lease will help us to a great extent. At the same time some other provision should be made regarding lease of lands belonging to the Educational trust and the temples. Most of my friends suggested that if the lands belonging to the educational trusts or institutions cultivated by tenants are allowed to be purchased, here will be practically no land for the

institution because they will give lumpsum grant and the Poojari instead of worshipping the God will ask the God to worship him.

Sri KADIDAL MANJAPPA.—That is being done in some cases.

Sri S. D. GAONKAR.—So as security to the temple or the institutions they must also be given certain rights to lease their lands.

Regarding resumptions, I personally feel that the provision contained in the Bill, as it stands, would lead to unnecessary litigation. The clause has not been happily worded. Right of resumption should not be based on basic or family holdings. It should be in terms of specified acreage. Suppose a man owns ten acres; he may lease 5 acres. If the Land Commission says that 5 acres is sufficient for a family, he should not be allowed to lease the balance of five acres.

The definition of family holding in the Bill is as follows:

> "The Land Commission shall determine and notify in the prescribed manner for each of the grades of each class of land in any local area, of family holding being equivalent to an area which a family of five persons including the agriculturist himself would normally cultivate in an efficient manner according to the local conditions and practices and with such assistance as is customary in agricultural operations and which area will on an average yield when so cultivated a net income of one thousand and two hundred rupees per annum".

My definition of a family holding would be different. According to me, a family which possesses two bullocks must have full scope for employment throughout the year. The land required to meet this demand, should be the family holding.

Sri J. H. SHAMSUDDIN (Deputy Minister for Finance).—One pair of bullock, for how many people?

Sri S. D. GAONKAR.—For a family of five. I do not consider that bullocks are also members of the same family.

When we encourage a person to take to agriculture, we should not ask him to be in search of other avenues of employment for the maintenance of the family. The definition I have given would avoid disputes.

The quantum of ceilings should be three times family holding. In my area, as per the Act of 1956, the economic holding is 16 acres and the ceiling is 48 acres. Under no circumstances a family is allowed to hold more than 96 acres irrespective of any number of members in the family. There must be a definite upper limit for a family holding. Otherwise, as the provision stands at present, there will be ample scope to resume any amount of land. There must be some sort of finality.

Sri KADIDAL MANJAPPA.—Does the Hon'ble Member mean that irrespective of the nature of the soil and irrespective of the kind of land, the maximum extent that can be held should be 96 acres?

Sri S. D. GAONKAR.—If I am to take the example of my area, the maximum area that can be cultivated by a family of five members is not more than 5 to 6 acres. If we go a little further to the place of my friend Sri R. G. Kamat, a family could cultivate 8 to 10 acres. Further, in Bijapur, conditions may be different. Therefore while fixing ceiling or family holding, we have to take into consideration the class of land to which it belongs; whether it is irrigated or tank-fed or it is black soil, red soil, etc.

Sri C. K. RAJAIAH SETTY.—May I know the type of soil in your area?

Sri S. D. GAONKAR.—It is partially wet.

ಶ್ರೀ ಬಿ. ಕೆ. ನಾಗೂರ್ (ಬಿಜಾಪುರ).—ಬಿಜಾಪುರದ ವಿಷಯ ಅಂಕಿ ಸಂಖ್ಯೆಗಳ ಆಧಾರದಮೇಲೆ ಹೇಳುತ್ತೀರೋ ಅಥವಾ ನಿಮ್ಮ ಅನುಭವದ ಮೇಲೆ ಹೇಳುತ್ತೀರೋ?

Sri S. D. GAONKAR.—I have no idea of Bijapur. But before we come to a decision, we have to take all these factors into account.

Sri B. L. NARAYANASWAMY (Mulbagal).—Is it the considered opinion of the Hon'ble Member that five or six acres should be the limit for a family?

Sri S. D. GAONKAR.—Yes; One acre in our side yields about 20 Bengali maunds. For five acres, it will be about 100 Bengali maunds. At the rate of Rs. 10 per Bengal maund the income would be Rs. 1,000 which would be sufficient for a family of five members.

I will now deal with the exemptions. Plantations and well-managed farms are exempted from ceiling, among many other categories. Nowhere do we find the well-managed farms being defined. Anyone can put up a board saying that his farm is well-managed and it is likely to be treated as such. There must be some sort of measure or standard by which a farm could be judged as well-managed. If it is not defined, there would be ample scope for anyone to resume any amount of land and thus escape from the provisions of this Act. Further, I submit that the lands belonging to temples and educational institutions should be exempted.

11-30 A.M.

As regards Tribunals, many of my friends have suggested that the implementation of this Act should be through the judiciary. It is a very sound and good suggestion. Though I belong to that category I am not holding any brief for lawyers here because my main concern is to see that the interests of the tenants as well as the small holders are safeguarded in all respects. I am of opinion that if certain sections of this Bill are properly amended, there will be practically no scope for further litigation and I personally feel that the relationship between tenants and landlords should be settled once for all because if we go through the provisions of this Bill we will find that from page 1 to page 81 of the Bill there is ample scope for litigation. Every section contemplates that the party concerned should go to the Tribunal or Deputy Commissioner or the Appellate Tribunal. To put an end to all these things I feel that we should not leave any scope for litigation. Even in spite of that if there is any little scope for litigation, then we should see that the implementation of the Act is through the judiciary. My friends Sri Srinivasa Shetty and Sri Veerappa asked why we should not have a Judicial Officer instead of the Assistant Commissioner as the Tribunal. Of course, the suggestion seems to be sound, but it may not work well because it practically makes no difference whether the Tribunal consists of a Judicial Officer or an Assistant Commissioner. It will be a Tribunal for the whole District and as such a villager from a remote corner will have to go to the headquarters every time. On the other hand, if this is entrusted to the judiciary, there are courts in almost every taluk and they can easily go to the courts for the settlement of their disputes.

Sri KADIDAL MANJAPPA.—Suppose we make the Tribunal go from taluk to Taluk. Will that be all right?

Sri S. D. GAONKAR.—It may not work well in the Bombay Karnatak area. In my place there is a touring court which sits in Karwar for 15 days and for the rest of the month it goes to some other place. I find that that court is not in a position to turn out much work. Much time is taken away only in touring. Sometimes the officer is not in a position to keep a vehicle and so he has to wait for a bus or a country craft to go from place to place and so he will not be in a position to do any justice to the tenants. My object in entrusting the implementation of this Act to the judiciary is to see that tenants get quick justice whenever they want. In my place applications filed before the Mamlatdars in 1948 are not yet disposed of. From the Mamlatdar it goes to the Assistant Commissioner, from the Assistant Commissioner to the Tribunal and from the Tribunal to the High Court and from the High Court it is again remanded to the Mamlatdars. This process will take about 4 years. This process goes on several times. So if the implementation of this Act is entrusted to the judiciary I think it will help the tenants a great deal. With due respect to my friends in the Revenue Department, I feel that they have little knowledge about law. I do not say this about the Revenue Minister because I know he is a lawyer himself, but the Revenue

Officers do not know much about the law of evidence.

Sri KADIDAL MANJAPPA.—They know much about human beings.

Sri S. D. GAONKAR.—Suppose an application is filed before the Tahsildar to get a declaration that a particular man is a tenant. The Tahsildar will call the landlord to prove that he is not a tenant. As per the law of evidence it is for the tenant to prove that he is a tenant, but the Tahsildar takes up a negative approach and calls upon the landlord to prove that the applicant is not the tenant. I feel that the provisions of the Transfer of Property Act also apply as far as this Bill is concerned. For these reasons, I feel that the implementation of this Act should be entrusted to the judiciary and legal practitioners should be allowed to appear in these courts.

The last point I want to deal with is about co-operative farming. Young as I am, I am not in a position to say much about co-operative farming. Whether it will work well or not is a question to be considered. With my little experience I feel that till today persons who have been cultivating lands of a co-operative system have been cultivating nly Government waste lands and practically no assistance is given to them either by Government or by any society. So they are not in a position to improve the lands or increase the yield. In the circumstances what I feel is that this experiment was a failure on account of these things. If they are given proper aid and facilities I feel that this might be a success.

With these words, I resume my seat.

*ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಅಧ್ಯಕ್ಷರೇ, ಈ ದಿನ ನಮ್ಮ ಮುಂದೆ ಇರುವ ಲ್ಯಾಂಡ್ ರಿಫಾರಂಮ್ಸ್ ಬಿಲ್ಲು ಬಹಳ ಮಹತ್ವವಾದ ಬಿಲ್ಲು. ಇದರಿಂದ ಜನರ ಜೀವನಮಟ್ಟವೇ ಬದಲಾಯಿಸುತ್ತಾ ಇದೆ. ಇದು ಬಹಳ ಜನರಿಗೆ ಪರಿಣಾಮವನ್ನುಂಟುಮಾಡುತ್ತದೆ. ಏಕೆಂದರೆ ನಮ್ಮ ರಾಜ್ಯದಲ್ಲಿ ಸುಮಾರು ಶೇಕಡ 75 ಭಾಗ ಜನರು ವ್ಯವಸಾಯದಿಂದ ಜೀವನಮಾಡುವವರು ಇದ್ದಾರೆ. ಮಾನ್ಯ ಸದಸ್ಯರು ಈಗಾಗಲೇ ಈ ವಿಷಯವನ್ನು ವಿವರವಾಗಿ ಚರ್ಚೆಮಾಡಿದ್ದಾರೆ. ಈ ಲ್ಯಾಂಡ್ ರಿಫಾರಂಮ್ಸ್‌ನಿಂದ ಏನಾದರೂ ಯಶಸ್ಸು ಬರುತ್ತದೆಯೋ ಅಥವಾ ಇದರಿಂದ ಏನಾದರೂ ಹೆಚ್ಚು ಆಹಾರ ಉತ್ಪನ್ನವಾಗುತ್ತದೆಯೋ ಎಂಬುದನ್ನು ನೋಡಬೇಕು. ಇದು ಬಹಳ ಮಹತ್ವದ ಬಿಲ್ಲು. ಇದನ್ನು ತೀವ್ರಜಾಗ್ರತೆ ಪಾಸ್‌ಮಾಡಿ ಜಾರಿಗೆ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ ಈಗ ನಾವು ಈ ಒಂದೇ ಒಂದು ಕ್ಷೇತ್ರದಮೇಲೆ ಮಾತ್ರ ಸೀಲಿಂಗ್ ಹಾಕುತ್ತಾ ಇದ್ದೇವೆ. ನಮ್ಮ ರಾಜ್ಯದಲ್ಲಿ ಎಷ್ಟೋ ಜನ ಸಾಹುಕಾರರು, ಲಕ್ಷಾಧೀಶ್ವರರು ಇದ್ದಾರೆ. ಆದರೂ ಭೂಮಿಯಮೇಲೆ ಮಾತ್ರ ಈಗ ಸೀಲಿಂಗ್ ಹಾಕಬೇಕೆಂದು ಈ ಬಿಲ್ ಪ್ರಕಾರ ಹೇಳುತ್ತಾ ಇದ್ದೇವೆ. ಹೀಗೆ ಮಾಡುವುದರಿಂದ ಕೋಟ್ಯಾಧೀಶ್ವರರು ಹೆಚ್ಚುಗಳಿಸಿ ಸಾಹುಕಾರರಾಗುತ್ತಾರೆ. ಭೂ ಒಡೆಯನಿಗೆ ಮಾತ್ರ ಹೆಚ್ಚು ಭೂಮಿಯನ್ನು ಇಟ್ಟುಕೊಳ್ಳಲಿಕ್ಕೆ ಆಸ್ಪದವಿಲ್ಲದ ಹಾಗಾಗುತ್ತದೆ. ಆದಕಾರಣ ಎಲ್ಲಾ ಕ್ಷೇತ್ರಗಳಿಗೂ ಒಂದು ಸೀಲಿಂಗ್ ಲಿಮಿಟ್ ನಿಗದಿಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ. ಯಾರಿಗೂ ಅಸೂಯೆಯ ಭಾವನೆ ಬರುವುದಿಲ್ಲ. ಬೆಂಗಳೂರಿನಲ್ಲಿ ಒಬ್ಬ ಸಾಹುಕಾರನಿಗೆ ನೂರಾರು ಮನೆಗಳಿರುತ್ತವೆ. ಅದರಿಂದ ಸಾವಿರಾರು ರೂಪಾಯಿ ತಿಂಗಳಿಗೆ ಆದಾಯ ಬರುತ್ತದೆ. ಅದೇ ಒಂದು ಭೂಮಿ ಇದ್ದವನಿಗೆ ಮಾತ್ರ 3,600 ರೂಪಾಯಿಗೆ ಲಿಮಿಟ್‌ಮಾಡಿದರೆ ವ್ಯವಸಾಯಗಾರರಲ್ಲಿ ಅಸಂತೃಪ್ತಿಯುಂಟಾಗುತ್ತದೆ. ಈರೀತಿ ಭೇದಭಾವ ಉಂಟುಮಾಡಬಾರದು. ಪ್ರತಿಯೊಬ್ಬರಿಗೂ ಸೀಲಿಂಗ್ ಲಿಮಿಟ್ ನಿಗದಿಮಾಡಿ, ಯಾರೇ ಆಗಲಿ ಮಿಲ್ ಮಾಲೀಕರಾಗಿರಲಿ ಯಾರೇ ಆದರೂ 5,000, 10,000, 20,000 ನಿವ್ವಳ ಆದಾಯ ಬರುವವರಿಗೆ ಸೀಲಿಂಗ್ ಲಿಮಿಟ್ ಫಿಕ್ಸ್‌ಮಾಡದೇ ಭೂಮಿಯಮೇಲೆ ಮಾತ್ರ ಏಕೆ ಸೀಲಿಂಗ್ ನಿಗದಿ ಮಾಡುತ್ತೀರಿ? ವ್ಯವಸಾಯಗಾರರು ಬಹಳ ಅವಿದ್ಯಾವಂತರು. ಅವರಿಗೆ ಸರ್ಕಾರದ ಮುಂದೆ ಬರುವಷ್ಟು ಕೂಡ ಚೈತನ್ಯವಿರುವುದಿಲ್ಲ. ಎಷ್ಟೋ ಜನರಿಗೆ ಸರ್ಕಾರ ಎಂದರೆ ಏನು ಎಂಬುದೂ ಕೂಡ ಗೊತ್ತಿರುವುದಿಲ್ಲ. ಅಂತಹವರಮೇಲೆ ಬಲಾತ್ಕಾರವಾಗಿ ಈ ರೀತಿ ಭೇದಭಾವನೆ ಮಾಡಬಾರದು ಎಂದು ನನ್ನ ಸ್ವಂತ ಅಭಿಪ್ರಾಯ. "ಉಳುವವನೇ ಭೂಮಿಯ ಒಡೆಯ" ಎಂದುಹೇಳುವುದಾದರೆ, ಮನೆಗೆ ಬಾಡಿಗೆ ಕೊಟ್ಟು ವಾಸಮಾಡುವವನು ಮನೆಯ ಒಡೆಯನಾಗಬೇಕಲ್ಲವೇ? ಮೋಟಾರುಕಾರು ಲಾರಿ, ಬಸ್ಸುಗಳನ್ನು ಡ್ರೈವ್‌ಮಾಡುವ ಡ್ರೈವರನೇ ಅದರ ಒಡೆಯ ಎಂದು ಹೇಳಿದಹಾಗೆ ಆಗುವುದಿಲ್ಲವೇ? ಆದ್ದರಿಂದ ಹೀಗೆ ಹೇಳುತ್ತಾಹೋದರೆ ಭೇದಭಾವನೆ ಕಲ್ಪಿಸಿದಂತಾಗುತ್ತದೆ. ಈ ವಿಷಯವನ್ನು ತೀವ್ರವಾಗಿ ಆಲೋಚನೆ ಮಾಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಜತ್ತಿಸಮಿತಿಯ ವರದಿಯಲ್ಲಿ ಸೀಲಿಂಗ್ ಲಿಮಿಟ್ 5,400 ರೂಪಾಯಿ ಇರಬೇಕೆಂದು ಹೇಳಿದೆ. ಈ ಮಸೂದೆಯ ಪ್ರಕಾರ ಅದು 3,600 ರೂಪಾಯಿ ಇದೆ. ಇದು ಬಹಳ ಕಡಮೆಯಾಗುತ್ತದೆಂದು ನನಗನ್ನಿಸುತ್ತದೆ. ಒಂದು ಕುಟುಂಬಕ್ಕೆ 3,600 ರೂಪಾಯಿ ಸೀಲಿಂಗ್ ಲಿಮಿಟ್ಟು ಇರುವುದಾದರೆ ಐದು ಜನ ಮಕ್ಕಳಿರುವ ಕುಟುಂಬದಲ್ಲಿ ಅವರ ವಿದ್ಯಾಭ್ಯಾಸಕ್ಕಾಗಿ ಕಾಲೇಜು ಖರ್ಚಿಗಾಗಿ ದುಡ್ಡು ಹೇಗೆ ಸಾಕಾಗುವುದು? ಒಬ್ಬನನ್ನು ಕಾಲೇಜಿಗೆ ಕಳಿಸಬೇಕೆಂದರೆ 150 ರೂಪಾಯಿಗಳಾದರೂ ಬೇಕಾಗುತ್ತದೆ. ಆದಕಾರಣ ಈರೀತಿ ಸೀಲಿಂಗ್ ಲಿಮಿಟ್ ಹಾಕಿದರೆ ಐದು ಜನ ಮಕ್ಕಳಿರುವ ಕುಟುಂಬದಲ್ಲಿ ವಿದ್ಯಾಭ್ಯಾಸಕ್ಕಾಗಿ ಕಾಲೇಜು ಖರ್ಚಿಗಾಗಿ ಹಣವಿಲ್ಲದೆ ಬಹಳ ಕಷ್ಟವಾಗುತ್ತದೆ.

ಶ್ರೀ ಡಿ. ಮೂಕಪ್ಪ ಸಾಗರ.—ಹೆಚ್ಚಿಗೆ ಮಕ್ಕಳು ಜಮೀನು ಇದ್ದವರಿಗೇ ಆಗುತ್ತದೆಯೋ ಅಥವಾ ಎಲ್ಲರಿಗೂ ಆಗುತ್ತದೆಯೋ ?

ಶ್ರೀ ಬಿ. ಇ. ರಾಮಯ್ಯ.—ಅದು ಎಲ್ಲರಿಗೂ ಅನ್ವಯಿಸುತ್ತದೆ. ಇಲ್ಲಿರುವ ಮಾನ್ಯ ಸದಸ್ಯರು ಈ ಸಭೆಗೆ ಚುನಾಯಿತರಾಗಿ ಬರಬೇಕಾದರೆ ಎಷ್ಟು ಖರ್ಚು ಮಾಡಬೇಕಾಗುತ್ತದೆ ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಈ ಸಭೆಗೆ ಸದಸ್ಯರಾಗಿ ಬರುವುದಕ್ಕೆ ಚುನಾವಣೆಯಲ್ಲಿ ಎಷ್ಟು ಖರ್ಚು ಆಗುತ್ತದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಇ. ರಾಮಯ್ಯ.—ಐದು ಸಾವಿರ ರೂಪಾಯಿ ಖರ್ಚಾಗಬಹುದು.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಲ್ಲ, ಇಪ್ಪತ್ತು ಸಾವಿರ ರೂಪಾಯಿ ಖರ್ಚಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಅದಕ್ಕೋಸ್ಕರವಾಗಿ ನಾನು ಹೇಳುವುದು ಏನೆಂದರೆ ಮಸೂದೆಯ ಪ್ರಕಾರ ಇರತಕ್ಕ 3,600 ರೂಪಾಯಿ ಸೀಲಿಂಗ್ ಲಿಮಿಟ್ಟು ಏನು ಇಟ್ಟಿದ್ದಾರೆಯೋ ಅದು ಬಹಳ ಕಡಮೆಯಾಗಿದೆ, ಎಂದು ಹೇಳಿದರೆ ಅದು ತಪ್ಪಾಗಲಾರದು. ಜತ್ತಿ ಸಮಿತಿಯ ವರದಿಯಲ್ಲಿ ಹೇಳಿದ ಪ್ರಕಾರ 5,400 ರೂಪಾಯಿಗಳೂ ಸಹ ಬಹಳ ಕಡಿಮೆಯಾಗುತ್ತದೆ. ಜತ್ತಿ ಸಮಿತಿಯ ವರದಿಯಮೇಲೆ ಚರ್ಚೆಯು ಈ ಸಭೆಯಲ್ಲಿ ನಡೆದ ಕಾಲಕ್ಕೆ ನಾವು ಆ ವಿಶಯದ ಬಗ್ಗೆ ಮಾತನಾಡುವಾಗ್ಗೆ ಇದನ್ನು ಹೇಳಿದ್ದೇವೆ. ವ್ಯವಸಾಯದಲ್ಲಿ ಸೀಲಿಂಗ್ ಹಾಕುವ ಹಾಗೆ ಬೇರೆ ಕ್ಷೇತ್ರಗಳಲ್ಲಿ ಸೀಲಿಂಗ್ ಹಾಕುವುದಕ್ಕೆ ಸರ್ಕಾರ ಕೈಹಾಕುವುದಿಲ್ಲ. ಆದ್ದರಿಂದ ಈ ವಿಚಾರವನ್ನು ಸಹಾನುಭೂತಿಯಿಂದ ನೋಡಬೇಕು. ಕೊನೆಯ ಪಕ್ಷ basic holding 800 ರೂಪಾಯಿ, family holding 2,400 ರೂಪಾಯಿ, ಸೀಲಿಂಗ್ 7,200 ರೂಪಾಯಿ ಇರಬೇಕು. ಇದನ್ನು ಬಹಳ ಸಹಾನುಭೂತಿಯಿಂದ ವಿಚಾರ ಮಾಡಿದರೆ ಉತ್ತಮವಾಗುತ್ತದೆ. ಭೂಮಿಯನ್ನು ದೊರಕಿಸಬೇಕಾದರೆ ಬಹಳ ಕಷ್ಟಪಟ್ಟು ಸಂಪಾದನೆ ಮಾಡಿದ್ದಾರೆ. ಆದುದರಿಂದ ಅಂಥವರಿಗೆ ಯಾವರೀತಿಯಿಂದಲೂ ಅನ್ಯಾಯವಾಗಬಾರದು. ಸೀಲಿಂಗ್ ಹಾಕುವ ತತ್ವಕ್ಕೆ ಯಾರ ಅಭ್ಯಂತರವೂ ಇಲ್ಲ. ಆದರೆ ಇದೇ ರೀತಿಯಾಗಿ ಎಲ್ಲಾ ಸೆಕ್ಟರುಗಳಲ್ಲಿಯೂ ಸೀಲಿಂಗ್ ಹಾಕುವುದಾದಲೆ ಈಗಲೇ ಹಾಕಿ, ಯಾಕೆಂದರೆ ಎಲ್ಲರಿಗೂ ನ್ಯಾಯ ದೊರಕಬೇಕು. ಭೂ ಒಡೆಯರೊಬ್ಬರಿಗೇ ಭೇದಭಾವ ಮಾಡದೆ ಎಲ್ಲರಿಗೂ ಸೀಲಿಂಗ್ ಹಾಕಿ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಸೀಲಿಂಗ್ ಲಿಮಿಟ್ಟು 3,600 ರೂಪಾಯಿಗಳ ಬದಲು 7,200 ರೂಪಾಯಿ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಲು ಬಯಸುತ್ತೇನೆ. ಇನ್ನು ಈ ಮಸೂದೆಯ ಪ್ರಕಾರ ಪ್ಲಾಂಟೇಷನ್ ಮೊದಲಾದವುಗಳಿಗೆ ಸೀಲಿಂಗ್ ಹಾಕಿರುವುದಿಲ್ಲ. ಇದೊಂದು ವ್ಯತ್ಯಾಸ ತೋರಿಸಿದ್ದಾರೆ. ಪ್ಲಾಂಟೇಷನ್ ಮೇಲೆಯೂ ಸೀಲಿಂಗ್ ಏಕೆ ಹಾಕಬಾರದು ? ಅಡಿಕೆ, ತೆಂಗು, ಕಾಫಿ, ಟೀ ರಬ್ಬರ್ ಈ ತೋಟಗಳ ಮಾಲೀಕರಮೇಲೆ ಸೀಲಿಂಗ್ ಹಾಕಬೇಡಿ, ಪ್ಲಾಂಟೇಷನ್ ಬಿಟ್ಟುಬಿಡಿ ಎಂದು ಪ್ಲಾನಿಂಗ್ ಕಮೀಷನ್ ಅವರು ಹೇಳಿರಬಹುದು. ಈರೀತಿ ಭೇದಭಾವಮಾಡುವುದರಿಂದ ಜನತೆಯಲ್ಲಿ ಅಸಂತೃಪ್ತಿ ಉಂಟಾಗುವುದಕ್ಕೆ ಅವಕಾಶಕೊಟ್ಟಂತಾಗುತ್ತದೆ. ಭೂಮಿಯು ಎಲ್ಲಾ ಕಡೆಗೂ ಒಂದೇ ಆಗಿದೆ. ಕಾಫಿ, ಟೀ ಪ್ಲಾಂಟೇಷನ್ ಇರಲಿ, ಯಾವುದೇ ಸಾಗುವಳಿ ಮಾಡಿದ ಭೂಮಿ ಇರಲಿ ಎಲ್ಲವೂ ಒಂದೇ ಆಗಿರುವುದಿಲ್ಲವೇ ? ಎಲ್ಲರೂ ಕಷ್ಟಪಟ್ಟು ದುಡಿದು ಸಾಗುವಳಿ ಮಾಡುತ್ತಾರೆ. ಆದ್ದರಿಂದ ಅವರಿಗೂ ಸೀಲಿಂಗ್ ಹಾಕಿಬಿಟ್ಟರೆ ಚೆನ್ನಾಗಿರುತ್ತದೆ. ಈಗ ಮಸೂದೆಯಲ್ಲಿ ನಮೂದುಮಾಡಿರುವ ಸೀಲಿಂಗ್ ಬೇಡ, ಅದನ್ನು ಬಿಟ್ಟುಬಿಡಬೇಕು. ಇಲ್ಲದೇ ಇದ್ದರೆ ಅವರಿಗೂ ಇದೇ ರೀತಿಯಾಗಿ ಸೀಲಿಂಗ್ ಹಾಕಿದರೆ ಭೇದಭಾವ ಕಡಮೆಯಾಗುತ್ತದೆ. ವ್ಯವಸಾಯದಲ್ಲಿ ಭೇದಭಾವ ಮಾಡುವುದು ಒಳ್ಳೆಯದಲ್ಲ. ಆದ್ದರಿಂದ ತೆಂಗು, ಅಡಿಕೆ ತೋಟಗಳಮೇಲೆ ಸೀಲಿಂಗ್ ಏಕೆ ಹಾಕಬಾರದು ? ಸೀಲಿಂಗ್ ಹಾಕುವುದೇ ಆದರೆ ಅದು 7,200 ರೂಪಾಯಿ ಸೀಲಿಂಗ್ ಹಾಕಬೇಕು. ಯಾರಿಗೂ ಭೇದಭಾವನೆ ಮಾಡಬಾರದು.

ಇನ್ನು ಐದು ಜನ ಇರತಕ್ಕ joint familyಗೆ 3,600 ರೂಪಾಯಿ ಸೀಲಿಂಗ್ ನಿಗದಿಮಾಡಿದ್ದಾರೆ. ಒಂದು ಕಡೆ ಒಂದು ರೀತಿಯಿಂದ ಹೇಳಿದರೆ ಇನ್ನೊಂದು ಕಡೆ ಮತ್ತೊಂದು ರೀತಿಯಿಂದ ಹೇಳುತ್ತಿದ್ದೇವೆ. ಒಂದು ಕಡೆ ಸಹಕಾರದಿಂದ ಕೆಲಸ ಮಾಡಬೇಕೆಂದು ಹೇಳುತ್ತೇವೆ, ಇನ್ನೊಂದು ಕಡೆ ದೊಡ್ಡ ಕುಟುಂಬ ವಿದ್ದರೆ ಆದಷ್ಟು ಜಾಗ್ರತೆ ಜಮೀನನ್ನು ವಿಭಾಗಮಾಡಿಕೊಳ್ಳಿರಿ ಎಂದು ಹೇಳಿದಹಾಗೆ ಆಗಿದೆ. ಒಂದೊಂದು ದೊಡ್ಡ ಕುಟುಂಬದಲ್ಲಿ 40–50 ಜನರು ಇರುತ್ತಾರೆ. ಆದ್ದರಿಂದ 3,600 ಎಂದು ಇರುವುದನ್ನು ಡಬ್ಬಲ್ ಸೀಲಿಂಗ್‌ಮಾಡಿ, ಅಂದರೆ 7,200 ರೂಪಾಯಿ ಎಂದು ಮಾಡಬೇಕು. ಹೀಗೆ ಮಾಡಿದರೆ ಆರು-ಏಳು ಜನ ಅಣ್ಣ ತಮ್ಮಂದಿರು ಇರುವ ಒಂದು ಕುಟುಂಬದಲ್ಲಿ ಒಕ್ಕಟ್ಟಿನಿಂದ ಇರುತ್ತಾರೆ. ಆದುದರಿಂದ maximum ceiling limit 7,200 ರೂಪಾಯಿಗಳೆಂದು ನಿಗದಿ ಮಾಡಬೇಕು. ಇಲ್ಲದೇ ಇದ್ದರೆ ಏನಾಗುತ್ತದೆ ಎಂದರೆ ನಾವು ಜಮೀನು ಕಸಿದುಕೊಳ್ಳುತ್ತೇವೆ, ವಿಭಾಗ ಮಾಡಿಕೊಳ್ಳಿ ಎಂದು ಹೇಳಿದಂತಾಗುತ್ತದೆ. ಸಹಕಾರದಿಂದ ಇರತಕ್ಕಂಥ ಕುಟುಂಬವನ್ನು ಕೂಡನಾವು ಹಾಗೆ ಇರಗೊಡುವುದಿಲ್ಲವೆಂದು ಹೇಳಿದಹಾಗೆ ಆಗುತ್ತದೆ. ಲಿಮಿಟ್ಟನ್ನು ನಿಗದಿಮಾಡೋಣ. ಐದು ಜನ ಇರತಕ್ಕ ಒಂದು ಕುಟುಂಬ ಇರುತ್ತದೆ. ಅದೇರೀತಿ 7,200 ರೂಪಾಯಿ maximum limit double ceiling ಹಾಕಿ. ಏನೇಆದರೂ ವಿಭಾಗವಾಡುವುದಕ್ಕೆ ಆಸ್ಪದ ಸಿಕ್ಕದಹಾಗೆ ಆಗುತ್ತದೆ. ಒಗ್ಗಟ್ಟಿನಿಂದ ಇರತಕ್ಕಂಥ ಕುಟುಂಬನ್ನು ಒಡೆದುಹಾಕಬೇಡಿ. ಇಲ್ಲದಿದ್ದರೆ ವಿಭಾಗವಾಡಿಕೊಳ್ಳಿ ಎಂದು ಹೇಳಿದಹಾಗೆ ಆಗುತ್ತದೆ. ಗಂಡ, ಹೆಂಡತಿ, ಒಬ್ಬಿಬ್ಬರು ಮಕ್ಕಳು, ಇಷ್ಟು ಮಂದಿ ಇರುವ ಕುಟುಂಬಕ್ಕೆ ವರ್ಷಕ್ಕೆ 3,600 ರೂಪಾಯಿ, ಎಷ್ಟುಮಂದಿಗಾದರೂ ಅಷ್ಟೇ ದೊರೆಯುವ ಹಾಗೆ ಆಗುತ್ತದೆ. ಇದರಿಂದ ಒಗ್ಗಟ್ಟಿನಲ್ಲಿದ್ದ ಕುಟುಂಬವನ್ನು ವಿಭಾಗಮಾಡಿದಹಾಗೆ ಆಗುತ್ತದೆ. ಈರೀತಿ ಮಾಡಿದರೆ ಸಹಕಾರ ಎಲ್ಲಿಂದ ಬರುತ್ತದೆ? ಈ ಅಂಶವನ್ನು ಸರ್ಕಾರ ಆಲೋಚನೆಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ಅತಿ ಮುಖ್ಯವಾದ ವಿಷಯವೆಂದರೆ ಕೋ-ಆಪರೇಟಿವ್ ಫಾರ್ಮಿಂಗ್. ಈಗ ಈ ಗಾಳಿ ಬೀಸುತ್ತಿದೆ. ಇದರ ಬಗ್ಗೆ ಈ ಮಾನ್ಯ ಸಭೆಯ ಸದಸ್ಯರು ಮಾತನಾಡಿರುವುದನ್ನು ನೋಡಿದರೆ ಎಲ್ಲರೂ ಸಹ ಅದಕ್ಕೆ ವಿರೋಧವಾಗಿದ್ದಾರೆಂದು ತಿಳಿದು ಬರುತ್ತದೆ. ಕೋ-ಆಪರೇಟಿವ್ ಫಾರ್ಮಿಂಗ್ ಆಗಬೇಕೆಂದು ನಾಯಕರೆಲ್ಲರೂ ಹೇಳುತ್ತಾರೆ. ಇದರಿಂದ ಆಗತಕ್ಕ ತೊಂದರೆಗಳೇನು, ಎಂಬುದನ್ನು ಯೋಚನೆ ಮಾಡಬೇಕು. ದೊಡ್ಡ ದೊಡ್ಡವರು ಇದನ್ನು ಕಾರ್ಯತಃ ಮಾಡುತ್ತಾಹೋದರೆ ಅದರ ಕಷ್ಟನಿಷ್ಠುರಗಳು ಗೊತ್ತಾಗುತ್ತವೆ. ದೊಡ್ಡ ನಾಯಕರಾಗಿರತಕ್ಕವರಿಗೆ ಪ್ರಾಕ್ಟಿಕಲ್ಲಾಗಿ, ಕೋ-ಆಪರೇಟಿವ್

ಫಾರ್ಮಿಂಗಿನ ಕಷ್ಟಸುಖಗಳೇನು ಎನ್ನುವುದು ಗೊತ್ತಾಗುವುದಿಲ್ಲ. ಒಂದು ಮನೆಯಲ್ಲಿ ಅಣ್ಣ ತಮ್ಮಂದಿರೇ ಒಗ್ಗಟ್ಟಿನಿಂದಿರುವುದಿಲ್ಲ. ಅಂಥ ಪರಿಸ್ಥಿತಿಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಜಾರಿಗೆ ತರುವುದರ ಉದ್ದೇಶವಾದರೂ ಏನು ? ಹೆಚ್ಚು ಆಹಾರ ಉತ್ಪಾದನೆಮಾಡಬೇಕೆಂದು ಹೇಳುತ್ತಾರೆ. ತಮ್ಮ ಭೂಮಿಯನ್ನು ತಾವೇ ನೋಡಿಕೊಳ್ಳಲು ಆಗುತ್ತಿಲ್ಲ. ಅಷ್ಟು ಸೋಮಾರಿತನ ನಮ್ಮಲ್ಲಿ ಬೆಳೆಯುತ್ತಿದೆ. ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿದ್ದೇ ಆದರೆ ಅದರಮೇಲೆ ಏನು ಆಸ್ಥೆ ಇರುತ್ತದೆ ? ಈಗ ಕೋ-ಆಪರೇಟಿವ್ ಸೊಸೈಟಿಗಳನ್ನೇ ತೆಗೆದುಕೊಳ್ಳಿ. ಅವು ಎಷ್ಟರಮಟ್ಟಿಗೆ ಯಶಸ್ವಿಯಾಗಿ ಕೆಲಸಮಾಡುತ್ತಿವೆ ಎಂದು ತಿಳಿದುಕೊಂಡಿದ್ದೀರೋ ಅಷ್ಟರಮಟ್ಟಿಗೆ ಕೆಲಸ ಮಾಡುತ್ತಿಲ್ಲ. ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಅಧ್ಯಕ್ಷರು, ಕಾರ್ಯದರ್ಶಿಗಳು, ಇವರಿಗೆ ಹಣವನ್ನು ತಿನ್ನುವುದಕ್ಕೆ ಅವಕಾಶವಾಗಿದೆಯೇ ಹೊರತು ಇತರರಿಗೆ ಏನೂ ಸಹಾಯವಾಗುವುದಿಲ್ಲ. ಅಧಿಕಾರ ಲಾಲಸೆಗಾಗಿ ಅಧ್ಯಕ್ಷರಾಗಬೇಕು, ಕಾರ್ಯದರ್ಶಿಯಾಗಬೇಕು ಎಂದು ಮಾಡುವುದರಿಂದ ಈರೀತಿಯಾಗುತ್ತಿದೆ. ಬಾಯಲ್ಲಿ ಮಾತ್ರ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿರಿ ಎಂದರೆ ಏನೂ ಸುಖವಿಲ್ಲ. ಪ್ರತಿಯೊಂದು ಹಳ್ಳಿಯಲ್ಲಿಯೂ ಮೂರನೆಯ ಎರಡು ಭಾಗದ ಜನರು ಇದಕ್ಕೆ ಒಪ್ಪಿದರೆ ಉಳಿದವರೂ ಸೇರಬೇಕೆಂದು ಒಂದು ಕಡ್ಡಾಯವನ್ನು ಹಾಕಿದ್ದಾರೆ. ಹಳ್ಳಿಯಲ್ಲಿ ಒಬ್ಬರ ಹತ್ತಿರ ಏನಾದರೂ ಮಾತನಾಡಿದರೆ, ಮತ್ತೊಬ್ಬರು ಅವರನ್ನು ಆ ಪಾರ್ಟಿಗೆ ಸೇರಿದವರೆಂದು ಭಾವಿಸುತ್ತಾರೆ. ಬರೀ ಬಾಯಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕೆಂದು ಹೇಳಿಕೊಳ್ಳುತ್ತಾಹೋದರೆ ಅದು ಯಶಸ್ವಿಯಾದೀತೇ? ಇದರಿಂದ ಜನರಲ್ಲಿ ಅಸಂತೃಪ್ತಿಯುಂಟಾಗುತ್ತದೆಯೇ ಇಲ್ಲವೇ ಎನ್ನುವುದನ್ನು ಸರ್ಕಾರ ನೋಡಬೇಕು. ಜನರು ಯಾವ ರೀತಿ ವಾಸಮಾಡುತ್ತಿದ್ದಾರೆ, ಯಾವ ರೀತಿ ಜೀವನಮಾಡುತ್ತಿದ್ದಾರೆನ್ನುವುದನ್ನು ಇಲ್ಲಿ ಯೋಚನೆಮಾಡಬೇಕಾಗಿದೆ. ಹಳ್ಳಿಯಲ್ಲಿ ರೈತರು ಕಷ್ಟಪಡುತ್ತಿದ್ದಾರೆನ್ನುವುದನ್ನು ಮಾನ್ಯ ಮಂತ್ರಿಗಳೂ ಕೂಡ ನೋಡಿದ್ದಾರೆ. ಸರ್ಕಾರದವರು ಕೋ-ಆಪರೇಟಿವ್ ಫಾರ್ಮಿಂಗ್ ಎಷ್ಟೋಕಡೆ ಮಾಡಿದ್ದಾರೆ. ಅದು ಯಶಸ್ವಿಯಾಗಿದೆಯೇ ಎನ್ನುವುದನ್ನು ಹೇಳಬೇಕು. ಒಬ್ಬ ಮ್ಯಾನೇಜರನ್ನು ನೇಮಿಸಿ ನೂರು ರೂಪಾಯಿ ಸಂಬಳ ಕೊಡುತ್ತೀರಿ, ಫೀಲ್ಡ್‌ಮೆನ್‌ಗಳನ್ನು ನೇಮಿಸಿ ಅವರಿಗೆ ಸಂಬಳ ಕೊಡುತ್ತೀರಿ. ಸಿಬ್ಬಂದಿಗೆ ಹಣ ಖರ್ಚಾಗುತ್ತದೆಯೇ ವಿನಾ ಭೂಮಿಯಿಂದ ಹೆಚ್ಚಿಗೆ ಉತ್ಪನ್ನವಾಗುವುದಿಲ್ಲ. ಇದನ್ನು ಸರ್ಕಾರ ತೀವ್ರವಾಗಿ ಆಲೋಚನೆಮಾಡಬೇಕು. ಈ ಗಾಳಿಯನ್ನು ಆದಷ್ಟು ಮಟ್ಟಿಗೆ ತಡೆಗಟ್ಟಬೇಕು. ಕೋ-ಆಪರೇಟಿವ್ ಫಾರ್ಮಿಂಗ್ ಮಾಡಲು ಇನ್ನೂ ಸರಿಯಾದ ವಾತಾವರಣ ಬಂದಿಲ್ಲ. ನಮ್ಮ ಜನರು ಜಾಗೃತರಾದನಂತರ ಈ ಪದ್ಧತಿಯನ್ನನುಸರಿಸಿದರೆ ತಪ್ಪಾಗಲಾರದೆಂದು ಹೇಳುತ್ತೇನೆ.

ಶ್ರೀ ಎಂ. ಎಂ. ಪಾಟೀಲ್ (ಹಡಗಲಿ).—ಮಾನ್ಯ ಸದಸ್ಯರ ಅಭಿಪ್ರಾಯ ಕೋ-ಆಪರೇಟಿವ್ ಫಾರ್ಮಿಂಗಿಗೆ ವಿರುದ್ಧವಾಗಿದೆಯೇ ?

ಶ್ರೀ ಬಿ. ಇ. ರಾಮಯ್ಯ.—ವಿರೋಧವಿಲ್ಲ. ನಮ್ಮಲ್ಲಿ ನೂರಕ್ಕೆ 70 ಜನರು ಅವಿದ್ಯಾವಂತರೂ, ತಿಳವಳಿಕೆ ಇಲ್ಲದವರೂ ಆಗಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಬಲಾತ್ಕಾರವಾಗಿ ಅವರ ಮೇಲೆ ಹೊರಿಸಿದರೆ ಕಷ್ಟವಾಗುತ್ತದೆ.

ಶ್ರೀ ಮಂಜಪ್ಪ ಉಳ್ಳಾಲ್ (ಕಾರ್ಕಳ).—ಕೋ-ಆಪರೇಟಿವ್ ಫಾರ್ಮಿಂಗ್ ಪದ್ಧತಿಯನ್ನು ಬಲಾತ್ಕಾರವಾಗಿ ಹೊರಿಸಬೇಕೆಂದು ಹೇಳಿಲ್ಲ. ಯಾರು ಮುಂದೆ ಬಂದು ಕೆಲಸಮಾಡುವುದಕ್ಕೆ ಒಪ್ಪಿಕೊಳ್ಳುತ್ತಾರೆಯೋ ಅವರಿಗೆ ತೊಂದರೆಯಾಗದಿರುವಂತೆ ಅವಕಾಶವನ್ನು ಕಲ್ಪಿಸಲಾಗಿದೆ.

ಶ್ರೀ ಬಿ. ಇ. ರಾಮಯ್ಯ.—ಮೂರನೆಯ ಎರಡು ಭಾಗದಷ್ಟು ಜನರು ಅಭಿಪ್ರಾಯಪಡುವುದಾದರೆ ಉಳಿದವರೂ ಅದರಲ್ಲಿ ಸೇರಲಿಕ್ಕೇ ಬೇಕು ಎಂದು ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಪ್ರತಿಯೊಬ್ಬ ಮಾನ್ಯ ಸದಸ್ಯರು ಪ್ರತಿಯೊಂದು ಹಳ್ಳಿಗೂ ಹೋಗಿ, ಜನರನ್ನು ಒಪ್ಪಿಸಿ, ಅವರನ್ನು ವಿದ್ಯಾವಂತರನ್ನಾಗಿ ಮಾಡಿ ಹಳ್ಳಿಯ ಜನರೆಲ್ಲ ಒಬ್ಬರಿಗೊಬ್ಬರು ಸಹಕಾರದಿಂದ ಇದ್ದರೆ ಮಾತ್ರ ಕೋ-ಆಪರೇಟಿವ್ ಫಾರ್ಮಿಂಗ್ ಯಶಸ್ವಿಯಾಗುತ್ತದೆ. ಬರೀ ಬಾಯಿ ಮಾತಿನಿಂದ ಎಷ್ಟು ಹೇಳಿದರೂ ಯಶಸ್ವಿಯಾಗುವುದಿಲ್ಲ. ಕೋ-ಆಪರೇಟಿವ್ ಸೊಸೈಟಿಗಳನ್ನು ಯಶಸ್ವಿಯಾಗಿ ನಡೆಸಿಕೊಂಡರೆ ಸಾಕಾಗಿದೆ. ಸೊಸೈಟಿಗಳ ಹಣ ಬೇಕಾದಷ್ಟು ದುರ್ವಿನಿಯೋಗವಾಗುತ್ತಿದೆ. ಅಂಥವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಎಷ್ಟೋ ಹಣ ನೀರಿನಂತೆ ಖರ್ಚಾಗುತ್ತಿದೆ. ಆದ್ದರಿಂದ ಕೋ-ಆಪರೇಟಿವ್ ಫಾರ್ಮಿಂಗನ್ನು ಜನತೆಗೆ ತಿಳಿವಳಿಕೆ ಬಂದಮೇಲೆ ತರಬೇಕು ಎಂದು ಹೇಳುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಅವರವರೇ ಇಚ್ಛೆಪಟ್ಟಲ್ಲಿ ಆಗ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿದರೆ ನಿಮ್ಮ ಅಭ್ಯಂತರವೇನು ?

ಶ್ರೀ ಬಿ. ಇ. ರಾಮಯ್ಯ.—ಮೂರನೆಯ ಎರಡು ಭಾಗದ ಜನರು ಒಪ್ಪಿ ಸೇರುವುದಾದರೆ ಉಳಿದ ಮೂರನೆಯ ಒಂದು ಭಾಗದ ಜನರೂ ಸೇರಬೇಕು ಎಂದು ಹೇಳಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಬಲೋದ್ಬಂಧವೇನೂ ಇಲ್ಲ. ಆದರೆ ಸ್ವತಃ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಿ ಎಂದು ಇಚ್ಛೆಪಟ್ಟರೆ ನಿಮ್ಮ ಅಡ್ಡಿ ಇಲ್ಲವಷ್ಟೆ ?

ಶ್ರೀ ಬಿ. ಇ. ರಾಮಯ್ಯ.—ಅಡ್ಡಿ ಇಲ್ಲ. ಹಳ್ಳಿಯಲ್ಲಿ ನಾಲ್ಕೈದು ಜನ ದೊಡ್ಡ ಮನುಷ್ಯರಾದವರು ಕೋ-ಆಪರೇಟಿವ್ ಸೊಸೈಟಿಗಳನ್ನು ತಮ್ಮ ಅಧಿಕಾರ ಲಾಲಸೆಗಾಗಿ ತಮಗೆ ಲಾಭದಾಯಕವಾದ ಅಧಿಕಾರಕ್ಕಾಗಿ ಮಾಡುತ್ತಾರೆ. ನಾನಾಗಲೇ ಹೇಳಿದಂತೆ ಹಳ್ಳಿಯ ಜನರು ಅವಿದ್ಯಾವಂತರು. ಹಳ್ಳಿಯವರನ್ನು ದೊಡ್ಡ ಮನುಷ್ಯರಾದವರು ಬಲಾತ್ಕಾರದಿಂದ ಒಪ್ಪಿಸುತ್ತಾರೆ. ಹಳ್ಳಿಗಳಲ್ಲಿ ನಾಯಕರಾದವರು ಹೇಳುವುದಕ್ಕೆ ಬದಲು ಇಲ್ಲ, ಅವರು ಹೇಳಿದ್ದಕ್ಕೆ ದಸ್ಕತ್ತು ಹಾಕುತ್ತಾರೆ. ಇದರಿಂದ ಮೂರನೆಯ ಒಂದು ಭಾಗದ ಜನರು ಬಲಾತ್ಕಾರದಿಂದ ಸೇರಿದಹಾಗಾಗುತ್ತದೆ. ಕೆಲವು ನಾಯಕರು ತಮಗೆ ಲಾಭದಾಯಕವಾಗಿರಲು ಸೊಸೈಟಿಗಳನ್ನು ಮಾಡುತ್ತಾರೆ, ಹೆಚ್ಚು ಉತ್ಪಾದನೆಯನ್ನು ಮಾಡುವುದಕ್ಕಲ್ಲವೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ಹಾಕಿರುವ ಪ್ರತಿಬಂಧಕವನ್ನು ತೆಗೆಯಬೇಕು, ಮೂರನೆಯ ಎರಡು ಭಾಗ ಒಪ್ಪಿದರೆ ಇನ್ನೊಂದು ಭಾಗ ಒಪ್ಪದೆ ಇದ್ದರೂ ಸೇರಬೇಕು ಎಂದು ಇರುವ ಪ್ರಾವಿಷನ್ ತೆಗೆಯಬೇಕು ಎಂಬುದು ತಮ್ಮ ಅಭಿಪ್ರಾಯವೋ ?

ಶ್ರೀ ಬಿ. ಇ. ರಾಮಯ್ಯ.—ಇದರಿಂದ ದೊಡ್ಡ ಸಾಹುಕಾರರಿಗೆ ಆಸ್ಪದ ಮಾಡಿ ಕೊಟ್ಟಹಾಗಾಗುತ್ತದೆ. ಬಡರೈತರಿಗೆ ಏನೂ ಅನುಕೂಲವಾಗುವುದಿಲ್ಲ.

ಶ್ರೀ ಡಿ. ಮೂಕಪ್ಪ.—ಕೋ-ಆಪರೇಟಿವ್ ಸೊಸೈಟಿಗಳನ್ನು ಮಾಡಬೇಕೆಂಬುದು ರೈತರಿಗೆ ಶೋಷಣೆಯಾಗ ತಕ್ಕದ್ದನ್ನು ತಪ್ಪಿಸುವುದಕ್ಕಾಗಿ ಇಂಥ ಸಂದರ್ಭದಲ್ಲ ಸೊಸೈಟಿಗಳನ್ನು ಮಾಡುವುದರಿಂದ ಶೋಷಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳ್ಳುವುದು ಅಷ್ಟು ಸಾಧುವಲ್ಲವೆಂದು ನನಗೆ ತೋರುತ್ತದೆ.

12 NOON.

ಶ್ರೀ ಬಿ. ಇ. ರಾಮಯ್ಯ.—ಮಾಡಿಯೇ ತೀರಬೇಕೆಂದು ಹೇಳುವುದಿಲ್ಲ. ಈ ವಿಚಾರವನ್ನು ಮಾತನಾಡುವುದಕ್ಕೂ ಸಮಯವಲ್ಲ, ಜಾರಿಗೆ ತರುವುದಕ್ಕೂ ಸಮಯನಲ್ಲವೆಂದು ಹೇಳುತ್ತಿದ್ದೇನೆ. ನಾವು ಪ್ರಾಕ್ಟಿಕಲ್ಲಾಗಿ ಹೇಳುತ್ತಾ ಬಂದಿದ್ದೇವೆ ಎನ್ನುವುದನ್ನು ತಾವು ಆಲೋಚನೆಮಾಡಬೇಕು. ಹಳ್ಳಿಗಳಲ್ಲ ಏನೇನು ಕಷ್ಟಗಳಿವೆ ಎನ್ನುವುದನ್ನು ನೋಡುತ್ತಲೇ ಬಂದಿದ್ದೇವೆ. ಇದರಿಂದ ಅಲ್ಲಿಯ ಜನಗಳು ಯಾವ ರೀತಿಯಾಗಿ ಕೆಲಸ ಮಾಡುತ್ತಾರೆ ಎನ್ನುವುದೆಲ್ಲ ಗೊತ್ತಾಗುತ್ತದೆ. ಇದನ್ನೆಲ್ಲ ಸರಕಾರ ಸರಿಯಾಗಿ ಯೋಚನೆಮಾಡಬೇಕೆಂದು ಇಲ್ಲಿ ನಾನು ಹೇಳಬಯಸುತ್ತೇನೆ.

ಅಳಿಯಸಂತಾನದ ವಿಚಾರ ನನಗೆ ಯಾವುದು ಏನು ಎನ್ನುವುದೇ ತಿಳಿಯುವುದಿಲ್ಲ. ಇದನ್ನೆಲ್ಲ ಸೌತ್ ಕೆನರದಿಂದ ಬಂದಿರುವ ಸದಸ್ಯರಿಂದ ಕೇಳಿ ತಿಳಿದುಕೊಂಡು ಯಾವ ರೀತಿಯಾದ ಕ್ರಮಗಳನ್ನು ತೆಗೆದುಕೊಂಡು ಮಾಡಬೇಕೋ ಹಾಗೆ ಮಾಡಬಹುದು.

(Interruption in Telugu by Sri K. P. Revannasiddappa.)

ವ್ಯಾಪಾರಸ್ಥರು ವ್ಯಾಪಾರ ಮಾಡಿಕೊಂಡು ಕೋಟ್ಯಾಧೀಶ್ವರರಾಗಿರುತ್ತಾರೆ. ವ್ಯವಸಾಯಗಾರರಿಗೆ ಯಾವರೀತಿಯು ಸೀಲಿಂಗನ್ನು ಇಡಬೇಕೆಂದು ಹೇಳುತ್ತಾರೋ ಅದೇ ರೀತಿಯಾಗಿ ವ್ಯಾಪಾರಗಾರರು ಮತ್ತು ಇನ್ನಿತರರಿಗೂ ಸೀಲಿಂಗನ್ನು ಹಾಕಬೇಕು. ಈ ಸಭೆಯಲ್ಲಿ ಮಾತನಾಡುವಾಗ ತಮ್ಮ ಸ್ವಂತ ಲಾಭಕ್ಕಾಗಿ ಮಾತನಾಡುತ್ತಾರೆಂದು ತಾವು ಭಾವಿಸಬಾರದು. ಎಲ್ಲ ಕಡೆಗಳಲ್ಲಿಯೂ ಸೀಲಿಂಗ್ ಇರಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಬೇಸಿಕ್ ಹೋಲ್ಡಿಂಗ್ ಬಗ್ಗೆ ನಾಲ್ಕನೆಯ ಒಂದು ಭಾಗವನ್ನು ಕೊಡಬೇಕೆಂದು ಮಾಡಲಾಗಿದೆ. ಇದು ಬಹಳ ಕಡಮೆ.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಪ್ರಾಯದಲ್ಲಿ ಎಷ್ಟಿಗಬೇಕೆಂಬುದನ್ನು ಹೇಳಲಾಗುತ್ತದೆಯೇ ?

ಶ್ರೀ ಬಿ. ಇ. ರಾಮಯ್ಯ.—ನನ್ನ ಸ್ವಂತ ಅಭಿಪ್ರಾಯದಲ್ಲಿ ಮೂರನೆಯ ಒಂದು ಭಾಗ ಎಂದಿದ್ದರೆ ಸರಿಯಾಗಿ ಕಾಣುತ್ತದೆ. ಆದ್ದರಿಂದ ವೆಟ್ಟು ಲ್ಯಾಂಡುಗಳಿಗೆ ಮೂರನೆಯ ಒಂದು ಭಾಗ, ಡ್ರೈ ಲ್ಯಾಂಡ ಗಳಿಗೆ ನಾಲ್ಕನೆಯ ಒಂದು ಭಾಗ ಎಂದು ನನ್ನ ವೈಯುಕ್ತಿಕ ಅಭಿಪ್ರಾಯವಾಗಿದೆ. ಈ ಸೀಲಿಂಗಿನ ಪ್ರಕಾರ ಇಪ್ಪತ್ತು ಎಕರೆಯಷ್ಟು ವೆಟ್ ಲ್ಯಾಂಡ್ ಬರಬಹುದು. ಎಕರೆಗೆ ಮುನ್ನೂರು ರೂಪಾಯಿಗಳೆಂದು ಇಟ್ಟುಕೊಂಡರೆ, ನಾಲ್ಕನೆಯ ಒಂದು ಭಾಗ ಎನ್ನುವುದು ಬಹಳ ಕಡಮೆಯಾಗಿ ಬರುತ್ತದೆ. ಅದರಿಂದ ನಾಲ್ಕನೆಯ ಒಂದು ಭಾಗ ಎಂದು ಇರುವುದನ್ನು ಮೂರನೆಯ ಒಂದುಭಾಗ ಎಂದು ಮಾಡುವುದು ಸೂಕ್ತವಾಗಿ ಕಾಣುತ್ತದೆ. ಆದಕಾರಣ ವೆಟ್ ಲ್ಯಾಂಡ್‌ಗಳಿಗೆ ನಾಲ್ಕನೆಯ ಒಂದು ಭಾಗಕ್ಕಿಂತ ಮೂರನೆಯ ಒಂದು ಭಾಗದಂತೆಯೂ, ಡ್ರೈ ಲ್ಯಾಂಡುಗಳಿಗೆ ಐದನೆಯ ಒಂದು ಭಾಗಕ್ಕಿಂತ ನಾಲ್ಕನೆಯ ಒಂದು ಭಾಗದಂತೆಯೂ ಮಾಡಬೇಕೆಂದು ಹೇಳುತ್ತೇನೆ.

ಈಗ ಸರ್ಕಾರದವರು ಕ್ಯಾಟಲ್ ಫಾರಂಗಾಗಿ ನೂರು ಎಕರೆ, ಇನ್ನೂರು ಎಕರೆ, ಐನೂರು ಎಕರೆಗಳಷ್ಟು ಜಮೀನನ್ನು ಕೊಡಲಾಗಿದೆ. ಆದರೆ ಇದರಿಂದ ಎಷ್ಟು ಅನುಕೂಲಗಳು ಆಗಬೇಕೋ ಅಷ್ಟು ಆಗುತ್ತಿಲ್ಲ. ಆದುದರಿಂದ ಇಂತಹ ಜಮೀನುಗಳನ್ನು ಸರ್ಕಾರದವರೇ ವಾಪಸು ತೆಗೆದುಕೊಂಡು ಲ್ಯಾಂಡ್‌ಲೆಸ್ಸಾಗಿ ಇರುವಂತಹ ಬಡವರು ಯಾರಿದ್ದಾರೋ ಅವರಿಗೆ ಕೊಡಬೇಕು. ಇಂತಹ ಜಮೀನುಗಳಿಂದ ಏನೂ ಉಪಯೋಗವಾಗುತ್ತಿಲ್ಲವಾದುದರಿಂದ ಈ ಜಮೀನುಗಳನ್ನು ಬಡವರಿಗೆ ಹಂಚಿದ್ದಾದರೆ ಹೆಚ್ಚಿನ ಆಹಾರದ ಬೆಳೆಯ ಉತ್ಪನ್ನವನ್ನು ಮಾಡಲು ಅನುಕೂಲವಾಗುತ್ತದೆ. ಇದನ್ನು ಮಾನ್ಯ ರೆವೆನ್ಯೂ ಸಚಿವರು ಗಮನಕ್ಕೆ ತೆಗೆದುಕೊಂಡು ಇಂತಹ ಜಮೀನುಗಳನ್ನು ವಾಪಸು ತೆಗೆದುಕೊಂಡು ಜಮೀನಿಲ್ಲದ ಬಡವರಿಗೆ ಕೊಟ್ಟರೆ ಅನುಕೂಲವಾಗುತ್ತದೆ. ಈ ರೀತಿಯಾದ ಫಾರಂಗಳು ಎಷ್ಟೋ ಇವೆ ಮತ್ತು ಎಷ್ಟೋ ಜಮೀನುಗಳೂ ಇವೆ. ಇಂತಹ ಜಮೀನನ್ನು ಬಡವರಿಗೆ ಕೊಟ್ಟರೆ ಅದರಿಂದ ಉಪಯೋಗವಾಗುತ್ತದೆ.

[MR. SPEAKER in the Chair.]

ಇನ್ನು ಕೆಲವು ಜಮೀನುಗಳನ್ನು ದೇವಸ್ಥಾನಗಳಿಗಾಗಿ ಮತ್ತು ವಿದ್ಯಾಸಂಸ್ಥೆಗಳಿಗಾಗಿ ಕೊಡಲಾಗಿದೆ. ಅವಕ್ಕೆ ಸೀಲಿಂಗ್ ಕೊಟ್ಟಿರುವುದರಲ್ಲಿ ನನಗೆ ಭಿನ್ನಾಭಿಪ್ರಾಯವಿದೆ. ದೇವಸ್ಥಾನಗಳಿಗಾಗಿ ಕೊಟ್ಟಿರುವಂತಹ ಜಮೀನುಗಳಲ್ಲಿ ಎಷ್ಟೋ ಜನರು ಬೇಸಾಯ ಮಾಡದೇ ಹಾಗೆಯೇ ಪಾಳುಬಿದ್ದಿವೆ. ಇಂತಹ ಜಮೀನುಗಳನ್ನು ದೇವಸ್ಥಾನಗಳಲ್ಲಿರುವ ಪೂಜಾರಿಗಳಿಗಾಗಿ ಸವಲತ್ತುಗಳನ್ನು ಕೊಡುವುದಕ್ಕಾಗಿ ಕೊಡಲಾಗಿದೆ. ಇಂತಹ ಜಮೀನುಗಳಿಂದ ಎಷ್ಟು ಉತ್ಪತ್ತಿಯಾಗಬೇಕಾಗಿತ್ತೋ ಅಷ್ಟು ಉತ್ಪತ್ತಿಯೂ ಕೂಡ ಆಗುತ್ತಿಲ್ಲ. ಆದುದರಿಂದ ಹೀಗೆ ದೇವಸ್ಥಾನಗಳಿಗೆ ಕೊಟ್ಟಿರುವ ಜಮೀನುಗಳನ್ನು ಸರ್ಕಾರ ವಾಪಸು ತೆಗೆದುಕೊಂಡು ಕಾಂಪೆನ್‌ಸೇಷನ್ನನ್ನು ಕೊಟ್ಟು ಆ ಜಮೀನುಗಳನ್ನು ಬಡವರಿಗಾಗಿ ಕೊಡಬಹುದು. ಇದೇ ರೀತಿಯಾಗಿ ವಿದ್ಯಾ ಸಂಸ್ಥೆಗಳಿಗಾಗಿ ಕೊಟ್ಟಿರುವ ಜಮೀನುಗಳಲ್ಲಿಯೂ ಎಷ್ಟು ಬೆಳೆಬರುತ್ತದೆ, ಏನು ಎನ್ನುವುದೇ ಗೊತ್ತಿಲ್ಲ. ಈ ಸಂಸ್ಥೆಗಳ ಮ್ಯಾನೇಜಮೆಂಟಿನಲ್ಲಿರುವ ಜಮೀನುಗಳಿಗೆ ವಿನಾಯಿತಿ ಕೊಡಬಾರದು. ಸರ್ಕಾರ ಇದನ್ನೂ ಸಹ ತೆಗೆದುಕೊಂಡು ಬೇರೆಯವರಿಗೆ ಜಮೀನುಗಳನ್ನು ಕೊಡಬಹುದು. ಪ್ರತಿಯೊಬ್ಬರಿಗೂ ಜಮೀನುಗಳನ್ನು ಕೊಡಬೇಕು ಎಂದು ಇವೊತ್ತಿನ ದಿವಸ ಲ್ಯಾಂಡ್ ರಿಫಾರಮ್ಸನ್ನು ಇಲ್ಲ ತಂದಿದ್ದಾರೆ. ಈ ಬಿಲ್ಲಿನ ಪ್ರಕಾರ ಜಮೀನು ಸುಮಾರು ಶೇಕಡ ಐದರಷ್ಟು ಅಥವಾ ಶೇಕಡ ಹತ್ತರಷ್ಟು ಉಳಿಯಬಹುದು. ಎಲ್ಲರಿಗೂ ಕೊಡುವುದಕ್ಕೆ ಶಕ್ಯವಿದೆಯೇ ಎನ್ನುವುದನ್ನು ನೋಡಬೇಕು. ಒಂದು ಹಳ್ಳಿಯಲ್ಲ ನೂರು ಎಕರೆ ಸಿಕ್ಕಬಹುದು. ಇನ್ನೊಂದು ಕಡೆ ಇನ್ನೂರು ಎಕರೆಯಷ್ಟು ಸಿಕ್ಕಬಹುದು. ಎಲ್ಲರಿಗೂ ತೃಪ್ತಿಯನ್ನುಂಟುಮಾಡಲಾಗುವುದಿಲ್ಲ. ಕೆಲವರು ಅಸಂತುಷ್ಟಿಗೆ ಒಳಗಾಗುತ್ತಾರೆ. ಆದುದರಿಂದ ಇನ್ನೆಲ್ಲ ಸರ್ಕಾರ ಯೋಚನೆಮಾಡಬೇಕು. ಕೆಲವು ಜನರಿಗೆ ಅಸಂತುಷ್ಟಿಯ ಭಾವನೆ ಬರುತ್ತದೆ ಎನ್ನು

ವುದರಲ್ಲಿ ಸಂಶಯವಿಲ್ಲ. ಆದುದರಿಂದ ಈ ದೇವಸ್ಥಾನಗಳಿಗೆ ಮತ್ತು ವಿದ್ಯಾಭ್ಯಾಸ ಸಂಸ್ಥೆಗಳಿಗೆ ಜಮೀನುಗಳನ್ನು ಕೊಟ್ಟಿದ್ದರೆ ಇಲ್ಲಿ ವ್ಯವಸಾಯ ಮಾಡುವವರು ಯಾರು ! ಮ್ಯಾನೇಜರು ಯಾರೋ ಇನ್ನೊಬ್ಬರು, ವ್ಯವಸಾಯ ಮಾಡುವವರು ಮತ್ತೊಬ್ಬರು.

ಟೆನೆಂಟ್ಸ್‌ಗೆ ಏನು ಅಭಿರುಚಿ ಇರುತ್ತದೆ ! ಅವರು ಸ್ವಂತ ಕಷ್ಟಪಟ್ಟು ಜಮೀನುಮಾಡಿದರೆ ಅನುಕೂಲವಾಗುತ್ತದೆ. ಅವರು ಮಾಡುತ್ತಾರೆ, ಇವರು ಮಾಡುತ್ತಾರೆ ಎಂದು ಹೇಳಿಕೊಂಡು ಹೋದರೆ ಅಭಿವೃದ್ಧಿ ಆಗುವುದಿಲ್ಲ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಒಕ್ಕಲಗರಿಗೆ ಸ್ಥಳ ಸಿಕ್ಕುತ್ತದೆ ಎಂದು ದೇವಸ್ಥಾನದ ಭೂಮಿಯನ್ನು ಅವರಿಗೆ ಕೊಟ್ಟರೆ ಬಡವರಿಗೆ ಭೂಮಿ ಸಿಕ್ಕಿದ ಹಾಗಾಗುವುದಿಲ್ಲ.

ಶ್ರೀ ಬಿ. ಇ. ರಾಮಯ್ಯ.—ಭೂಮಿ ಮಾಡತಕ್ಕವನಿಗೆ ಪಟ್ಟೆಮಾಡಿಕೊಡಿ. ದೇವಸ್ಥಾನದ ಹೆಸರಿನಲ್ಲಿ ಪೋಸ ನಡೆಯುತ್ತಿದೆ. ಅದು ಹೋಗುತ್ತದೆ. ಅಲ್ಲಿ ಸಾವಿರಾರು ಎಕರೆ ಜಮೀನು ಇರುತ್ತದೆ. ಆದರೆ ವ್ಯವಸಾಯ ಮಾಡುವುದು ನೋಡಿದರೆ.......

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಮಧ್ಯಸ್ಥಗಾರರನ್ನು ತೆಗೆಯಬೇಕು.

ಶ್ರೀ ಬಿ. ಇ. ರಾಮಯ್ಯ.—ಮಧ್ಯಸ್ಥಗಾರರನ್ನು ತೆಗೆಯಬೇಕು. ಟೆನೆಂಟ್ಸ್ ಯಾರು ಇದ್ದಾರೆ ಅವರಿಗೆ ಜಮೀನುಕೊಡಿರಿ. ಅವರಿಗೆ ಪಟ್ಟೆಕೊಡಿರಿ. ದೇವಸ್ಥಾನದಿಂದ ಏನು ಭೂಮಿ ತೆಗೆದುಕೊಳ್ಳುತ್ತೀರಿ ಅದಕ್ಕೆ ಬದಲಾಗಿ ದೇವಸ್ಥಾನಕ್ಕೆ ಪ್ರತಿವರ್ಷವೂ ಇಷ್ಟು ಗ್ರಾಂಟ್ ಎಂದು ಕೊಡಿ.

ಶ್ರೀ ಎಸ್. ಸುಬ್ಬಯ್ಯನಾಯಕ್.—ಸಂಸ್ಥೆಗಳ ಒಕ್ಕಲಗರಿಂದ ಗೇಣಿ ಪಡೆದುಕೊಂಡು ಸಂಸ್ಥೆಗಳನ್ನು ನಡೆಸ ಬೇಕೇ ಅಥವಾ ಸರ್ಕಾರದವರು ಒಕ್ಕಲಿಗರಿಂದ ತೆಗೆದಕೊಂಡು ಸಂಸ್ಥೆಯವರಿಗೆ ಕೊಡಬೇಕೇ !

ಶ್ರೀ ಬಿ. ಇ. ರಾಮಯ್ಯ.—ಸರ್ಕಾರದವರೇ ತೆಗೆದುಕೊಂಡು ದೇವಸ್ಥಾನ ನಡೆಸುವುದಕ್ಕೆ ಕೊಡಲಿ. ಅವರಿಗೆ ಜಮೀನುಬೇಡ. ಅವರಿಗೆ ಜಮೀನು ಅಭಿವೃದ್ಧಿ ಮಾಡುವುದಕ್ಕೆ ಶಕ್ಯವಿಲ್ಲ. ಎಂದು ಹೇಳಬಯಸುತ್ತೇನೆ. ಎಜುಕೇಷನ್ ಇನ್ಸ್ಟಿಟ್ಯೂಷನ್ನೂ ಅಷ್ಟೆ. Implementation of the scheme is very important. ಜಗಳಗಳು ಹೆಚ್ಚು ಆಗುತ್ತಾ ಹೋಗುತ್ತವೆ. ಟೆನೆಂಟ್ಸ್ ಮತ್ತು ಲ್ಯಾಂಡ್‌ಲಾರ್ಡ್‌ಗಳ ನಡುವೆ ಜಗಳಗಳು ಜಾಸ್ತಿ ಆಗಿ, ಕೋರ್ಟು ಮತ್ತು ಕಚೇರಿಗಳಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ಹೇಗೆ ಇಂಪ್ಲಿಮೆಂಟ್ ಮಾಡಿದರೆ ಚೆನ್ನಾಗಿರುತ್ತದೋ ಹಾಗೆಮಾಡಬೇಕು. ರೊಕ್ಕ ಇಲ್ಲದೆ ನ್ಯಾಯ ಸಿಕ್ಕಬೇಕು. ಟೆನೆಂಟ್ಸ್ ಬಡವರಿರುತ್ತಾರೆ. ಪ್ರತಿಯೊಂದು ಸಲ ಕೋರ್ಟಿಗೆ ಹೋಗಬೇಕು ಎಂದರೆ ಬಹಳ ತೊಂದರೆಯಾಗುತ್ತದೆ. ಖರ್ಚು ಇಲ್ಲದೆ ನ್ಯಾಯ ದೊರಕಿಸಿ ಕೊಡುವುದು ಸರ್ಕಾರದ ಜವಾಬ್ದಾರಿ ಇದೆ.

ಶ್ರೀ ಮಂಜಪ್ಪ ಉಳ್ಳಾಲ್.—ಸರ್ಕಾರದವರು ದೇವಸ್ಥಾನದ ಆಸ್ತಿಯನ್ನು ಕಿತ್ತುಕೊಳ್ಳಬೇಕು ಎಂದು ಹೇಳಿದರು. ಈ ಬಗ್ಗೆ ಯಾವ ದೇವಸ್ಥಾನಗಳಲ್ಲಿ ಅಸ್ಪೃಶ್ಯತೆ ಇರುತ್ತದೋ ಆ ದೇವಸ್ಥಾನಗಳ ಆಸ್ತಿಯನ್ನು ಕಿತ್ತುಕೊಂಡರೆ ಜನಗಳಿಗೆ ಸಮಾಧಾನವಾಗುತ್ತದೆ. ಯಾವ ದೇವಸ್ಥಾನದಲ್ಲಿ ಅಸ್ಪೃಶ್ಯತೆ ಇಲ್ಲವೋ ಅಂಥ ಕಡೆ ಸರ್ಕಾರದವರು ಪ್ರೋತ್ಸಾಹಕೊಟ್ಟು ನೋಡಬೇಕಾಗುತ್ತದೆ.

ಶ್ರೀ ಬಿ. ಇ. ರಾಮಯ್ಯ.—ಅಂಥ ಪ್ರಶ್ನೆ ಯಾವುದೂ ಬಂದಿಲ್ಲ. ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನು ಏನು ಇರುತ್ತದೋ ಆ ಜಮೀನನ್ನು ಕಿತ್ತುಕೊಳ್ಳಬೇಕೇ ವಿನಾ, ಅಸ್ಪೃಶ್ಯತೆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಅದಕ್ಕೋಸ್ಕರ ಇದಕ್ಕೆ ಗಮನ ಕೊಡಬೇಕಾಗಿಲ್ಲ.

ಒಬ್ಬ ಸದಸ್ಯರು.—ವಿದ್ಯಾಸಂಸ್ಥೆಗಳಿಗೆ ಜಮೀನು ಇದ್ದರೆ ಸರ್ಕಾರದವರು ಅದನ್ನು ಪಡೆದುಕೊಂಡು ಇನ್ನೊಬ್ಬರಿಗೆ ಕೊಟ್ಟರೆ ವಿದ್ಯಾ ಸಂಸ್ಥೆಗೆ ಬರುವ ಉತ್ಪತ್ತಿಯಷ್ಟನ್ನೇ ಕೊಡಬೇಕೇ ಅಥವಾ ಕಡಮೆ ಕೊಡಬಹುದೇ ?

ಶ್ರೀ ಬಿ. ಇ. ರಾಮಯ್ಯ.—ಆ ವಿಷಯದಲ್ಲಿ ಏನನ್ನೂ ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಸ್ವಂತ ಸಾಗುವಳಿ ಮಾಡುವವರಿಗೆ ಜಮೀನು ಕೊಡಬೇಕು. ಮತ್ತು ಕಾಂಪೆನ್ಸೇಷನ್ ಸರ್ಕಾರದವರು ಪ್ರತಿವರ್ಷವೂ ಗ್ರಾಂಟು ರೂಪದಲ್ಲಿ ಎಜುಕೇಷನ್ ಇನ್ಸ್ಟಿಟ್ಯೂಟ್‌ಗಳಿಗೆ ಕೊಡಬೇಕು.

ಒಬ್ಬ ಸದಸ್ಯರು.—ಜಮೀನಿನ ಉತ್ಪತ್ತಿಯಲ್ಲಿ ಒಂದು ಎಜುಕೇಷನ್ ಸಂಸ್ಥೆ ನಡೆಯುತ್ತಿದ್ದರೆ ಅಷ್ಟೇ ಉತ್ಪತ್ತಿ ಹಣವನ್ನು ಸರ್ಕಾರದವರು ಕೊಡಬೇಕು ಎಂದು ಹೇಳುತ್ತೀರೋ ಅಥವಾ ಕಡಮೆಕೊಟ್ಟು ಆ ಸಂಸ್ಥೆಯಿಂದ ಬರುವ ಸೌಕರ್ಯವನ್ನು ಕಡಮೆಮಾಡಬೇಕೆಂದು ಹೇಳುತ್ತೀರೋ !

ಶ್ರೀ ಬಿ. ಇ. ರಾಮಯ್ಯ.—ಎಜುಕೇಷನ್ ಇನ್ಸ್ಟಿಟ್ಯೂಟಿಗೆ ಹಣ ಕೊಡುವುದನ್ನು ಕಡಮೆಮಾಡಬೇಕೆಂದು ಹೇಳುವುದಿಲ್ಲ. ಎಜುಕೇಷನ್ ಇನ್ಸ್ಟಿಟ್ಯೂಷನ್ ನಡೆಸುವುದು ಮೊದಲನೆಯ ಕರ್ತವ್ಯ. ಅದಕ್ಕೆ ಕಡಮೆಮಾಡಬೇಕು ಎಂದು ಹೇಳುವುದಿಲ್ಲ. ಎಜುಕೇಷನ್ ಇನ್ಸ್ಟಿಟ್ಯೂಟಿಗೆ ಹೆಚ್ಚು ಸಹಾಯಮಾಡುವುದು ಸರ್ಕಾರದ ಕರ್ತವ್ಯವಾಗಿರುತ್ತದೆ. ಭೂಮಿಯಿಂದ ಬರತಕ್ಕ ಉತ್ಪತ್ತಿಯಿಂದ ಯಾವ ಎಜುಕೇಷನಲ್ ಇನ್ಸ್ಟಿಟ್ಯೂಷನ್‌ಗಳು ನಡೆಯುತ್ತಾ ಇರುತ್ತವೋ ಅವುಗಳಿಗೆ ಸರ್ಕಾರದವರು ಗ್ರಾಂಟುಕೊಡಲಿ. ಭೂಮಿಯಿಂದ ಬರತಕ್ಕ ಉತ್ಪನ್ನದಿಂದ ಎಜುಕೇಷನ್ ಇನ್ಸ್ಟಿಟ್ಯೂಷನ್‌ಗಳು ನಡೆದುಕೊಂಡು ಬರುತ್ತಿದ್ದರೆ ದಯವಿಟ್ಟು ಸರ್ಕಾರದವರು ಅವುಗಳಿಗೆ ಪ್ರತಿವರ್ಷವೂ ಗ್ರಾಂಟು ಕೊಡಲೇಬೇಕು. ಆದರೆ ಭೂಮಿ ಇಟ್ಟುಕೊಂಡು ಆ ಭೂಮಿಯಿಂದ ಬರತಕ್ಕ ಉತ್ಪನ್ನದಿಂದ ಎಜುಕೇಷನ್ ಇನ್ಸ್ಟಿಟ್ಯೂಟ್ ನಡೆಸುವುದುಬೇಡ. ಅವರಿಗೆ ಜಮೀನುಮಾಡಲು ಹುಮ್ಮಸ್ಸು ಇರುವುದಿಲ್ಲ. ಅದರಲ್ಲಿ ಅವರಿಗೆ ದವಸವನ್ನು ಬೆಳೆಸುವುದಕ್ಕಾಗುವುದಿಲ್ಲ. ದೇವಸ್ಥಾನಕ್ಕೇ ಆಗಲಿ ಎಜುಕೇಷನ್ ಇನ್ಸ್ಟಿಟ್ಯೂಟ್‌ಗಳಿಗೇ ಆಗಲಿ ಲಕ್ಷಗಟ್ಟಲೇ ಎಕರೆ ಜಮೀನು ಏನು ಇದೆ ಅದನ್ನು ಸರ್ಕಾರ ವಶಪಡಿಸಿಕೊಂಡು ಅವರಿಗೆ ಪ್ರತಿವರ್ಷವೂ ಗ್ರಾಂಟ್ ಮೂಲಕ ಹಣ ಕೊಡಲಿ ಎಂದು ನನ್ನ ಸ್ವಂತ ಅಭಿಪ್ರಾಯ. ಈ ಬಿಲ್ಲು ಜಾರಿಗೆ ಬಂದ ತಕ್ಷಣ ಲಿಟಿಗೇಷನ್ ಆಗುವುದಕ್ಕೆ ಯಾವ ಅನುಮಾನವೂ ಇಲ್ಲ. ಇದರಲ್ಲಿ ಕಾಂಪ್ಲಿಕೇಷನ್ಸ್ ಬಹಳ ಇವೆ. ಇದರಿಂದ ಲ್ಯಾಂಡ್‌ಲಾರ್ಡ್ಸ್ ಮತ್ತು ಟೆನೆಂಟ್ಸ್‌ಗಳನ್ನು ಕೋರ್ಟಿಗೆ ಎಳೆಯುವಂತೆ ಆಗುತ್ತದೆಯೇ ವಿನಾ ಯಾವ ವಿಧವಾದ ಅನುಕೂಲವೂ ಆಗುವುದಿಲ್ಲ. ಸರ್ಕಾರ ಇದನ್ನು ಯಾವರೀತಿ ಇಂಪ್ಲಿಮೆಂಟ್ ಮಾಡಬೇಕೋ ಆರೀತಿ ಮಾಡಬೇಕು. ಇದು ಬಹಳ ಮುಖ್ಯವಾದ ವಿಷಯ. ಇದರಿಂದ ಜನಜೀವನ ಬದಲಾವಣೆ ಹೊಂದುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ದೀರ್ಘವಾಗಿ ಆಲೋಚನೆಮಾಡಿ ಜಾರಿಮಾಡಬೇಕಾಗುತ್ತದೆ. ಡಿಸೆಂಬರ್‌ನೊಳಗೆ ಎಫೆಕ್ಟ್ ಕೊಡ

(ಶ್ರೀ ಬಿ. ಇ. ರಾಮಯ್ಯ)

ಬೇಕು ಎಂದು ಹೇಳುವುದು ಸಾಮಾನ್ಯವಾದ ಮಾತು ಅಲ್ಲ. ಏತಕ್ಕೆಂದರೆ 100ರಲ್ಲಿ 75 ಜನಗಳಿಗೆ ಇದು ಎವಿಕ್ಟ್ ಆಗುತ್ತದೆ. ಈ ಜನಗಳಲ್ಲಿ ಒಂದು ಅಸಂತೃಪ್ತಿ ಭಾವನೆ ಮೂಡಿದೆ. ಯಾವರೀತಿ ಮಾಡಿದರೆ ರೈತನಿಗೆ ಅನುಕೂಲವಾಗುತ್ತದೆ ಎನ್ನುವುದನ್ನು ಸರ್ಕಾರ ಯೋಚನೆ ಮಾಡಿ ಆರೀತಿ ಇಂಪ್ಲಿಮೆಂಟ್ ಮಾಡಬೇಕು ಎಂದು ಹೇಳಬಯಸುತ್ತೇನೆ. ಈ ಸಂಬಂಧದಲ್ಲಿ ಒಬ್ಬ ಹೈಕೋರ್ಟಿನ ಜಡ್ಜ್ ನೇಮಕ ಮಾಡುತ್ತೀರಿ ಎಂದು ಹೇಳಿದ್ದೀರಿ. ಒಂದು ಹಳ್ಳಿಯಲ್ಲಿ ಒಂದು ಸ್ವಲ್ಪ ಜಮೀನು ಇದೆ ಎಂದು ಇಟ್ಟುಕೊಳ್ಳೋಣ. ಅದೇ ಜಮೀನು ಬೇರೆ ಕಡೆ ಇದ್ದರೆ ಅದರ ಬೆಳೆಯಲ್ಲಿ ಬಹಳ ವ್ಯತ್ಯಾಸ ಇರುತ್ತದೆ. ಒಂದು ಎಕರೆಯಲ್ಲಿ 5 ಪಲ್ಲ ಬತ್ತವನ್ನು ಬೆಳೆದರೆ ಪಕ್ಕದಲ್ಲಿರುವ ಜಮೀನಿನಲ್ಲಿ ಎರಡು ಪಲ್ಲ ಕೂಡ ಬೆಳೆಯುವುದಕ್ಕಾಗುವುದಿಲ್ಲ. ಯಾವರೀತಿ ಜಮೀನಿನ ಬೆಲೆಯನ್ನು ಕಂಡು ಹಿಡಿಯುತ್ತೀರಿ? ಹೈಕೋರ್ಟ್‌ಜಡ್ಜ್ ಪ್ರತಿಯೊಂದು ಜಮೀನಿಗೂ ಹೋಗಿ ಸಂಶೋಧನೆ ಮಾಡುವುದು ಸಾಧ್ಯವೇ? ಅದು ಕಷ್ಟವಾಗುತ್ತದೆ. ಅದಕ್ಕೋಸ್ಕರ ತಾವು ಈ ವಿಷಯವನ್ನು ಸಂಪೂರ್ಣವಾಗಿ ಯೋಚನೆಮಾಡಬೇಕು. ತಾವು ಜಮೀನಿನ ಬೆಲೆಯನ್ನು 1952-53ರ ಆಧಾರದಿಂದ ಕಂಡುಹಿಡಿಯುತ್ತಿದ್ದೀರಿ. ಒಂದು ಜಿಲ್ಲೆಯೊಳಗೆ 15 ಸಾವಿರ ರೂಪಾಯಿಗಳು ಬೆಲೆ ಬಾಳುವ ಜಮೀನು ಒಂದುಕಡೆ ಇದ್ದರೆ ಅದರ ಪಕ್ಕದಲ್ಲೇ ಇರುವ ಜಮೀನು 500 ರೂಪಾಯಿ ಕೂಡ ಬೆಲೆ ಬಾಳುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಏನು ಬೆಲೆ ಕಂಡು ಹಿಡಿಯುತ್ತೀರಿ ಎನ್ನುವುದನ್ನೂ ಕೂಡ ತಾವು ಯೋಚನೆಮಾಡಬೇಕು. ಅದು ಬಹಳ ಕ್ಲಿಷ್ಟವಾದ ಸಮಸ್ಯೆ. ಅದಕ್ಕೋಸ್ಕರ ಸರ್ಕಾರ ಇದನ್ನು ದೀರ್ಘವಾಗಿ ಆಲೋಚನೆ ಮಾಡಬೇಕು. ಅದಕ್ಕೋಸ್ಕರ ಲ್ಯಾಂಡ್ ಟ್ರಿಬ್ಯುನಲ್ ಅಪಾಯಿಂಟ್ ಮಾಡುವ ಕಾಲಕ್ಕೆ ಬಹಳ ದೀರ್ಘಕಾಲ ಯೋಚನೆಮಾಡಿ ನೇಮಕಮಾಡಬೇಕು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಅಸಿಸ್ಟೆಂಟ್ ಕಮೀಷನರ್ ನೇಮಕಮಾಡುತ್ತೇವೆಂದು ಹೇಳುತ್ತಾರೆ. ಅದನ್ನು ಒಟ್ಟು ಜುಡಿಷಿಯರಿಗೆ ಕೊಟ್ಟರೆ ಚೆನ್ನಾಗಿ ಆದೀತು, ಒಂದು ನ್ಯಾಯ ಸಿಕ್ಕೀತು ಎನ್ನುವ ಅಭಿಪ್ರಾಯ ಇದೆ. ಅದನ್ನು ರೆವಿನ್ಯೂ ಸೈಡಿಗೆ ಕೊಟ್ಟಿದ್ದೇ ಆದರೆ ನ್ಯಾಯ ದೊರೆಯುತ್ತದೆಯೋ ಇಲ್ಲವೋ ಎನ್ನುವ ಸಂಶಯ ಇದೆ. ಅದಕ್ಕೋಸ್ಕರ ಪ್ರತಿಯೊಂದು ಜಿಲ್ಲೆಗೂ, ಪ್ರತಿಯೊಂದು ತಾಲ್ಲೂಕಿಗೂ ಒಬ್ಬರು ಮುನಸೀಫರನ್ನು ಆ ಸಂಬಂಧವಾಗಿ 5 ವರ್ಷಗಳವರೆಗೆ ನೇಮಕಮಾಡಬೇಕಾಗುತ್ತದೆ. ಇವು ಬಹಳ ಕಾಂಪ್ಲಿಕೇಟೆಡ್ ಮ್ಯಾಟರ್. ಇವುಗಳನ್ನು ಒಂದೆರಡು ವರ್ಷಗಳಲ್ಲಿ ಮಾಡುವುದಕ್ಕಾಗುವುದಿಲ್ಲ. ಇದನ್ನು ಜುಡಿಷಿಯಲ್ ಡಿಪಾರ್ಟ್‌ಮೆಂಟಿಗೆ ಕೊಟ್ಟರೆ ನ್ಯಾಯ ಸಿಕ್ಕುತ್ತದೆ ಎಂದು ನನಗೆ ಕಾಣುತ್ತದೆ. ಇನ್ನೊಂದು ಏನೆಂದರೆ ಭೂಮಿ ಬೇಸಾಯಗಾರನಿರುವ ಸ್ಥಳಕ್ಕೆ 10 ಮೈಲಿ ಒಳಗಡೆ ಇರಬೇಕೆಂದು ಮಾಡಿದ್ದಾರೆ. ಈಗ ಬಳ್ಳಾರಿಯಲ್ಲಿ ಒಬ್ಬರಿಗೆ ಜಮೀನು ಇದ್ದು ಅವರು ಬೆಂಗಳೂರಿನಲ್ಲಿ ಇದ್ದರೆ ಅದನ್ನು ನೋಡುವುದಕ್ಕಾಗುವುದಿಲ್ಲ. ಆದ್ದರಿಂದ ಜಮೀನು 10 ಮೈಲಿ ಲಿಮಿಟ್ಟಿನಲ್ಲಿರಬೇಕು ಎಂಬುದು ಒಳ್ಳೆಯದು ಎಂದು ಹೇಳಬಯಸುತ್ತೇನೆ.

ಇನ್ನು ಕಂಪೆನ್ಸೇಷನ್ ವಿಷಯ. ಒಂದು ಎಕರೆಗೆ 15% ನಿವ್ವಳ ಆದಾಯ ಇದೆಯೆಂಬುದನ್ನು ಹೇಗೆ ಕಂಡುಹಿಡಿಯುವುದು ಎಂದು ನಾನು ಈಗ ಒಂದು ಪ್ರಶ್ನೆ ಕೇಳಬೇಕಾಗುತ್ತದೆ. ನಿವ್ವಳ ಆದಾಯದಲ್ಲಿ ಶೇಕಡ 15ರಷ್ಟು ಕಂಪೆನ್ಸೇಷನ್ ಕೊಡುತ್ತೇವೆಂದು ಹೇಳಿದ್ದೀರಿ. ಇದನ್ನು ಕಂಡುಹಿಡಿಯುವುದು ಶಕ್ಯವೇ? ಎಕರೆಯಿಂದ ಎಕರೆಗೆ ಬೆಳೆ ಹೆಚ್ಚು ಕಡಮೆಯಾಗುತ್ತದೆ. ಹೀಗಿರುವಾಗ ಸರ್ಕಾರ ಇನ್‌ಕಮ್ ನಿಗದಿ ಮಾಡುವುದಕ್ಕೆ ಸಾಧ್ಯವೇ? ಅದನ್ನು ಸರ್ಕಾರದವರು ಯೋಚನೆಮಾಡಬೇಕು. ರಿಕಾರ್ಡ್ಸ್ ಆಫ್ ರೈಟ್ಸ್ ಎಂದು ಮಾಡುತ್ತಿದ್ದೀರಿ. ಆ ರೀತಿ ಮಾಡಿದ್ದರೆ ಈ ಪ್ರಾವಿಷನ್ನಿಗೆ ಇಂಪ್ಲಿಮೆಂಟೇಷನ್ ಕೊಡಿ. ಇಲ್ಲದಿದ್ದರೆ ಬಹಳ ಜನಗಳಿಗೆ ತೊಂದರೆಯಾಗುತ್ತದೆ. ಅದನ್ನು ಸರ್ಕಾರ ಯೋಚನೆಮಾಡಬೇಕು. 20 ಕಂತುಗಳ ಪ್ರಕಾರ ಕಂಪೆನ್ಸೇಷನ್ ಕೊಡಬೇಕೆಂದು ಇಲ್ಲಿ ಹೇಳುತ್ತಾರೆ. ಒಬ್ಬ ಭೂಒಡೆಯ ತನ್ನ ಜಮೀನಿನ ಮೇಲೆ ಸಾಲಮಾಡುತ್ತಾನೆ ಎನ್ನೋಣ. ಆತನು ಸಾಲ ತೀರಿಸುವ ಬಗೆ ಹೇಗೆ? ಅದಕ್ಕೋಸ್ಕರ ಒಂದು ಲಂಪ್‌ಸಮ್ಮಾಗಿ ಹಣವನ್ನು ಕೊಟ್ಟರೆ ಅವನಿಗೆ ಸಾಲ ತೀರಿಸುವುದಕ್ಕನುಕೂಲವಾಗುತ್ತದೆ. ಆದ್ದರಿಂದ ಈ ಕಂಪೆನ್ಸೇಷನ್ ಕೊಡುವ ವಿಷಯದಲ್ಲಿ ಇನ್ನು ಮುಂದೆ ಸರ್ಕಾರದವರು 20 ಕಂತುಗಳ ರೂಪದಲ್ಲಿ ಕೊಡದೆ ಲಂಪ್‌ಸಮ್ಮಾಗಿ ಹಣವನ್ನು ಕೊಡಬೇಕೆಂದು ಒಮ್ಮೆ ನಾನು ಹೇಳುತ್ತೇನೆ. ಸರ್ಕಾರ ಜಮೀನ್ದಾರರಿಂದ ಜಮೀನನ್ನು ತೆಗೆದುಕೊಂಡು ರೈತರಿಗೆ ಹಂಚಬೇಕು. ಆ ರೀತಿ ಹಂಚುವಾಗ ಸರ್ಕಾರ ಹೆಚ್ಚಿನ ಜವಾಬ್ದಾರಿಯನ್ನು ಹೊಂದಿರಬೇಕು. ಜಮೀನ್ದಾರನು ತನ್ನ ಜಮೀನನ್ನು ಬಿಟ್ಟುಕೊಡುವುದು ಸರ್ಕಾರಕ್ಕೆ ಹೊರತು ರೈತನಿಗೆ ಅಲ್ಲ. ಸರ್ಕಾರದವರು ಅದಕ್ಕಾಗಿ ಕಂಪೆನ್ಸೇಷನ್ ಕೊಡುವಾಗ ಅವರಿಗೆ ಎಷ್ಟು ರೊಕ್ಕ ಬರಬೇಕೆಂಬುದನ್ನು ಲೆಕ್ಕಮಾಡಿ ಚೆನ್ನಾಗಿ ತಿಳಿದು ಅದನ್ನು ಮೊದಲೇ ಕೊಡುವುದು ಅನುಕೂಲ. ಕಂತುಗಳ ರೂಪದಲ್ಲಿ ಕೊಡುವುದರಿಂದ ಅವರಿಗೆ ಬಹಳ ಕಷ್ಟ. ಒಂದುವೇಳೆ ನಾವೇಕೆ ಜವಾಬ್ದಾರರಾಗಬೇಕು ಎಂಬುದಾಗಿ ಸರ್ಕಾರದವರು ಕೇಳಬಹುದು. ಆದರೆ ಜಮೀನಿಗೆ ಯಾರು ಜವಾಬ್ದಾರರಾಗಿರುತ್ತಾರೋ ಅವರು ಆ ಜಮೀನಿಗೆ ಪುನಃ ಸರ್ಕಾರಕ್ಕೆ ಅರ್ಜಿ ಹಾಕಿಕೊಳ್ಳಬೇಕು ಎಂದಿದೆ. ಅದು ಎಷ್ಟು ತೊಂದರೆಯೆಂಬುದನ್ನು ಸರ್ಕಾರ ಯೋಚನೆಮಾಡಬೇಕು. ಇದು ಬಹಳ ಕ್ಲಿಷ್ಟವಾದ ಸಮಸ್ಯೆ. ಅದಕ್ಕೋಸ್ಕರವೇ ಸರ್ಕಾರ ಜವಾಬ್ದಾರಿಯಾಗಬೇಕು. ಸರ್ಕಾರಕ್ಕೆ ಇದೇನೂ ಅಷ್ಟು ದೊಡ್ಡದಲ್ಲ. ಒಮ್ಮೆ ಎಷ್ಟು ಎಕರೆಯನ್ನು ಅವರು ಸರೆಂಡರ್ ಮಾಡುತ್ತಾರೋ ಅದಕ್ಕೆ ಕಂಪೆನ್ಸೇಷನ್ ಒಮ್ಮೆಯೇ ಕೊಟ್ಟರೆ, ಅವರು ಹಿಂದಿನಕಾಲದಲ್ಲಿ ತಮ್ಮ ಪೂರ್ವಿಕರು ಸಂಪಾದಿಸಿ ಇಟ್ಟಿದ್ದಂಥ ಜಮೀನಿಗೆ ಸರಿಯಾದ ಹಣ ಸರ್ಕಾರದಿಂದ ಒಂದೇ ಸಾರಿಯೇ ಸಿಕ್ಕಿತೆಂದು ಸಂತೋಷಪಟ್ಟು ತಮ್ಮ ಋಣಬಾಧೆ, ಇತ್ಯಾದಿಗಳನ್ನು ಬಗೆಹರಿಸುವುದಕ್ಕೆ ಅನುಕೂಲವಾಯಿತೆಂದು ಹೇಳಿಕೊಳ್ಳುತ್ತಾರೆ. ಅವರಿಗೆ 20 ಕಂತುಗಳ ರೂಪಗಳಲ್ಲಿ ಕಂಪೆನ್ಸೇಷನ್ ಕೊಟ್ಟರೆ ಅಸಮಾಧಾನವೇ ಹೊರತು ಮತ್ತೇನೂ ಇಲ್ಲ. ಆದ್ದರಿಂದ ಈರೀತಿ ಕೊಡುವುದನ್ನು ತೆಗೆದುಹಾಕಿ. ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್.—ನಾನು ಇನ್ನೂ ಈ ಮಸೂದೆಯಮೇಲೆ ಮಾತನಾಡಲಿಲ್ಲ. ನನಗೆ ಕೂಡ ತಕ್ಕ ಕಾಲವೆಷ್ಟು ಎಂಬುದನ್ನು ಈಗಲೇ ಹೇಳಿದರೆ ನಾನು ಮಾತನಾಡಲು ಸಂತೋಷವಾಗುತ್ತದೆ.

ಅಧ್ಯಕ್ಷರು.—ಈಗ ನನ್ನ ಎದುರಿಗೆ ಬಂದಿದ್ದೀರಿ. ಈ ಅಧಿವೇಶನದಲ್ಲಿ ಈ ಬಿಲ್ಲಿನಮೇಲೆ ಕೇವಲ ಸ್ವತಂತ್ರ

ಸದಸ್ಯರೇ ಜಾಸ್ತಿಯಾಗಿ ಮಾತನಾಡಿದ್ದಾರೆ. ಆದ್ದರಿಂದ ಇದು ಸಂಪೂರ್ಣವಾಗಿ ಇಂಡಿಪೆಂಡೆಂಟ್ಸ್ ಮಸೂದೆ ಎಂದು ನಾನು ಹೇಳಬೇಕಾಗಿದೆ. ಅವರು ಮಾತನಾಡುವುದನ್ನು ಬಿಟ್ಟರೆ ನಿಮಗೆ ಅವಕಾಶ ಸಿಕ್ಕುತ್ತದೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕಾರ್ಯಕ್ರಮದ ಪ್ರಕಾರ ಈ ಮಸೂದೆ ಚರ್ಚೆ ಇವತ್ತೇ ಮುಗಿಯುತ್ತದೋ ನಾಳೆಯೂ ಮುಂದುವರಿಯುತ್ತದೋ?

ಅಧ್ಯಕ್ಷರು.—ನೋಡೋಣ. ಮುಂದೆ ಸಭೆಗೆ ತಿಳಿಸುತ್ತೇನೆ.

ಶ್ರೀ ಬಿ. ಕೆ. ನಾಗೂರ್.—ಈಗಲೇ ನನ್ನ ಪ್ರಶ್ನೆಗೆ ದಯವಿಟ್ಟು ಉತ್ತರ ತಿಳಿಸಿದರೆ ಒಳ್ಳೆಯದು.

Sri B. L. NARAYANASWAMY.—Sir, may we know the future programme as to how long we are sitting on this Bill?

Mr. SPEAKER.—We will see till the end of the day how things will develop. I am not competent in these matters. If the House decides to conclude, we can conclude. If the House wants that this debate should not conclude, it will continue.

Sri C. M. ARUMUGHAM.—At the tail end of the day, if the Government were to force something on us, we cannot accept it.

Mr. SPEAKER.—Government cannot force its opinion on you. I will put it to the whole House and the House will decide.

Sri C. M. ARUMUGHAM.—The Hon'ble Speaker recently returned from foreign countries and the Notes that you supplied us is very fine indeed and I want to thank you for that. What is the method adopted in foreign countries regarding these matters? Is the opinion of the Business Advisory Committee final?

Mr. SPEAKER.—Since the question has been raised, I will tell you in a couple of words. There is no Business Advisory Committee in the Commons. For every week, on Wednesday, the whole House will decide the programme and it takes hardly ten minutes to settle it.

Sri J. B. MALLARADHYA (Nanjangud).—According to the List of Business placed in our hands, there are certain motions put down. But I do not know what has happened in the interval. Why should you keep us in uncertainty?

Mr. SPEAKER.—I will put it to the House at the end of the day and if the concensus of opinion is to continue it tomorrow, we will continue. We cannot prejudge the issue.

Sri B. L. NARAYANA SWAMY.—When we have accepted the programme laid down by the Business Advisory Committee, how can you alter it?

Mr. SPEAKER.—The Business Advisory Committee only makes a recommendation and the one made by it has been accepted by the House. The decision of the House may be altered by another decision of the House.

12-30 P.M.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರ, ನಾವು ಚರ್ಚೆಮಾಡುತ್ತಿರುವ ಭೂಹಿಡುವಳಿ ಮತ್ತು ಭೂಮಾಲಿಕತ್ವಕ್ಕೆ ಸಂಬಂಧಪಟ್ಟ ಮಸೂದೆಯ ಬಗ್ಗೆ ನಾಲ್ಕುಮಾತುಗಳನ್ನು ಆಡಬೇಕೆಂದು ನಿಂತಿದ್ದೇನೆ. ಮಾತನಾಡುವುದಕ್ಕೆ ಮುಂಚೆ ಇಷ್ಟು ವಿಷಯ ತಿಳಿಸಬೇಕೆಂದು ಇಚ್ಛಿಸುತ್ತೇನೆ. ನಾನು ಇರುವವಳು ಒಬ್ಬಳೇ. ನನಗೆ ವೆಸ್ಟೆಡ್ ಇಂಟರೆಸ್ಟ್ ಇಲ್ಲ. ಎಲ್ಲಾ ವಿನಾಯಿತಿಯೂ ಇದೆ. ಆದುದರಿಂದ ನಾನು ಮಾತನಾಡುವುದಕ್ಕೆ ತಪ್ಪರ್ಥ ಕಲ್ಪಿಸಬಾರದು. ಇಷ್ಟನ್ನು ಹೇಳಿಬಿಟ್ಟು ದೇಶದ ಮತ್ತು ಜನಗಳ ಹಿತಚಿಂತನೆಯನ್ನೇ ಗುರಿಯಾಗಿಟ್ಟುಕೊಂಡು ಕೆಲವು ಮಾತುಗಳನ್ನಾಡುತ್ತೇನೆ.

ಈ ಮಸೂದೆಯ ಬಗ್ಗೆ ಹಿಂದೆ ಮಾನ್ಯ ಮುಖ್ಯಮಂತ್ರಿಗಳಾಗಿರತಕ್ಕಂಥ ಜತ್ತಿಯವರ ಒಂದು ರಿಪೋರ್ಟು ಇಟ್ಟಿದ್ದಾಗಲೂ ನಾನು ಅದನ್ನೇ ಸಂಪೂರ್ಣವಾಗಿ ವಿರೋಧಿಸಿದ್ದೆ. ಈಗಲೂ, ಇಷ್ಟೆಲ್ಲಾ ಜನರ ಭಾಷಣ ಕೇಳಿದ ಮೇಲೆಯೂ ಅದೇ ಮನೋಭಾವನೆಯನ್ನೇ ಉಳ್ಳವಳಾಗಿದ್ದೇನೆ. ಈ ಮಸೂದೆ ಹಳ್ಳಿಯಲ್ಲಿ ವಾಸಮಾಡತಕ್ಕ ಜನರ ಮನೋಧೋರಣೆ, ಅವರಿಗೆ ವ್ಯವಸಾಯದಲ್ಲಿರತಕ್ಕಂಥ ಆಸಕ್ತಿ ಅಥವಾ ಅನಾಸಕ್ತಿ, ಅವರಿಗೆ ಈ ಮಸೂದೆಯಿಂದ ಏನು ತೊಂದರೆಯಾಗುತ್ತದೆಂಬುದನ್ನೆಲ್ಲಾ ತಿಳಿದುಕೊಳ್ಳದೆಯೇ ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು ಎಂದು ಹೇಳಿದಹಾಗಾಗಿದೆ. ನಮ್ಮ ದೇಶದಲ್ಲಿ 80 ಪರ್ಸೆಂಟ್ ರೈತಾಪಿ ಜನರಿದ್ದಾರೆ. ಜಮೀನು ಇದ್ದವರಿಂದ ಇಲ್ಲದವರಿಗೆ ಕಿತ್ತುಕೊಟ್ಟರೆ ಎಷ್ಟು ಜನರಿಗೆ ಅನ್ಯಾಯವಾಗುತ್ತದೆ, ನಮ್ಮ ದೇಶಕ್ಕೆ ಎಷ್ಟು ಕಷ್ಟವಾಗುತ್ತದೆನ್ನುವುದನ್ನು ಸ್ವಲ್ಪವೂ ಯೋಚನೆ ಮಾಡದೆ ಅವಸರ ಅವಸರವಾಗಿ ಈ ಮಸೂದೆಯನ್ನು ಮಾಡಿದೆ.

ನಮ್ಮ ರೆವಿನ್ಯು ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟಿನಲ್ಲಿ ಹೇಳಿದರು

"When compared to some other vocation agriculture is not a paying profession."

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸದ್ಯ ಅವರಾದರೂ ತಿಳಿದುಕೊಂಡಿದ್ದಾರಲ್ಲ. ಸಂತೋಷದ ವಿಷಯ. ಈ ಉದ್ಯೋಗ ಏತಕ್ಕೆ ಲಾಭದಾಯಕವಾಗಿಲ್ಲ ಏತಕ್ಕೆ ಪೇಯಿಂಗ್ ಆಗಿಲ್ಲ ವೆಂದು ಸ್ವಲ್ಪ ಯೋಚನೆಮಾಡಿದರೆ ಸಾಕು. ಅದು ಯಾರಿಗೂ ಸುಮ್ಮನೆ ನೀರು ಕುಡಿದಷ್ಟು ಸುಲಭವಾದ ಉದ್ಯೋಗವಲ್ಲ, ಅದು ಕಷ್ಟತರವಾದ ಉದ್ಯೋಗ. ರೂಪಾಯಿ ಬಿತ್ತಿಬಿಟ್ಟು ಕಾಸನ್ನು ಹಾರ್ವೆಸ್ಟ್ ಮಾಡಬೇಕು, ಆ ಕಾಸನ್ನೂ ಆರಿಸಿಕೊಳ್ಳಬೇಕು. ಎಷ್ಟೋ ಕಷ್ಟವಿದ್ದರೂ, ಎಷ್ಟೋ ಕಷ್ಟಬಂದರೂ ಹತಾಶರಾಗದೆ, ನಿರಾಶರಾಗದೆ ತಲೆಕೊಟ್ಟು ಎದೆಕೊಟ್ಟು ಕೆಲಸಮಾಡಬೇಕಾದ ಕಸಬು. ಇಷ್ಟು ಕಷ್ಟತರವಾದ ಕಸಬಾದ್ದ ರಿಂದ ಸಾಧಾರಣವಾಗಿ ಎಲ್ಲಾ ರೈತಾಪಿ ಜನಗಳಿಗೂ ಗಾಳಿಗೆ ಕೈಗುದ್ದಿ ಏಕೆ ಕೈನೋಯಿಸಿಕೊಳ್ಳಬೇಕು, ಸುಲಭವಾದ ನೌಕರಿ ಸಿಕ್ಕಿಬಿಟ್ಟರೆ ಏಕೆ ಕಷ್ಟಪಟ್ಟು ಈ ಕಸಬಿನಿಂದ ಜೀವನನಡೆಸಬೇಕು ಎನ್ನುವ ಮನೋಭಾವ ಬಂದಿದೆ. ಎಲ್ಲ ವರ್ಗಗಳಲ್ಲಿಯೂ ಈ ಮನೋಭಾವ ಸರ್ವಸಾಧಾರಣವಾಗಿ ಬಂದಿದೆ. ಲ್ಯಾಂಡ್ ಟು ದಿ ಲ್ಯಾಂಡ್‌ಲೆಸ್, ಲ್ಯಾಂಡ್ ಟು ದಿ ಟಿಲ್ಲರ್ ಮುಂತಾದ ಕೆಲಸಕ್ಕೆ ಬಾರದ ಮಂತ್ರಗಳನ್ನು ಜಪಿಸಿಕೊಂಡು, ಯಾರು ಧೈರ್ಯವಾಗಿ ಇಂಡಸ್ಟ್ರಿಯಸ್ಸಾಗಿ ವ್ಯವಸಾಯ ಮಾಡುತ್ತಿದ್ದಾರೋ, ಯಾರು ನ್ಯಾಷನಲ್ ವೆಲ್ತ್ ಇಂಕ್ರೀಸ್ ಮಾಡುತ್ತಿದ್ದಾರೋ, ಅವರನ್ನು ಈ ಮಸೂದೆಯಿಂದ ಭೂಗತ ಮಾಡುವುದಕ್ಕೆ ಹೊರಟಿದ್ದೀರಿ. ನಿಜವಾಗಿ ಯೋಚನೆ ಮಾಡಿನೋಡಿದರೆ, ಬಾಕಿ ಕಸಬುಗಳಲ್ಲಿ ತೊಡಗಿರುವವರನ್ನೆಲ್ಲ ಬಿಟ್ಟು ಭೂಮಾಲಿಕನಿಗೇ ಇಂಥ ಒಂದು ಪರಿಮಿತಿ ತರಬೇಕೆಂದು ನಮ್ಮ ದೇಶದಲ್ಲಿ ಅವನನ್ನೇ ಏತಕ್ಕೆ ಆರಿಸಿಕೊಂಡರೋ ನನಗೆ ಅರ್ಥವಾಗುವುದಿಲ್ಲ. ಭೂಮಿ ಪ್ರಕೃತಿಯಿಂದ ಬಂದಂಥ ಕಾಣಿಕೆ, ಇದು ಎಲ್ಲರ ಸ್ವತ್ತೆಂದು ಬಹಳ ಸುಲಭವಾಗಿ ಜನಹೇಳುತ್ತಾ ಇದ್ದಾರೆ. ಇದು ಎಷ್ಟು ಸತ್ಯವೋ ಅಷ್ಟೇ ತಪ್ಪು ತಿಳುವಳಿಕೆಯಿಂದ ಕೂಡಿದೆ ಎಂದು ಹೇಳಬೇಕು.

ಹಳ್ಳಿಗಳಲ್ಲಿ ಬಹಳ ಬಡತನವಿದೆ, ನಿಜ; ಇದನ್ನು ಯಾರೂ deny ಮಾಡಲು ಸಾಧ್ಯವಿಲ್ಲ. ವ್ಯವಸಾಯದ ಜೀವನವನ್ನು ನೋಡಿದರೆ ಅದು ಬಹಳ ಕಷ್ಟ ಜೀವನ, ನಿಜ, ಆದರೆ ಬಡ ರೈತಾಪಿ ಜನಗಳಿಗೆ ಜಮೀನನ್ನು ಇದ್ದವರಿಂದ ಕಿತ್ತು ಹಂಚಿಕೊಟ್ಟರೆ, ಅವರ ಬಡತನ ನಿವಾರಣೆ ಮಾಡಿದಂತಾಗುವುದಿಲ್ಲ. ಅದು ಬರೀ ಅಪಹಾಸ್ಯದ ಸಮಾಚಾರ. ಮೆಕಾನೈಸ್ಡ್ ವ್ಯವಸಾಯ ಎಲ್ಲೆಲ್ಲಿಯೂ ಪ್ರಸಿದ್ಧವಾಗುತ್ತಿರುವ ಕಾಲದಲ್ಲಿ ಅದಕ್ಕೆ ತಗಲಬಹುದಾದ ವೆಚ್ಚ ಸಾಧಾರಣವಾಗಿ ಎಲ್ಲರಿಗೂ ಗೊತ್ತಿರುವ ವಿಚಾರ. ಬರೀ ಪಾಲಸಿ, ಪಾಲಿಸಿ ಎಂದು ಬಡರೈತರಿಗೆ ಜಮೀನು ಹಂಚಿಕೊಟ್ಟು ಬಿಟ್ಟು ಅಧಿಕ ಆಹಾರ ಉತ್ಪತ್ತಿ ಮಾಡುತ್ತೇವೆನ್ನುವುದು ಭ್ರಾಂತಿಯೋ ಸ್ವಪ್ನವೋ ಅದು ಮಸೂದೆ ಮಂಡಿಸಿದವರಿಗೇ ಗೊತ್ತಿರಬೇಕು. ನಮಗೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳಾದರೂ ನೆರೆಹೊರೆ ಪ್ರದೇಶಗಳ ಪ್ರಗತಿಯ ಜೊತೆಗೆ ಕಂಪೀಟ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೇಗೆ ಸಾಧ್ಯವಾಗುತ್ತದೆ? ಕ್ರೆಡಿಟ್‌ವರ್ದಿನೆಸ್ ಏನಾದರೂ ಹಾಳಾದರೆ, ನೇಗಿಲಿಗೆ ಎತ್ತು ಕಟ್ಟುವ ಬದಲು ಅದಕ್ಕೆ ನಮ್ಮ ತಲೆಯನ್ನೇ ಕಟ್ಟುವ ಕಾಲ ಖಂಡಿತ ಬರುತ್ತದೆ. ರೈತಾಪಿ ಜನಗಳ ಇಂಟರೆಸ್ಟ್ ಇದ್ದರೆ ಈ ಭೂಮಿ ಹಂಚುವ ನಾಟಕಬೇಡ. ಸ್ಮಾಲ್‌ಸ್ಕೇಲ್ ಇಂಡಸ್ಟ್ರಿ, ಕಾಟೇಜ್ ಇಂಡಸ್ಟ್ರಿ ಸ್ಥಾಪನೆಮಾಡಿ ಎಲ್ಲರಿಗೂ ಹಂಚಿಕೊಡಬೇಕೆಂದು ನಾನು ನಮ್ರತೆಯಿಂದ ಸೂಚಿಸುತ್ತೇನೆ.

Mr. SPEAKER.—The House will now adjourn and meet again at 3-30 P.M.

The House rose at Forty Minutes past Twelve of the Clock and re-assembled at Thirty Minutes past Three of the Clock.

[MR. SPEAKER in the Chair]

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ರೈತಾಪಿ ಜನಗಳ ಇಂಟರೆಸ್ಟ್ ಇದ್ದರೆ, ಸರ್ಕಾರಕ್ಕೆ ಭೂಮಿಯನ್ನು ತೆಗೆದುಕೊಂಡು ಹಂಚುವುದಕ್ಕೆ ಬದಲು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್, ಕಾಟೇಜ್ ಇಂಡಸ್ಟ್ರೀಸ್ ಮತ್ತು ಬಿಗ್ಗರ್ ಇಂಡಸ್ಟ್ರೀಸ್ ಷುರುಮಾಡಿ ಜಮೀನನ್ನು ಅವಲಂಬಿಸಿದ್ದು ಕಳೆದುಕೊಂಡಿರುವವರಿಗೆ ಒದಗಿಸಬೇಕೆಂದು ಈ ಹಿಂದೆ ಹೇಳುತ್ತಿದ್ದೆ.

ಎಲ್ಲಾ ಮುಂದುವರಿದ ದೇಶಗಳನ್ನು ನೋಡಿದರೆ ಜನರನ್ನೆಲ್ಲಾ ಕೈಗಾರಿಕೆಯ ಕಡೆಗೆ ಎಳೆಯುತ್ತಾರೆಯೇ ಹೊರತು ತಿರುಗಿ ಭೂಮಿಗೆ ಯಾರೂ ತಳ್ಳುವುದಿಲ್ಲ. ಇಂಡಸ್ಟ್ರೀಸ್ ಸ್ಥಾಪಿಸುವ ಉದ್ದೇಶ ದಿನೇ ದಿನೇ ಹಳ್ಳಿಗಳ ಬಡತನ ನಿವಾರಣೆ ಮಾಡಬೇಕೆಂಬುದು. ಹಸಿವನ್ನು ನೀಗಿಸುವ ಅಮೃತವೇ ಅದು ಎಂದು ಹೇಳಿದರೆ ಹೆಚ್ಚಲ್ಲ. ಹೊಟ್ಟೆಯ ಹಸಿವು ನೀಗಲು ಭೂಮಿ ಅಗತ್ಯವೆಂದು ಹೇಳುವುದು ಸ್ವಲ್ಪ ಅತಿಶಯೋಕ್ತಿಯೆಂದು ಕಾಣುತ್ತದೆ. ಭೂಮಿ ಹಂಚಬೇಕೆಂಬ ಅಭಿಪ್ರಾಯವನ್ನಿಟ್ಟುಕೊಂಡಿರುವ ಸರ್ಕಾರ ಮೊದಲು ತಮ್ಮಲ್ಲಿರುವ ಭೂಮಿಯನ್ನು ಹದಮಾಡಿ ಹಂಚುವುದಕ್ಕೆ ಏರ್ಪಾಡುಮಾಡಬೇಕು. ಹಾಗೆ ಮಾಡುವುದರಿಂದ ನ್ಯಾಷನಲ್ ವೆಲ್ತ್ ಹೆಚ್ಚಿ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಿದಂತಾಗುತ್ತದೆ. ಅದನ್ನು ಬಿಟ್ಟು ಜಮೀನನ್ನು ತೆಗೆದುಕೊಂಡು ಆಬಾದುಮಾಡಿರುವವರಿಂದ ಕಿತ್ತು ಎಲ್ಲರಿಗೂ ಹಂಚಿದರೆ ಅದರಿಂದ ಯಾರಿಗೂ ನ್ಯಾಯವನ್ನು ದೊರಕಿಸಿದ ಹಾಗಾಗುವುದಿಲ್ಲ. ಅದೂ ಅಲ್ಲದೆ ಹೆಚ್ಚಾಗಿ ವ್ಯವಸಾಯ ಮಾಡುವುದಕ್ಕೆ ಆಸಕ್ತಿಯಿಲ್ಲದಿರುವವರಿಗೆ ಜಮೀನು ಹಂಚುವುದರಿಂದ ವ್ಯವಸಾಯ ಮಾಡುತ್ತಾರೆಂಬ ಖಾತರಿಯೂ ಕೂಡ ಇರುವುದಿಲ್ಲ. ಭೂಮಿಯಲ್ಲಿ ನಿಜವಾಗಿಯೂ ಆಸಕ್ತರಾಗಿರುವವರು ಚೆನ್ನಾಗಿ ಬೆಳೆಯುತ್ತಾರೆ. ಹಿಂದಿನಿಂದ ಜಮೀನನ್ನು ಶೇಖರಿಸಿರುವ ಜಮೀನುದಾರರು ಕೆಲಸಮಾಡದ ಸೋಮಾರಿಗಳಿಂದಲೇ ತೆಗೆದುಕೊಂಡು ಶೇಖರಿಸಿದ್ದಾರೆ. ಯಾರದಾದರೂ ತಲೆ ಹೊಡೆದಾಗಲಿ, ಯಾರನ್ನಾದರೂ ಖೂನಿಮಾಡಿಯಾಗಲಿ ಜಮೀನನ್ನು ಸಂಪಾದಿಸಿರುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಕಬ್ಬಳಿಯವರು ಮಾಡದೆ ಇರಬಹುದು, ಬೇರೆಯವರು ಮಾಡಿರಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಮ್ಮ ಮೈಸೂರಿನಲ್ಲಿಲ್ಲ, ಹೈದರಾಬಾದಿನಲ್ಲಿ ಮಾಡಿರಬಹುದು ಏಕೆಂದರೆ ಶ್ರೀ ವೀರೇಂದ್ರ ಪಾಟೀಲರ ಭಾಷಣ ಹಾಗೆ ಅರ್ಥ ಕೊಡುವಂತೆ ಇತ್ತು.

ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಹೈದರಾಬಾದಿನವರೂ ಮಾಡಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಯಾರು ಭೂಮಿಗೆ ತನುಮನಧನವನ್ನರ್ಪಿಸಿ ಉತ್ತಮ ಸ್ಥಿತಿಗೆ ತಂದಿರುತ್ತಾರೋ ಯಾರು ನ್ಯಾಷನಲ್ ವೆಲ್ತ್ ಹೆಚ್ಚಿಸಿರುತ್ತಾರೋ ಅವರಿಂದ ಭೂಮಿ ಕಸಿದುಕೊಂಡು ಬೇರೆಯವರಿಗೆ ಕೊಡುವುದಕ್ಕಿಂತ ಅಧರ್ಮದ ಮತ್ತು ಅನ್ಯಾಯದ ಕೆಲಸ ಬೇರೆ ಯಾವುದೂ ಇಲ್ಲವೆಂದು ನಿಸ್ಸಂದೇಹವಾಗಿ ಹೇಳುತ್ತೇನೆ. ಇಷ್ಟೆಲ್ಲಾ ಅನ್ಯಾಯದಿಂದ ಕೂಡಿರುವ ಮಸೂದೆ ಜಾರಿಗೆ ಬರಲೇಬೇಕೆಂದು ಹಟಹಿಡಿದಿರುವಾಗ ಬಾಕಿ ಉದ್ಯಮಗಳಿಗೆ, ಅವುಗಳಿಂದ ಬರುವ ವರಮಾನಗಳಿಗೆ ಪರಿಮಿತಿ ಏಕೆತರಲಿಲ್ಲ? ಅವಕ್ಕೆ ತರದೆ ಭೂಮಿಯಿಂದ ಬರತಕ್ಕಂಥ ಉತ್ಪತ್ತಿಗೆ ಮಾತ್ರ ನೀವು ಪರಿಮಿತಿ ತರುವುದು ಸ್ವಲ್ಪವೂ ಸರಿಯಲ್ಲ. ಉದಾಹರಣೆಗೆ ವಕೀಲಿ, ವೈದ್ಯಕೀಯ ವೃತ್ತಿ, ಸರ್ಕಾರಿನೌಕರಿ ಇರುತ್ತವೆ, ಅದರಿಂದ ಒಂದಕ್ಕೆ ಹತ್ತರಷ್ಟು ಆದಾಯವಿರುತ್ತದೆ; ಅಂಗಡಿ, ಫ್ಯಾಕ್ಟರಿ, ಮಿಲ್ಲು, ಸಿನೀಮಾ, ಕಂಟ್ರ್ಯಾಕ್ಟ್‌ಮಾಡುವುದು, ಶ್ರೀ ಮುಕ್ಕಣ್ಣಪ್ಪನವರು ಹೇಳಿದಹಾಗೆ ಸೇಂದಿ ಕಂಟ್ರಾಕ್ಟ್ ಇವೆಲ್ಲಾ ಇರಬಹುದು. ಅವುಗಳಿಗೆ ಪರಿಮಿತಿ ಹಾಕಿ ಅನಂತರ ಭೂಮಿಗೆ ಪರಿಮಿತಿ ತರಬೇಕು. ಅದನ್ನೆಲ್ಲಾ ಬಿಟ್ಟು ಮೊದಲು ಅಗ್ರಿಕಲ್ಚರಲ್ ಇಂಡಸ್ಟ್ರಿಗೆ ಪರಿಮಿತಿ ತರುವುದು ಸ್ವಲ್ಪವೂ ಸರಿಯಲ್ಲ. ಪಟ್ಟಣಗಳಲ್ಲಿ ಪುಣ್ಯವಂತರು ಜಾಸ್ತಿಯಿದ್ದಾರೆ, ಭಿಕ್ಷುಕರು ಮತ್ತೂ ಜಾಸ್ತಿ. ಹಳ್ಳಿಗಳಲ್ಲಿ ಐಶ್ವರ್ಯವಂತರೇ ಕಡಮೆ, ಬಡವರು ಅದಕ್ಕೆ ತಕ್ಕ ಹಾಗೆ ಇದ್ದಾರೆ. ಹಾಗಿರುವಾಗ ಪಟ್ಟಣಗಳ economic ಸುಧಾರಣೆ ಬಿಟ್ಟು ಹಳ್ಳಿಗಳಲ್ಲೇಕೆ ಮೊದಲು ಜಮೀನು ಸುಧಾರಣೆ ತರುತ್ತೀದ್ದೀರಿ? ಪಟ್ಟಣಗಳಲ್ಲಿ ಮೊದಲು ಸುಧಾರಿಸಿದರೆ ಹಳ್ಳಿಗಳು ತಾವೇ ಸುಧಾರಿಸಿಕೊಳ್ಳುತ್ತವೆ.

ಈ ಮಸೂದೆಯಲ್ಲಿರುವ ಪರಿಮಿತಿ ನಿಗದಿ ಮಾಡುವ ವಿಷಯ ಸ್ವಲ್ಪವೂ ಸರಿಯಿಲ್ಲವೆಂದು ಹೇಳುತ್ತೇನೆ. ಜತ್ತಿ ಸಮಿತಿ 5,400 ರೂಪಾಯಿಗಳ ಪರಿಮಿತಿಯಿರಬೇಕೆಂದು ಹೇಳಿದರೆ ನಿಮ್ಮ ಮಸೂದೆ ಪ್ರಕಾರ 3,600 ರೂಪಾಯಿಗಳಿಗೆ ಅದು ಇಳಿಯಿತು. ಯಾವ ಆಧಾರವಮೇಲೆ ಹಿಡುವಳಿ ನಿಗದಿಮಾಡಿದ್ದಾರೆಂಬುದು ಯಾರಿಗೂ ಅರ್ಥವಾಗುವುದಿಲ್ಲ. ಇಷ್ಟು ದಿವಸ ಎಲ್ಲಾ ವರ್ಗದ ಜನಗಳೂ ಅವರವರ ಯೋಗ್ಯತೆಗೆ ಅನುಸಾರವಾಗಿ ಎಲ್ಲಾ ವಿಧದಲ್ಲೂ ಒಂದೇ ಸಮನಾಗಿ ಬಾಳಿರುವಾಗ, ಭೂಮಾಲೀಕರ standard of life ಮಾತ್ರ ಇಳಿಸುವಂತೆ ಭೂಮಿಯ ಉತ್ಪತ್ತಿಯ ಬಗ್ಗೆ ಮಾತ್ರ 3,200 ರೂಪಾಯಿಗಳ ಮಿತಿಮಾಡಿರುವುದು ಉಚಿತವಲ್ಲ. ಪಟ್ಟಣಗಳಲ್ಲಿ ವಾಸಮಾಡುತ್ತಿರುವ ಜಡ್ಜಿಗಳು ಅಥವಾ ಮಂತ್ರಿಗಳು ಅಥವಾ ಐ.ಎ.ಎಸ್. ಐ.ಸಿ.ಎಸ್. ಅಫೀಸರುಗಳು ಅಥವಾ ಎನ್.ಜಿ.ಓ. ಗಳು ಅಥವಾ ಚಪ್ರಾಸಿಗಳು ಇವರುಗಳಲ್ಲಿ ರೈತರು ಯಾರ ಸಮಾನರಾಗಿರಬೇಕು ಎಂದು ನಿರ್ಧಾರಮಾಡಿದ್ದೀರಿ ಎಂಬುದನ್ನು ಮಂತ್ರಿಗಳು ದಯವಿಟ್ಟು ಯೋಚನೆ ಮಾಡಿ ಅವರ ಜವಾಬಿನಲ್ಲಿ ಹೇಳಬೇಕು. ಒಬ್ಬರ ಸ್ಟ್ಯಾಂಡರ್ಡ್ ಅಫ್ ಲಿವಿಂಗ್ ಜಾಸ್ತಿಮಾಡುವುದು, ಇನ್ನೊಬ್ಬರದನ್ನು ಇಳಿಸುವುದು ಸರಿಯಲ್ಲ. ಈಗ ಅಷ್ಟು ಮಾತ್ರ ನಡೆಯುತ್ತದೆ. ಇದರಿಂದ ಸರ್ಕಾರದ ಬಡತನ ಹೆಚ್ಚುತ್ತದೆಯೇ ಹೊರತು ಜಾಸ್ತಿ ಉದ್ಯೋಗ ಕಲ್ಪಿಸಿದಂತಾಗುವುದಿಲ್ಲ.

ಜಮೀನು ತೆಗೆದುಕೊಂಡು ಪರಿಹಾರ ಕೊಡುವ ವಿಧಾನ ನೋಡಿದರೆ ಆಶ್ಚರ್ಯವಾಗುತ್ತದೆ. ಮಸೂದೆಯ ಪ್ರಕಾರ ಪರಿಹಾರವನ್ನು ಕಂತುಗಳಲ್ಲಿ ಪಡೆಯಬೇಕು, ಪೂರ್ಣ ಹಣ ಪಾವತಿಯಾಗಲು 20 ವರ್ಷಗಳು ಬೇಕು ಎಂದರೆ ಇಂಡಿಯನ್ ಸ್ಟ್ಯಾಟಿಸ್‌ಟಿಕ್ಸ್ ಪ್ರಕಾರ ಅದು ಒಬ್ಬ ಮನುಷ್ಯನ ಜೀವಮಾನವೇ ಆಗಿರುತ್ತದೆ. ಇದು ಊಟಕ್ಕಿಲ್ಲದಿರುವ ಉಪ್ಪಿನಕಾಯಿಯೇ ಸರಿ. ಇಷ್ಟು ಅನ್ಯಾಯಕ್ಕೆ ಅವಕಾಶ ಕೊಡಬಾರದು. ಭೂಮಾಲೀಕರು ಬೇರೆ ಉದ್ಯೋಗಗಳನ್ನವಲಂಬಿಸಲು ಅನುಕೂಲವಾಗುವಂತೆ ಸರ್ಕಾರ ಅನ್ಯಾಯವಾಗುತ್ತಿರುವ ಭೂಮಾಲೀಕರಿಗೆ ಜಮೀನು ತೆಗೆದುಕೊಂಡ ಕೂಡಲೆ ಮಾರ್ಕೆಟ್‌ದರದಂತೆ ಹಣಕೊಡಬೇಕು. ಇಲ್ಲದಿದ್ದರೆ ಈ ಸರ್ಕಾರ ಬಹಳ ಅಧರ್ಮ ಮಾಡಿದಂತಾಗುತ್ತದೆ.

ಈಗ ಮಸೂದೆಯಲ್ಲಿ ಸೇರಿಸಿರುವ ಕೋ-ಅಪರೇಟಿವ್ ಫಾರ್ಮಿಂಗ್ ನಮ್ಮ ದೇಶದಲ್ಲಿ ಜಯಪ್ರದವಾಗುವುದಿಲ್ಲ. ನಮ್ಮ ದೇಶದಲ್ಲಿರುವ ಸೋಷಿಯಲ್ ಹ್ಯಾಬಿಟ್ಸ್ ಮುಂತಾದುವುಗಳ ಮಧ್ಯೆ ಕೋ-ಅಪರೇಟಿವ್ ಫಾರ್ಮಿಂಗ್ ನಡೆಯುವ ಬಗೆ ಹೇಗೆ ಎಂದು ಬಹಳವಾಗಿ ಯೋಚನೆಮಾಡಬೇಕಾಗಿದೆ.

ಇಲ್ಲಿ ನಾನಾ ಜಾತಿಯವರು ಕೂಡಿದ್ದಾರೆ. ನಮ್ಮ customs ಉಳಿಸಿಕೊಂಡು ಒಬ್ಬರಿಗೊಬ್ಬರಿಗೆ ಅನುಸರಿಸಿಕೊಂಡು ಕೆಲಸ ಮಾಡುವುದು ನಿಜವಾಗಿಯೂ ಅಸಾಧ್ಯ. ಮೊದಲೇ ವಿದ್ಯೆ ಇಲ್ಲ. ವಿದ್ಯೆ ಇಲ್ಲದ ಈ ಜನರು ಒಬ್ಬ ಮ್ಯಾನೇಜರನ ಹಿಡಿತಕ್ಕೆ ಒಳಗಾಗಿ, ಈಗಾಗಲೆ ನೀರು ಕುಡಿಯುತ್ತಿದ್ದೇವೆ—ಮುಂದೆ ಮಣ್ಣು ಮುಕ್ಕಬೇಕಾಗುತ್ತದೆ. ಈ ಮ್ಯಾನೇಜರ್ ಆದರೂ ಯಾರು? ಈಗತಾನೆ ಹೊಸದಾಗಿ ಕಾಲೇಜಿನಲ್ಲಿ ವ್ಯಾಸಂಗಮಾಡಿಕೊಂಡು ಬಂದು ವ್ಯವಸಾಯ ಹಾಗೆ ಮಾಡಬೇಕು, ಹೀಗೆ ಮಾಡಬೇಕು, ಹಾಗೆ ಲೆಕ್ಕ ಇಡಬೇಕು, ಹೀಗೆ ಲೆಕ್ಕ ಇಡಬೇಕು ಎಂದು ಹೇಳತಕ್ಕ ಮ್ಯಾನೇಜರು ಅವರು. ಈ ಹೊಸ ಮ್ಯಾನೇಜರುಗಳು ಈಗ ಎಲ್ಲರ ಆಶೋತ್ತರಗಳಿಗನುಸಾರವಾಗಿ ನಡೆಯತಕ್ಕ ಮ್ಯಾನೇಜರುಗಳಾದರೆ ಹಿಂದೆ ಇದ್ದ ಭೂ ಮಾಲೀಕರು ಯಾರೋ ಅವರಿಗೆ ಈ ಮ್ಯಾನೇಜರ್‌ತನ ತಲೆತಲಾಂತರದಿಂದ ಬಂದಿರುತ್ತದೆ. ಆ manager capacity ಅವರಲ್ಲಿ ರಕ್ತಗತವಾಗಿರುತ್ತದೆ. ಆ ಮ್ಯಾನೇಜರುಗಳನ್ನು ಓಡಿಸಿ ಹೊಸ ಮ್ಯಾನೇಜರುಗಳಿಗೆ ಈ ಕೆಲಸ ಕೊಡಬೇಕೆಂದು ಹೇಳುವುದರಲ್ಲಿ ಏನು ಒಳಗುಟ್ಟು, ಏನು ಅರ್ಥವಿದೆಯೋ ಒಂದೂ ಅರ್ಥವಾಗುತ್ತಿಲ್ಲ. ಈ ಕೋ-ಅಪರೇಟೀವ್ ಫಾರ್ಮಿಂಗನ್ನ socially, economically and educationally ಈ ಎಲ್ಲಾ ವಿಧದಲ್ಲೂ ಮುಂದುವರಿದ ದೇಶಗಳಾದ ಯೂಗೋಸ್ಲೇವಿಯಾ, ಜರ್ಮನಿ, ಪೋಲೆಂಡು ಇಲ್ಲೆಲ್ಲಾ ಮಾಡಿ ಏನೂ ನಡೆಯದೆ, ಜಯಶೀಲರಾಗದೇ ಪಟ್ಟಣಗಳಲ್ಲಿರತಕ್ಕವರಿಗೆ ಸೀಲಿಂಗ್ ಹಾಕಿದರೂ ಹಳ್ಳಿಗಳಲ್ಲಿ ಭೂ ಪರಿಮಿತಿ ಬೇಡ ಎಂದು ತೆಗೆದುಹಾಕಿದರು. ಇದನ್ನು ಗಮನದಲ್ಲಿಟ್ಟುಕೊಂಡು ನಾವು ಮುಂದೆ ತಪ್ಪು ಮಾಡದಹಾಗೆ ಎಚ್ಚರಿಕೆಯಿಂದ ಇರುವುದು ಬಹಳ ಜರೂರಾಗಿದೆ.

ಇನ್ನು ಈ ಮಸೂದೆಯಲ್ಲಿ absentee landlord ಮತ್ತು tenants ವಿಚಾರದಲ್ಲಿ ಕೆಲವು ಭಾಗ ಏನೂ ಸರಿಯಾಗಿಲ್ಲ ಎಂದು ನಾನು ಭಾವಿಸುತ್ತೇನೆ. Appointed day, ಆ ದಿವಸ ನೋಟಿಫೈ ಮಾಡಿದ ನಂತರ ಗೇಣೀದಾರರೆಲ್ಲಾ ಭೂಮಾಲೀಕರಾಗುವ ಸಂದರ್ಭದಲ್ಲಿ ಕೆಲವರಿಗೆ ಗೇಣಿಗೆ ಕೊಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ಅಂಥವರು ಯಾರೆಂದರೆ ಹೆಣ್ಣುಮಕ್ಕಳು, ರೋಗದಿಂದ ನರಳುತ್ತಿರುವವರು, ಇವರಿಗೆ ಗೇಣಿ ಎಷ್ಟು? ಕಾಲು ಭಾಗ. ಇದರಲ್ಲಿ ಕಂದಾಯದ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸಂದಾಯವಾಗಬೇಕು! ಕಂದಾಯ ಕೊಡುವ ಹೆಣ್ಣು ಮಕ್ಕಳು, ತಲೆ ಕೆಟ್ಟಿರುವವರು, ರೋಗಸ್ತರು! ಇವರೆಲ್ಲಾ ಹೋಗಿ ಎಷ್ಟು ಬೆಳೆ ಆಯಿತು ಎಂದು ಕೇಳುವವರೇ? ಕೊಟ್ಟಿದ್ದನ್ನು ಶೇಖರಿಸಿ ತೆಗೆದುಕೊಂಡು ಬರುವ ಸಾಹಸಿಗರೇ ಇವರೆಲ್ಲಾ! ಇದೂ ಒಂದು ಸಾಹಸದ ಮಸೂದೆಯೇ!

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರದಲ್ಲಿ ತಮ್ಮ ಸಲಹೆಯೇನು?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಆ ಗೇಣಿದಾರರು ಅವರುಗಳಿಗೆ ಗೊತ್ತಾದ ಗೇಣಿ ತಪ್ಪದೆ ಕೊಡಬೇಕು; ಗೇಣಿ ಕೊಡುವುದಕ್ಕೆ ತೊಂದರೆಮಾಡಿದ ಪಕ್ಷದಲ್ಲಿ ಏನಾದರೂ ಒಂದು ಕಾನೂನುಮಾಡಿ, ಮೂರುವರ್ಷಗಳ ಕಾಲ ಕೊಡದಿದ್ದರೆ ಅವರನ್ನು ಬಿಡಿಸಬಹುದು, ಬೇರೆಯವರಿಗೆ ಕೊಡಬಹುದು ಎನ್ನುವುದಕ್ಕೆ ಬದಲಾಗಿ ಒಂದುವರ್ಷ ತಪ್ಪಿದರೆ ಅವರಿಂದ ಜಮೀನು ಕಸಿದುಕೊಳ್ಳುವ ಅನುಕೂಲ ಮಾಡಿಕೊಡಬೇಕು. ಈ ಅನುಕೂಲ ಮಾಡಿಕೊಟ್ಟರೆ ಬಹುಶಃ ಅವನಿಗೆ ಜಮೀನು ಹೊರಟುಹೋಗುತ್ತದೆ ಎಂಬ ಭಯ ಬಂದು ಸಲೀಸಾಗಿ ಕೊಡಬೇಕಾದ ಗೇಣಿ ತಂದು ಕೊಡಬಹುದು; ಹಾಗೆ ಕೊಡದಿದ್ದರೆ ಅವನ ಚರ, ಸ್ಥಿರ ಸ್ವತ್ತು ಯಾವುದರಿಂದಲಾದರೂ ಗೇಣಿ ಕೂಡಲೇ ವಸೂಲು ಮಾಡಿಕೊಳ್ಳುವುದಕ್ಕೆ ಈ ಕೈಲಾಗದ ಜನರಿಗೆ ಅವಕಾಶ ಮಾಡಿಕೊಡಬೇಕು. ಈ ಕಾನೂನು ಪ್ರಕಾರ ಗೇಣೀದಾರರಿಗೆ ಸರ್ವ ವಿಧವಾದ ಅನುಕೂಲವನ್ನೂ ಮಾಡಿಕೊಟ್ಟಿದ್ದೀರಿ. ಅವರಿಂದ ದೇಶ ಆಗಲಿ, ಜನ ಆಗಲಿ ಏನಾದರೂ ನಿರೀಕ್ಷಿಸುತ್ತದೆಯೇ ಎಂದರೆ ಏನೂ ಇಲ್ಲ. ಅವರಿಗೆ ಎಲ್ಲ ವಿಧವಾದ ಅನುಕೂಲವನ್ನೂ ಒದಗಿಸಿಕೊಟ್ಟಮೇಲೆ ಅವರು ಉತ್ತಮರೀತಿಯಲ್ಲಿ ವ್ಯವಸಾಯ ಮಾಡಿ ಇಂತಿಷ್ಟೇ ಬೆಳೆ ಬೆಳೆಯಬೇಕು ಎಂದು ಹೇಳಿ ಒಂದು ಮಿನಿಮಂ ನಿಗದಿಮಾಡಿ, ಅಷ್ಟು ಬೆಳೆಯದಿದ್ದರೆ ಅವನು ಆ ಭೂಮಿಯಲ್ಲಿ ವ್ಯವಸಾಯ ಮಾಡುವುದಕ್ಕೆ ಲಾಯಕ್ಕಲ್ಲ ಎಂದು ನಿಷ್ಕರ್ಷೆ ಮಾಡಬೇಕು. ಹಾಗಾದರೆ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಇದರಲ್ಲಿ ಇನ್ನೊಂದು ತಪ್ಪು ಏನು ಎಂದರೆ ಭೂಮಾಲೀಕ ತನ್ನ ಭೂಮಿಯಿರತಕ್ಕ ಹತ್ತುಮೈಲಿ ಪ್ರದೇಶದೊಳಗೇ ವಾಸಮಾಡಬೇಕೆಂದು ಇದೆ. ಇದು ಏನು ಅನ್ಯಾಯ? ಈ ವೇಗಯುಗದಲ್ಲಿ ಇವತ್ತಿನ ದಿವಸ ನೀವು ಬೆಳಿಗ್ಗೆ ಇಲ್ಲಿರುತ್ತೀರಿ, ಸಾಯಂಕಾಲ ದೆಹಲಿಯಲ್ಲಿ ಇರುತ್ತೀರಿ. ಹತ್ತುಮೈಲಿ ಒಳಗೆ ಕುಳಿತುಕೊಂಡು ನೀನು ಅಲ್ಲೇ ಇರಬೇಕೆಂದು ಹೇಳುವುದು ನಿಜವಾಗಿಯೂ ಅವರ ಮೂಲಭೂತ ಹಕ್ಕಿಗೆ ಧಕ್ಕೆತರುತ್ತದೆ, ಇದು ಖಂಡಿತವಾಗಿಯೂ ಕೂಡದು, ಇದನ್ನು ತೆಗೆಯಲೇಬೇಕು.

ಇನ್ನು ಒಂದೇ ಒಂದು ಅತ್ಯುತ್ತಮವಾದ ವಿಷಯ ಎಂದರೆ ಪ್ಲಾಂಟೇಷನ್ ವಿಷಯ. ಇದಕ್ಕೆ ವಿರುದ್ಧವಾಗಿ ಅನೇಕ ಸಹೋದರರು ಮಾತನಾಡಿದ್ದಾರೆ. ಬಹುಶಃ ಅವರಿಗೆ ಪ್ಲಾಂಟೇಷನ್ ವಿಚಾರದಲ್ಲಿ ಅದನ್ನು ಹೇಗೆ ಸಾಕುತ್ತಾರೆ ಅದನ್ನು ಹೇಗೆ ಬೆಳೆಸಬೇಕು ಎಂಬ ಕಲ್ಪನೆ ಎಳ್ಳಷ್ಟು ಸಹ ಇದ್ದಹಾಗೆ ಕಾಣುವುದಿಲ್ಲ. 10-15 ವರ್ಷ ಸಾಕಿ, ಅಲ್ಲಿಂದ ಯಾವವಿಧವಾದ ವರಮಾನವನ್ನೂ ನಿರೀಕ್ಷಿಸದೆ ಕೈಯಲ್ಲಿರತಕ್ಕ ದ್ರವ್ಯವನ್ನು ಖರ್ಚುಮಾಡಿ, ಮಕ್ಕಳನ್ನು ಸಾಕಿದ ಹಾಗೆ ಸಾಕಿದರೆ ಆಗ ಅದು ಒಂದು ತೋಟ ಎಂದು ಅನಿಸಿಕೊಳ್ಳುತ್ತದೆ. ಕಾಫಿ, ಅಡಿಕೆ, ತೆಂಗು ಈ ಎಲ್ಲಾ ಪ್ಲಾಂಟೇಷನ್‌ಗಳೂ ಹೆಚ್ಚು ಕಡಮೆ ಒಂದೇ ಆಗುತ್ತದೆ. ಮಕ್ಕಳು ವೃದ್ಧಾಪ್ಯದಲ್ಲಿ ನಮಗೇನಾದರೂ ಒಳ್ಳೆಯದು ಮಾಡಬಹುದು, ಸಾಕಬಹುದು ಎಂದು ಹೊಟ್ಟೆ ಬಟ್ಟೆ ಕಟ್ಟಿ ಸಾಕಿದಮೇಲೆ ಅವರ ಕೈಯಿಂದ ಆ ಮಕ್ಕಳನ್ನು ಕಸಿದುಕೊಂಡಷ್ಟು ಸಂಕಟ ಈ ಪ್ಲಾಂಟೇಷನ್ ಕಸಿದುಕೊಂಡರೆ ಆಗುತ್ತದೆ.

ಕೊನೆಯದಾಗಿ ಹೇಳಬೇಕೆಂದರೆ, ಈ ಮಸೂದೆಗೆ moral backbone ಎನ್ನುವುದೇ ಇಲ್ಲ. ಇದರಲ್ಲಿ ಬರೀ ರಾಜಕೀಯದ ಸ್ಟಂಟ್ ತುಂಬಿದೆ ಎಂದರೆ ಅದೇನೂ ಅತಿಶಯೋಕ್ತಿ ಅಲ್ಲ. ಆಡಳಿತದ ವ್ಯವಹಾರ ಒಡೆದು ಚೂರು ಆಗಿರುವುದು ಎಲ್ಲರಿಗೂ ತಿಳಿಯುತ್ತಾ ಇದೆ. ಕೋ-ಆಪರೇಟೀವ್ ಫಾರ್ಮಿಂಗ್, ಲ್ಯಾಂಡ್ ರಿಫಾರಂಸ್ ಎಂದು ಹೇಳಿ ಅವ್ಯವಸ್ಥೆಯನ್ನುಂಟುಮಾಡುವುದಕ್ಕಿಂತ ಇದ್ದದ್ದನ್ನು ಉಪಯೋಗಿಸಿಕೊಂಡು ಬಾಕಿ ವಿಚಾರದಲ್ಲಿ ಪ್ರಗತಿ ಸಾಧಿಸಿ ದೇಶದ ಕಲ್ಯಾಣಕ್ಕೆ ಪ್ರಯತ್ನಮಾಡಬೇಕಾದದ್ದು ಈಗ ಬಹಳ ಅಗತ್ಯವಾಗಿದೆ. ಇದುವರೆಗೂ ನಾವು ಅನೇಕ ಪ್ರಾಂತದಿಂದ ಬಂದ ನಮ್ಮ ಸಹೋದರರ ಮಾತುಗಳನ್ನ ಎಂಟು ದಿವಸದಿಂದ ಕೇಳುತ್ತಾ ಇದ್ದೇವೆ. ಮಂಗಳೂರಿನಿಂದ, ಹೈದರಾಬಾದಿನಿಂದ, ಮುಂಬೈ ಕರ್ನಾಟಕದಿಂದ ಬಂದವರು ವಿಶಿಷ್ಟವಾದ ಸಂಗತಿಗಳನ್ನು ಹೇಳಿದರು. ಮಂಗಳೂರಿನಿಂದ ಬಂದವರಲ್ಲಿ ಮೂಲಗೇಣಿ, ಅಳಿಯ ಸಂತಾನ ಈ ಪದ್ಧತಿಗಳೆಲ್ಲಾ ಇವೆ. ಭೂ ಮಾಲೀಕನಿಂದ ಭೂಮಿ ಕಿತ್ತುಕೊಂಡರೆ ಅವರೆಲ್ಲ ವ್ಯಾಗಬಾಂಡ್ಸ್ ಆಗುತ್ತಾರೆ. ಇಲ್ಲವೇ ಹಾಗೆ ಅವರಿಗೇ ಬಿಟ್ಟರೆ ಗೇಣೀದಾರರೆಲ್ಲ ಭಿಕ್ಷುಕರಾಗುತ್ತಾರೆ. ಆದ್ದರಿಂದ ಈಗ ನಡೆಯುತ್ತಿರುವ ಹಾಗೆಯೇ ನಡೆದುಕೊಳ್ಳಲಿ ಹಂಚಿಕೆ ಮಾಡಬೇಡಿ ಎಂದು ಅವರು ಹೇಳುತ್ತಾರೆ. ಹೈದರಾಬಾದಿನಿಂದ ಬಂದಿರುವವರು ಭೂಮಿ ಕಸಿದುಕೊಂಡು ಕೊಡುವುದು ಬಿಡುವುದು ನಮಗೆ ಇದೆಲ್ಲ ಬಹಳ ಹಳೆಯದಾಗಿದೆ. ಇಲ್ಲಿಯವರೆಗೆ ಭೂಮಿ ಕಳೆದುಕೊಂಡವರ ಸ್ಥಿತಿ ಅವರವರ ಹಣೆಬರಹ. ಆದ್ದರಿಂದ ಯಾರಿಂದ ಭೂಮಿ ಕಸಿದುಕೊಂಡರೂ ಅದಕ್ಕೆ ಪರಿಹಾರ ಕೊಡುವ ಜವಾಬ್ದಾರಿ ಸರ್ಕಾರದ್ದಾಗಕೂಡದು ಎಂದು ಹೇಳಿದರು. ತಲೆ ಒಡೆದು ಭೂಮಾಲೀಕನನ್ನು ಭೂಮಿ ಒಳಗೇ ತುಳಿಯುವ ಅಭ್ಯಾಸ ಅವರಿಗೆ ಬಹಳ ಇದೆ ಎಂದು ಆಯಿತು. ಬಹುಶಃ ಅಲ್ಲಿ ಅದೇ ತರಹ ಭೂಮಿ ಮಿಂಗಡಿಸಿದ್ದಾರೆಯೋ ಏನೋ? ಅದೇ ತರಹ ಅವರಿಗೆ ಬಿಟ್ಟುಕೊಡುವುದು ಒಳ್ಳೆಯದೆಂದು ಕಾಣುತ್ತದೆ! ಬೊಂಬಾಯಿನಿಂದ ಬಂದಿರುವವರು ಭೂಮಾಲೀಕನಿಂದ ಪರಿಹಾರ ಕೊಡದೆ ಜಮೀನು ಕಿತ್ತುಕೊಳ್ಳಬೇಕು, ನಾವು ಅದರಲ್ಲಿಯೂ ಪ್ರಗತಿಗಾಮಿಗಳಾಗಿದ್ದೇವೆ, ಇಲ್ಲಿಯೂ ಅದರಂತೆಯೇ ನಡೆಯಬೇಕು ಎಂಬರು. ಅವರ ಮನಸ್ಸಿನಲ್ಲಿರುವಂತೆಯೇ ಅಥವಾ ಅಕ್ಷರ ಶಾಸನದ ಪ್ರಕಾರವೇ, ಅಲ್ಲ ನಡೆಸುವುದು ಒಳ್ಳೆಯದು ಎಂದು ಹೇಳುತ್ತಾರೆ.

ನಮ್ಮ ಹಳೆಯ ಮೈಸೂರು ರಾಜ್ಯದಲ್ಲಿ ಭೂಮಾಲಕರು ಗೇಣಿದಾರರು ಇವರ ನಡುವೆ ಕಲಹವಿರಲಿಲ್ಲ. ಈಗ ಅಲ್ಪ ಸ್ವಲ್ಪ ಕಲಹವೇನೋ ಶುರುವಾಗಿದೆ. ನಮ್ಮ ಅಕ್ಕಪಕ್ಕದ ರಾಜ್ಯಗಳ ಪ್ರದೇಶವು ಈ ನಮ್ಮ ಹೊಸ ಮೈಸೂರು ರಾಜ್ಯದಲ್ಲಿ ಸೇರ್ಪಡೆಯಾದ ನಂತರ ಅವರುಗಳನ್ನು ನೋಡಿ ಅವರ influence ನಿಂದಲೇ ಕಲಹ ಪ್ರಾರಂಭವಾಗಿದೆ.

ಶ್ರೀಮತಿ ಬಸವರಾಜೇಶ್ವರಿ.—ಹೈದರಾಬಾದ ಕರ್ನಾಟಕ ಪ್ರದೇಶದಲ್ಲಿ Land Reforms Act ಜಾರಿಗೆ ಬಂದಿದೆ. ಮಾಲೀಕರಿಗೆ ಪರಿಹಾರ ಎಷ್ಟು

ಕೊಡಬೇಕು, ಸೀಲಿಂಗ್ ಎಷ್ಟು ಎನ್ನುವುದೆಲ್ಲಾ ಈಗಾಗಲೇ ನಿರ್ಧಾರವಾಗಿದೆ. ಕಾನೂನು ಪ್ರಕಾರ ಜಮೀನು ಯಾರದು, ಯಾರಿಗೆ ಪರಿಹಾರ ಕೊಡಬೇಕು ಎಂಬುದನ್ನು ಗೊತ್ತುಮಾಡಲಾಗಿದೆ. ಯಾರಿಗೂ ಅನ್ಯಾಯವಾಗದಂತೆ ಮಾಡಿದೆ ಅನ್ಯಾಯದಿಂದ ಭೂಮಾಲಿರಿಂದ ಜಮೀನು ಪಡೆದಿಲ್ಲ ಎನ್ನುವುದನ್ನು ಚೆನ್ನಾಗಿ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೈದರಾಬಾದಿಗೆ ನಾನೇನೂ ಹೋಗಿಲ್ಲ. ಅಲ್ಲಿಯ ಪರಿಸ್ಥಿತಿ ಏನಿದೆ ಎನ್ನುವುದು ನನಗೇನೂ ಗೊತ್ತಿಲ್ಲ. ಆದರೆ ಅಲ್ಲಿಂದ ಪ್ರತಿನಿಧಿಯಾಗಿ ಬಂದಿರುವ ಶ್ರೀಮಾನ್ ವೀರೇಂದ್ರ ಪಾಟೀಲರ ಭಾಷಣದ ಪ್ರಕಾರ ನಾನು ಮಾತನಾಡಿರುವುದು. ಇನ್ನು ಪರಿಹಾರ ಕೊಡುವ ವಿಚಾರದಲ್ಲಿ ವಿರೇಂದ್ರ ಪಾಟೀಲರ ಒಂದು ಮಾತು ಹೇಳಬೇಕಾಗಿದೆ. ಪರಿಹಾರವನ್ನು ಐದು ಪಟ್ಟು ಕೊಡಬೇಕೆಂದು ಹೇಳಿದ್ದಾರೆ. ಕಂದಾಯವು ಒಂದು ರೂಪಾಯಿ ಇದ್ದರೆ ಅದು ಐದು ರೂಪಾಯಿ ಆಗುತ್ತದೆ. ಅಲ್ಲಿ ಲಾವಣಿ ಅಥವಾ ಗೇಣಿ ಈ ರೀತಿ ಪಡಕೊಂಡಿದ್ದಾರೆ. ಬಹುಶಃ ಐದು ಸಾವಿರ ಎಕರೆ ಜಮೀನು ಇದ್ದರೆ 25 ಸಾವಿರ ರೂಪಾಯಿ ಬರಬೇಕೆಂದು ಆರೀತಿ ಮಾಡಿರಬಹುದು. ನಮ್ಮಲ್ಲಿ ಐದು ಸಾವಿರ ಎಕರೆ ಜಮೀನು ಇಟ್ಟುಕೊಂಡವರು ಯಾರೂ ಇಲ್ಲ. ನಮ್ಮಲ್ಲಿ ಜಹಗೀರದಾರರು ಇಲ್ಲ. ಅದಕ್ಕಾಗಿಯೇ ಹೈದರಾಬಾದ ಶಾಸನವು ನಮಗೆ ಸ್ವಲ್ಪವೂ ಸರಿ ಹೋಗುವದಿಲ್ಲ. ಈಗ ಆ ಶಾಸನವನ್ನು ಅನುಸರಿಸಬೇಕು ಎಂಬ ಒಂದು ಸೂಚನೆ ಇದೆ. ಪರಿಸ್ಥಿತಿಯು ಒಂದೊಂದುಕಡೆ ಒಂದೊಂದು ತರಹ ಇರುವಾಗ ನಮ್ಮ ರೆವೆನ್ಯೂ ಮಂತ್ರಿಗಳು integrated area ಕ್ಕೆಲ್ಲ ಒಂದು ಯೂನಿಫಾರಂ ಲಾ ಮಾಡುತ್ತೇನೆಂದು ಅನ್ಯಾಯವಾಗಿ ತಲೆ ಕಾಯಿಸಿಕೊಂಡು ತೊಂದರೆಪಡುವುದು ಬೇಡ. ಮೊದಲೇ ನಮ್ಮ ಕಂದಾಯ ಮಂತ್ರಿಗಳು ಅಶಕ್ತರಾಗಿದ್ದು ಸಣ್ಣ ಮನುಷ್ಯರಾಗಿರುವುದರಿಂದ ಈ ಕಾರ್ಯಕ್ಕೆ ಕೈಹಾಕಬೇಡಿ ಎಂದು ನಾನು ಬಹಳ ವಿನಯದಿಂದ ಅವರನ್ನು ಕೇಳಿಕೊಳ್ಳುತ್ತೇನೆ (ನಗು). ಇನ್ನು ಧಾರ್ಮಿಕ ಮತ್ತು ವಿದ್ಯಾಸಂಸ್ಥೆಗಳಿಗೆ ಇರತಕ್ಕ ಭೂಮಿಯ ವಿಚಾರದಲ್ಲಿ ಯಾವ ರೀತಿಯ ಅನ್ಯಾಯವಾಗದಂತೆ ಮಾಡುವುದು ಬಹಳ ಸೂಕ್ತವಾಗಿದೆಂದು ನಾನು ಹೇಳುತ್ತೇನೆ. ಈ ಮಸೂದೆಯಲ್ಲಿ ಇನ್ನೊಂದು ತಮಾಷೆ ಏನಿದೆ ಎಂದರೆ, Land Commission ನೇಮಕ ಮಾಡುವ ವಿಷಯ ಬಂದಿದೆ. ಈ ಕಮಿಷನ್ನಿಗೆ ಅಧ್ಯಕ್ಷರಾಗಿ ಒಬ್ಬ ಹೈಕೋರ್ಟ್ ಜಡ್ಜ ಇರಬೇಕೆಂದು ಇದೆ. ಈ ಅಧ್ಯಕ್ಷರಿಗೆ ಒಂದು ತಿಂಗಳಿಗೆ 3,500 ರೂಪಾಯಿ ಸಂಬಳ ಕೊಡಬೇಕಾಗುವುದು. ಒಂದು ತಿಂಗಳಿಗೆ ಒಟ್ಟು 15 ಸಾವಿರ ರೂಪಾಯಿ ಖರ್ಚು ವರ್ಷಕ್ಕೆ ಸೀಲಿಂಗ್ 3,600 ರೂಪಾಯಿ ಇರಬೇಕೆಂದು ನಿಗದಿ ಮಾಡುವುದಕ್ಕೆ ಒಬ್ಬ ಹೈ ಕೋರ್ಟ್ ಜಡ್ಜನಿಗೆ ತಿಂಗಳಿಗೆ 3,500 ರೂಪಾಯಿ ಸಂಬಳ ಕೊಡುವುದು ಈ ರೀತಿ ನಮ್ಮ ಸರಕಾರ ಹಣ ಖರ್ಚು ಮಾಡುವುದಾದರೆ ಅದೆಂಥಾ ಸೋಷಿಯಾಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ, ಸಮಾಜವಾದಿ ಸಮಾಜ ರಚನೆ ಮಾಡುತ್ತಾರೋ ಗೊತ್ತಿಲ್ಲ. ಹೀಗೆ ಮಾಡುವುದರಿಂದ ಸಮಾಜವಾದಿ ಸಮಾಜ ರಚನೆಯಾಗುತ್ತದೆಯೇ? ಆದುದರಿಂದ ಬಡ ಬೋರೇಗೌಡನಿಂದ ಸರಕಾರಕ್ಕೆ ದೊರೆತ State Fund ನ ಈ 15 ಸಾವಿರ ರೂಪಾಯಿಗಳನ್ನು ದರೋಬಿಟ್ಟು ಬೀದಿಗೆ ಚೆಲ್ಲಬೇಡಿ. ಯಾರಿಗೂ ಅನ್ಯಾಯವಾಗಬಾರದು ಎಂದು ನಾನು ಮಾನ್ಯ ರೆವೆನ್ಯೂ ಮಂತ್ರಿಗಳಿಗೆ ತಿಳಿಸಲಿಚ್ಛಿಸುತ್ತೇನೆ. ರೆವೆನ್ಯೂ ಇಲಾಖೆ ತಾಯಿ ಸಮಾನ ಎಂದು ಜನರ ಹೇಳಿಕೆ. ಹಾಗೆಯೇ ಮಕ್ಕಳೋಪಾದಿಯಲ್ಲಿದ್ದ ಜನರಿಗೆ ಅನ್ಯಾಯವಾಗದ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೊನೆಯದಾಗಿ, ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. P. PATIL (Hukkeri).—Sir, I may be permitted to speak sitting.

Mr. SPEAKER.—Yes. The Hon'ble Member can do so.

Sri C. M. ARUMUGHAM.—Sir, the Hon'ble Member piloted the Jatti Committee Report when he was Revenue Minister. His views are too wellknown.

Mr. SPEAKER.—I do not know his views. Let him speak.

***Sri M. P. PATIL.**—Sir, though I feel that we would not be able to make much provisions in the matter of land reforms through the provisions of this Bill, I would support the Bill for the reason that the Bill is a compromise between the various interests and also because it is not possible to resort to more progressive measures under the present circumstances.

Hon'ble Minister for Revenue, while speaking on this Bill earlier, had reminded us of the principle to which we are committed—that the tiller of the soil should become its owner or that the land must go to the tiller. I do not know whether he thinks that by this Bill he is going to give effect to this principle. If he thinks so, I would like to point out to him that he is mistaken. As a matter of fact, by this Bill we are not going to give the land to the tiller of the soil, but to the tenant. This Bill is meant for giving protection to the tenant or for giving the land to the tenant. As we all know, it is not only the tenant who tills the land, bwt there are a number of agricultural labourers also who work on land and in course of time should be made the owner of the lands they till. I feel that that is the ultimate objective of land reforms. I also feel that if this objective is at all to be achieved, it can be done only by resorting to co-operative farming. I

(SRI M. P. PATIL)

am convinced that the ultimate objective of land reforms is and should be co-operative farming.

Another object of land reforms is to distribute the land, though not equally to all those who work on land—to distribute it to as large a number of persons as would be possible under the present circumstances. From that point of view also, if we were to examine the provisions of this Bill, we would find no substantial achievement. For instance, the Hon'ble Revenue Minister himself has said in the Statement of Objects and Reasons that at the most, he will be able to secure only 2 lakhs of acres of surplus land for distribution to the landless people. It will be seen that these 2 lakhs acres will be 12 per cent of the total cultivable area of the State. Even though the Revenue Minister feels that he will be able to secure 2 lakhs acres, I doubt if he is likely to get as much land.

We will not be able to secure any substantial surplus area for distribution to the landless agricultural labourers as there are a number of loopholes in the provisions of this Bill. Let us take first of all the question of personal cultivation.

4 P.M.

Personal cultivation has been defined to mean "to cultivate land on one's own account—

(i) by one's own labour, or

(ii) by the labour of any member of one's family, or

(iii) by hired labour or by servants on wages payable in cash or kind but not in crop share under the personal supervision of oneself or any member of one's family, provided that the person exercising such personal supervision resides at a place not more than ten miles from the land,"

In my opinion sub-clause (iii) of this definition is the most mischievous provision in this Bill.

SRI KADIDAL MANJAPPA.—That is in accordance with the recommendation of the Planning Commission.

SRI M. P. PATIL.—I am only expressing my personal opinion and I am not referring to the recommendation of the Planning Commission. Even in Bombay we have found that this definition of "personal cultivation" has given a lot of scope to the landlords to evict the tenants and to see that their names are entered in the record of rights as personal cultivators of the land. I would request the Hon'ble Minister for Revenue to go to any village in the Bombay Karnatak area, stay there and examine the record of rights, call for the landlords and tenants and find out how many of the lands which are entered in the record of rights as being cultivated personally by the landlords are really being cultivated by the landlords. I would like to tell him that in many of the cases the landlo ds are not cultivating them personally. They have taken resignation from the tenants and further taken *noukarnama* from them. Even though the tenants are cultivating the lands as tenants, the official records will show that the lands are being personally cultivated by the landlords.

SRI KADIDAL MANJAPPA.—Most of the provisions contained here were taken from the skeleton Bill prepared at the time when my friend was the Revenue Minister.

SRI A. S. PATIL (Nargund).—What is the percentage of such lands which are actually being cultivated by tenants but are shown in the record of rights as being under personal cultivation by the landlords?

SRI M.P. PATIL.—I do not know the percentage. As far as the point raised by the Revenne Minister is concerned I want to say that I have not expressed my personal opinion at auy time. As far as the question raised by Sri A. S. Patil is concerned, what I want to say is that if not all landlords, at least some landlords have done this and I am prepared to convince the Revenue Minister about this fact. What I am saying is that the present definition leaves much scope for this practice.

SRI C. K. RAJAIAH SETTY.—When you were Revenue Minister had you taken any kind of steps to prevent

such fraudulent entries in the record of rights ?

Sri M. P. PATIL.—This question had not arisen in my period. On acconut of this definition, the records are not quite correct and in many cases the landlords will be evading the clause regarding ceiling. I am also aware of the fact that even though I object to this clause, this clause will have to be continued as I know there are some landlords who really and genuinely cultivate lands by personal supervision, but I would request the Revenue Minister to consider whether the same definition should be applied even to future occupants or tenants whom you are going to create as occupants. As the provision of the Bill stands, the definition applies not only to the present owners but also to future occupants.

Sri KADIDAL MANJAPPA.—As a peasant's son I may say that it is impossible to cultivate even 5 acres without the assistance of somebody.

Dr. R. NAGAN GOWDA (Hospet).—Can anybody cultivate even 2 acres without the help of hired labour at the time of harvest ?

Sri M. P. PATIL.—I never said that the lands should be cultivated personally by the family members of the owner only. What I say is that he may engage labour as he will have to engage labour, but he must himself labour in the field or any member of his family must labour in the field. I suggest that the definition should be modified in the case of future tenants and occupants who are likely to be created in future.

Sri G. VENKATAI GOWDA (Palaiyam).—Do you mean that there must be physical strain on the part of the owner or any member of his family ?

Sri M. P. PATIL.—What I say is that this condition should apply only to tenants and occupants who are likely to be created in future.

As regards family holding, as far as I can see, family holding is taken as the basis for all the provisions in this Bill, but surprisingly enough the word "family" itself is not defined. For instance, while defining family holding, it is stated that it is such a holding which can be cultivated by a family of five members. I do not understand what is meant by "five members." What is the object of laying down "family of five members" ? In a family of five members there may ba only one working man and all the others may be non-working. In some families there may be two or three working members or all the membere may be working. For all of them we are going to give equal land under the present provisions. I think this is not doing justice to them and therefore it is quite necessary to define "family". The word "family" is not defined at all and so I would suggest that the word family should be defined and it should be made very clear which persons are included in the word family.

Sri G. VENKATAI GOWDA.—What is to happen to those minors who are entirly dependent on the parents ?

Sri M. P. PATIL.—What I say is that the word family must be defined very clearly I do not say that the minors should not be included or should be included ; but what I say is that the word 'family' has been kept vague and therefore the word 'family' should be defined and should be made clear as to who are included in the family. This is very important from two or three points of view. For instance, under 'personal cultivation' it is stated "under the personal supervision of oneself or any member of one's family". Here it is not clear as to who are the members of the family. For instance, take a family consisting of husband, wife, daughter and son-in-law. Supposing the son-in-law is there. Will the son-in-law be a member of the family or not ? There are many other things. Therefore, I would say that the word 'family' should be defined.

Coming to the point of ceiling, now it is said that every land-owner will have the right to reserve for himself land to the extent of three family holdings. As far as the provisions of this Bill are concerned, it is said that after the Land Commission decide the issue of family holding, the owner has to give notice to the Commission that such lands are to be reserved for him

(SRI M. P. PATIL)

and that he is entitled to resume those lands for personal cultivation during a period of three years from that date. Supposing the land-owner does not resume the lands for personal cultivation even during the period of three years; what is the position of the tenant afterwards? I do not know whether the tenants of those lands will be made occupants just as the tenants of non-resumable lands will be made occupants or whether they will continue as tenants of landlords permanently. As far as I read the Bill, I did not find anything clear on this point.

Sri KADIDAL MANJAPPA.—Which is the clause you are referring to?

Sri M. P. PATIL.—Clause on ceiling. I don't remember the number of the clause. After the Land Commission defines 'family holding' the land owner will have the right to reserve land to the extent of three family holdings for personal cultivation. Another clause says that he can resume those lands for personal cultivation during a period of three years. Suppose the landlord does not resume land for personal cultivation during the period of three years; then what will happen after that period?

Sri KADIDAL MANJAPPA.—After that, they will vest in the State.

Sri M. P. PATIL.—So the lands will vest in the Government or in the State and I want to know whether the tenants will be made occupants.

Sri KADIDAL MANJAPPA.—Once the lands vest in the Government or in the State, the tenants, if they so desire, become occupants after paying premium in accordance with the provisions of this Bill, or they may continue as tenants for some time and thereafter the Government can treat the land as surplus land.

Sri M. P. PATIL.—It means they will become occupants. I wanted to suggest that. Now one of the objects of the Bill is to see that the lands are not transferred to non-agriculturists and there is a provision to that effect. But at the same time the tenancy also is made heritable. Now it is possible that the tenant is personally cultivating the lands to-day and he dies; but after his death we cannot say that all his heirs are cultivators and will cultivate the land personally. So under the circumstances it will be seen that if the lands are distributed, if the tenancy is distributed according to the present law, even the non-agriculturist heirs will get the share in the tenancy.

Sri KADIDAL MANJAPPA.—But if they do not cultivate personally, they are liable to be evicted by the landlords.

Sri M. P. PATIL.—I am coming to that point. Now you say that he can cultivate if he cultivates personally. If the definition of 'personal cultivation' as worded in this Bill is kept, again the difficulty is, even though he may not cultivate personally, it will be entered as 'cultivated personally.' Therefore, I am insisting that so far as the future tenants and the owners are concerned, the definition of 'personal cultivation' should be modified. As far as the tenancy is concerned, it should be heritable only to those heirs who would cultivate the land personally and not to all the heirs.

Sri S. D. KOTHAVALE.—Inheritance cannot be prevented by any Act of this House. It is a Central subject. We cannot in any way disturb the order of inheritance by passing any legislation here. It is a matter for the Parliament to legislate upon. Inheritance and the consequent result therefrom cannot be legislated upon by this House.

Sri M. P. PATIL.—I understand that point. Now we are making it heritable according to the provisions of the Bill. As we make it heritable we can regulate the number of heirs, we can put a restriction that it should be heritable to those heirs who would cultivate the land personally.

Regarding the ceiling, I would suggest that the ceiling of three family holdings should not be allowed to the future tenants.

Sir, the object of the Bill is to give occupation to the tenant to maintain himself and we have decided that one family holding is sufficient for him for cultivation. In the circumstances, I

cannot understand why the tenant is allowed to cultivate lands to the extent of three family holdings. If this concession were to be given to the tenants, many of the heirs or sons of the tenants in the future are likely to be non-agriculturists and again another class of landlords will be created and another problem of landlordism will arise. Therefore I suggest that as far as the tenants are concerned, the ceiling should be one family holding and that will be consistent with the land reforms also.

Sri KADIDAL MANJAPPA.—Is it for the future tenants or for the present tenants also?

Sri M. P. PATIL.—For the future tenants.

Sri M. RAMAPPA.—Will it not be a discriminatory legislation because in the agriculturist class itself how can you fix two ceilings, one ceiling for one class and another ceiling for another class?

Sri KADIDAL MANJAPPA.—It will not amount to discrimination.

Sri M. P. PATIL.—I will now come to the question of compensation. There also, I feel that it will not be proper to give some compensation to all the landlords. For instance, there will be many people who have small pieces of land and they may be depending upon compensation only. But there are many landlords who do not depend upon compensation at all. Under the circumstances, instead of fixing the same compensation to all the landlords, why should not a graded scale on the basis of acreage be fixed? For instance, we say that compensation should be 15 times the rent of the land. This may be made applicable to small areas of five acres, 10 acres and 20 acres; but why not you reduce the compensation where the excess land is about 100 acres? Such people are rich people and they are in a position to bear the losses if there are any. At the same time the poor will be benefited. Therefore I would suggest that instead of fixing the same rate of compensation for all the landlords, compensation should be graded on acreage basis for big landlords.

Dr. R. NAGAN GOWDA.—I would request the Hon'ble Member to give us an idea of what kind of gradation should be made. He was Minister for Revenue for a long time and Minister for Co-operation for a longer time. I think he must be able to give a very definite suggestion in this matter.

Sri M. P. PATIL.—What should be the graded scale is a matter for the Government or the House to go into.

Sri M. RAMAPPA.—The Planning Commission have suggested a graded scale.

Sri M. P. PATIL.—As far as I am concerned, I do not know what the Planning Commission have given. I have consulted some legal experts and they say if it is properly regulated then it can be provided in the Bill itself. It is for the Hon'ble the Revenue Minister to examine this question.

Sri KADIDAL MANJAPPA.—I believe they have done so in Kerala. In Kerala slab basis has been adopted.

Sri M. P. PATIL.—In the case of lands compensation should be on the quantum of rent. For instance for the tenants who are to be made the occupants of non-resumable lands, compensation should be 15 times the rent minus the assessment to be given to Government. For other lands which would be resumed by Government the compensation to be paid should be 15 times the net annual income. This compensation for the lands which are vested in the Government and which is based on the net annual income will be on the higher side and the tenants or the poor agricultural labourers will not be able to cultivate the lands. Therefore I would suggest that in the case of such lands, *i.e.*, land which would be vested in the Government and which would be distributed under section 18, the compensation should be on the basis of rent minus the assessment of the Government. There is another small point which I would like to bring to the notice of the Hon'ble Minister i.e., the provision in the Bombay Act. In this Bill it is provided that the maximum rent should be one-fourth of the gross produce of the bagayet lands and one-fifth of the gross produce in the case of other lands.

(SRI M. P. PATIL)

However, wherever the rent payable by the tenant was less than the maximum rent under any contract or law before the appointed day such rent should prevail—that is what is said here. But under the Bombay Act the maximum rent that has been fixed is five times the assessment or Rs. 20 per acre whichever is less. And I want to bring it to the notice of the Hon'ble Minister that in some parts of the Bombay Karnatak area this has caused heavy losses to the small holders. Especially the holdings in the area where the lands are fertile and where the rates are high are very small and majority of the owners of the lands are small holders. The settlement was effected 40 years ago and therefore the assessment is very low. In some cases I can point out that where the assessment is four or five rupees per acre the rent is about Rs. 100 per acre. So I would request the Hon'ble Minister to consider this question and see that that provision is deleted from the Bill so that there will be uniformity for the whole State.

Sri KADIDAL MANJAPPA.—Supposing by virtue of contract the tenant is entitled to pay only one-sixth or lower than that.

Sri M. P. PATIL.—I am objecting to the rent which is fixed by operation of the law and not by contract.

It will be seen that the point which I have raised is important because compensation is based upon rent and if rent is very low naturally the compensation to be paid for the land will also be very low and much below the market rate. From that point of view, it is necessary to delete that provision from this Bill.

4-30 P.M.

Regarding the provisions of co-operative farming, personally I am of the opinion that they should be completely deleted. As you all know, the Government of India and the Prime Minister have declared from time to time that co-operative farming is to be introduced in India on a purely voluntary basis and, as the Hon'ble the Leader of the Opposition pointed out, there is no doubt these provisions contain a sort of coercion. Therefore' I would suggest that these provisions should be deleted. Moreover, though the Government of India has declared its policy, still it has not prepared the scheme for co-operative farming. Hon'ble Members may be aware that a committee has been appointed under the chairmanship of the Hon'ble Member Sri Nijalingappa and that committee has to submit its report yet. I believe that the Government of India will prepare the scheme for co-operative farming after that report is received by it. It is, therefore, advisable to wait for the scheme which would be prepared by the Government of India and then see whether any legislation is necessary in this connection. Moreover, in my opinion the Land Reforms Bill is not the proper place for including the provisions about co-operative farming. If any legislation is necessary for co-operative farming, it should find a place under the Co-operative Act. I would therefore suggest with a view to avoid the controversy on this issue that the provisions which are made regarding co-operative farming may be dropped. I would, however, point out that this does not mean that Government should give up co-operative farming. Personally, I am of the opinion that co-operative farming is the only method which is going to help India out of the present situation.

Sri C. J. MUCKANNAPPA.—Have you tried co-operative farming at any time in Bombay?

Mr. SPEAKER.—He was in charge of 'Co-operation' for five years in Bombay.

Sri M. P. PATIL.—I shall give my personal experience in Bombay. In Bombay, when I was in charge of Co-operation there were about 200 to 250 Co-operative Farming Societies. Co-operative farming is divided into four categories. For instance, collective farming, joint farming, tenant farming and better farming. What we call co-operative farming today consists of joint farming only. Tenant farming and better farming are not included ie the present programme of co-operativn farming. You all know that the Prime

Minister has declared that collective farming will not be suitable for India and therefore there should be only joint farming. In Bombay, out of 250 societies there were about 15 or 20 societies which are of the type of collective farming or joint farming. There also the experience was that some of them succeeded very well and some of them have failed. The societies where the Manager had faith in co-operative farming and was an efficient and self less man, have succeeded beyond expectation and even today there are some 10 to 15 societies in Bombay State which have succeeded very well and which would serve as a model for the whole of the country but the other societies have failed because they had no Manager who had faith in co-operative farming and who did not know the A.B.C. of co-operative farming. For instance, in many of these societies Government servants were appointed as Managers. Those Government servants in the first place had no faith in co-operative farming. Similarly they had not studied co-operative farming and therefore they could not manage the societies properly. Therefore they failed. In many of these societies which exist in India today, we are giving wages to the members on a daily basis and therefore they have no incentive to work more. Whether they work or not they would get the wages for the whole day. Therefore, they do not put forth their maximum effort. If only work is given on piece work basis which in Kannada is known as "ಗುತ್ತಿಗೆದಾರರಿಗೆ ಕೆಲಸಕೊಡುವುದು" the members will put forth their efforts to the fullest extent with a view to earn more. This is called the 'earn system' or piece work system. Unfortunately in many of the societies which exist in India today this piece work system is not introduced and therefore many of them have failed, but where the piece work system is introduced they have succeeded. This is my experience in Bombay and even today I feel that for co-operative farming to succeed, there are two or three conditions which are quite essential. The first condition is that there should be absolutely no coercion. All the members who join the co-operative farming society must know the consequences and must join it on a purely voluntary basis. The second condition is that the society should have a Manager who has faith in co-operative farming and he must be a self-less man who will devote his life for that work. Co-operative farming is not a simple thing. There will be a number of difficulties and if the Manager has no faith in the work, naturally whenever he comes across difficulties he will think that co-operative farming is of no use and should be given up. But if he has faith in it, then and then only he will be able to face the difficulties and surmount them and see that co-operative farming becomes a success. The third thing is that, as far as the Government is concerned, it should give adequate and timely help to these societies. As far as I have seen both in Mysore and Bombay, such timely help is not given to the societies. The loan is sanctioned in the month of May or July or August when the loan is not necessary. It is not given in adequate quantity. It is not given in time also. All this red-tapism in the Government machinery is in a way responsible for the failure of co-operative farming societies. I would suggest that as far as the Government is concerned, they should give whatever help they can, by way of loan or subsidy—it may be given adequately and in time. In that case, I am quite sure that the co-operative farming would be a soccess.

Of course there are many other things which we will not be able to discuss now. I only say that if these three or four conditions are fulfilled, there is a likelihood of these co-operative farming societies succeeding in India.

It may be said that it is very difficult to make it successful. We have got small holdings in the country and it is difficult for the small cultivators to make their venture economic. In these circumstances, the only way is that they should come together, have a compact and substantial area which they can cultivate by collective effort and cultivate efficiently also and they will get the benefit

(SRI M. P. PATIL)

out of that cultivation. Therefore, as far as small holders in the country are concerned, the only solution for them is co-operative farming. Wherever there are difficulties in the way of small holders, we should resort to that programme and try our best to make that programme successful.

Sir, I would refer to another point in this Bill which would go against the interests of the tenant. Sir, it is provided in this Bill that after the surplus land is taken and it is vested in the Government, the tenant of the land should be made permanent and occupancy rights should be conferred on him and that tenant should pay the price of the land or compensation for the land in 20 instalments. It is also provided that if that tenant fails to pay three or four instalments continuously, then, the occupancy rights would not be given to him and he should be evicted from the land. There is another provision about the lands which are vested in the Government for such reasons, that the Commission will be free to distribute these lands to the non-tenants. Under the circumstances, it will be seen that simply because the tenant is not in a position to purchase the land, he will not continue as tenant, but will be evicted. That will be an injustice and therefore I would suggest that, wherever a tenant is incapable of purchasing the land and pay the instalments, he should not be evicted from the land, but should be continued as a tenant of the Government until he gets the capacity to purchase the land.

SRI S. D. KOTHAVALE.—May I bring to the notice of the Hon'ble Member that this compensation is made payable in 20 instalments and each instalment is equal to the fair-rent and if he fails to pay that rent, can he be continued to be in possession of the land thereafter also? It cannot be.

SRI M. P. PATIL.—I request the Hon'ble Member to consider the provisions of clause 91. There it is provided that the compensation would be 15 times the net annual income. Even assessment is deducted.

SRI S. D. KOTHAVALE.—That is another matter and that refers to ceiling surplus land to be distributed among the landless labour. Even in the case of the tenants on whom occupancy rights will be conferred he will not be eligible to hold the lands if he fails to pay the instalments which are equal to almost the fair-rent. What is the good of continuing the land in his name?

SRI G. VENKATAI GOWDA.—Where is it said that if a default is committed in paying instalments, he should be evicted?

SRI M. P. PATIL.—Sir, I am not able to follow the argument. It is mentioned here that if he fails to pay instalments continuously for three or four years, the land should be taken away from him. I am suggesting that if he fails to pay the instalment, he may be continued as tenant of the Government. He should not be evicted.

SRI VEERENDRA PATIL (Chincholi).—Even if he fails to pay compensation, he loses only the right of purchase, but he will continue to be a tenant. It is said so in the Bill.

SRI M. P. PATIL.—If that is the provision I have nothing to say but if the privision is as I have interpreted, I would suggest that the tenant may be continued to be a tenant under the Government without being evicted.

Sir, these are the few remarks which I wanted to make on this Bill and with these remarks, I support the Bill.

(Sri C. K. Rajaiah Setty Who rors was permitted to speak.)

SRI C. M. ARUMUGHAM.—Then I will go, Sir.

MR. SPEAKER.—I do not like any member threatening me like that. I have my own method, may be that it is not to the liking of Sri Arumugham. I gave him a chance in the morning. He did not turn up. What shall I do?

(Sri C. M. Arumugham left the Hall.)

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಸಭಾಪತಿಗಳೇ, ನಾಲ್ಕಾರು ದಿವಸಗಳಿಂದ ಅನೇಕ ಪಕ್ಷಗಳ ಸದಸ್ಯರು ಮಾಡಿದ ಭಾಷಣಗಳನ್ನು ನೋಡಿ ನನಗೆ ಬಹಳ ವ್ಯಥೆ ಉಂಟಾಗುತ್ತದೆ.

ಕಾಂಗ್ರೆಸ್ಸಿನವರೂ ಸೋಷಿಯಲಿಸಮ್ ಎಂದು ಹೇಳು ತ್ತಾರೆ; ನಮ್ಮ ಸೋಷಿಯಲಿಸ್ಟ್ ಪಾರ್ಟಿಯವರೂ ಸೋಷಿಯಲಿಸಮ್ ಎಂದು ಹೇಳುತ್ತಾರೆ. ಕಮ್ಯೂನಿಷ್ಟರೂ ಸೋಷಿಯಲಿಸಮ್ ಎಂದು ಹೇಳುತ್ತಾರೆ. ಇವು ಯಾವ ತರಹ ಸೋಷಿಯಲಿಸಂ ಎಂದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ ಯಾರಿಗೆ ಯಾವುದ ರಲ್ಲಿ ಅನುಕೂಲವಿದೆಯೋ, ಅದನ್ನು ಬಿಟ್ಟು, ಮಿಕ್ಕದ್ದಕ್ಕೆ ಅನ್ವಯಿಸಬೇಕೆಂದು ಹೇಳುತ್ತಾರೆ. ನಾಲ್ಕನೆಯ ತರಹ "ಅನುಕೂಲ ಸಿಂಧು ಸೋಷಿಯಲಿಸಮ್" ಎಂಬುದು ಉತ್ಪತ್ತಿಯಾಗಬೇಕೋ ಏನೋ ಎಂದು ನನಗನ್ನಿಸುತ್ತದೆ. ಏಕೆಂದರೆ ಇತರ ಸೆಕ್ಟಾರುಗಳಲ್ಲಿ ಸೀಲಿಂಗ್ ಬೇಕು. ಆದರೆ ಅದು ಎಷ್ಟರಮಟ್ಟಿಗೆ ಸಾಧ್ಯ? ಸೋಷಿಯಲಿಸಮ್ಮನ್ನು ನಾವು ಯಾವರೀತಿಯಾಗಿ ಅನುಸರಿಸಬೇಕೆಂದರೆ, ಕೆಲವಕ್ಕೆ ಹೆಚ್ಚಿನ ಸೀಲಿಂಗ್ ತರಬಹುದು, ಇನ್ನು ಕೆಲವಕ್ಕೆ ಹೆಚ್ಚಿನ ತೆರಿಗೆ ಹಾಕಿ ಸೋಷಿಯಲಿಸಮ್ ತರಬಹುದು. ಇತರ ದೇಶಗಳಲ್ಲಿ ಕ್ರಾಂತಿಯಾಗದೆ ಒಂದೇ ಸಾರಿ ಎಲ್ಲಾ ಭಾಗಗಳಿಗೂ ಕೂಡ ಈ ತರಹದ ಸೀಲಿಂಗು ತರುವುದು ಸಾಧ್ಯವಾಗಿಲ್ಲ. ಈವಾಗ ನಮ್ಮ ಭರತಖಂಡದಲ್ಲಿ, ಇಂಡಿಯನ್ ಏರ್‌ಲೈನ್ಸ್, ರೈಲ್ವೇಸ್, ಟ್ರಾನ್ಸ್‌ಪೋರ್ಟ್, ಬ್ಯಾಂಕ್ಸ್, ಇನ್‌ಷೂರೆನ್ಸ್ ಕಂಪೆನೀಸ್, ಇವುಗಳೆಲ್ಲವನ್ನೂ ಸರ್ಕಾರದವರು ತಾವೇ ತೆಗೆದುಕೊಂಡುನಡೆಸುತ್ತಿರುತ್ತಾರೆ, ಹೀಗಿರುವಲ್ಲಿ ಒಂದೊಂದೂ ಕ್ರಮವಾಗಿ ಬರಬೇಕೇ ವಿನಾ ಎಲ್ಲಾ ಸೆಕ್ಟಾರುಗಳಿಗೂ ಹಾಗೆಯೇ ಬರುವುದಕ್ಕೆ ಸಾಧ್ಯವಿಲ್ಲ. ಕೇಂದ್ರ ಸರ್ಕಾರದವರು ಷೆಡ್ಯೂಲ್ "A" ಇಂಡಸ್ಟ್ರಿಗಳನ್ನು ತಾವೇ ವಹಿಸಿಕೊಂಡ್ಡು ಮಿಕ್ಕವನ್ನು ಪ್ರೈವೇಟ್ ಸೆಕ್ಟಾರುಗಳಿಗೆ ಬಿಟ್ಟು, ಸೀಲಿಂಗನ್ನು ಒಂದು ರೀತಿಯಲ್ಲಿ ಜಾರಿಗೆ ಬರುವ ಏರ್ಪಾಡುಮಾಡಿದ್ದಾರೆ. ಇವತ್ತಿನದಿವಸ ನಾವು ಯಾವ ಬಿಲ್ಲಿನ ಮೂಲ ಅಂಶವನ್ನು ನೋಡಿದ ಪಕ್ಷದಲ್ಲಿ ಇದು ಎಷ್ಟು ಜನಗಳಿಗೆ ಅನ್ವಯಿಸುತ್ತದೆ? It is a big vessel with a big board but it is empty ಎನ್ನುವ ರೀತಿಯಲ್ಲಿದೆ. ಏಕೆಂದರೆ ಈ ದಿವಸ ಮಾನ್ಯ ವೆಂಕಟೇಗೌಡರು ಈ ಬಿಲ್ಲಿನಲ್ಲಿ ಅನೇಕ ಕಲಮುಗಳಲ್ಲಿ ಹೊಸದಾಗಿ ಟೆನೆಂಟುಗಳನ್ನು ಮಾಡುವುದಕ್ಕೆ ಅವಕಾಶವಿದೆ ಹಾಗಾಗಬಾರದು ಎಂದು ಹೇಳಿದರು. ನನಗೆ ತೋರುವುದು ಕೇವಲ ಟೆನೆಂಟುಗಳನ್ನು ಮಾಡುವುದಲ್ಲ, ಹೊಸದಾಗಿ ಅನೇಕ ಜನ ಲ್ಯಾಂಡ್ ಲಾರ್ಡುಗಳನ್ನು ಕ್ರಿಯೇಟ್ ಮಾಡುವುದಕ್ಕೂ ಅವಕಾಶವಿದೆ ಎಂದು. ಈ ದಿವಸ ಬಿಲ್ಲು ಬಂದಮೇಲೆ ದೇಶದಲ್ಲಿ ಆಗುತ್ತಿರುವ ಪ್ರತಿಕ್ರಿಯೆ ನೋಡಿದರೆ ಬಹಳ ಅನ್ಯಾಯದ ಪರಂಪರೆ ನಡೆಯುತ್ತಿದೆ. ಏಕೆಂದರೆ ನಮ್ಮ ಸರ್ಕಾರ ಈ ಬಿಲ್ಲಿನ ಬಗ್ಗೆ ಅವಶ್ಯಕವಾದ ಎಚ್ಚರಿಕೆಯನ್ನು ತೆಗೆದುಕೊಂಡಿಲ್ಲವೆಂದು ನಾನು ಹೇಳಬೇಕಾಗಿದೆ. ಈ ಬಿಲ್ಲಿನಲ್ಲಿ ಮುಖ್ಯವಾಗಿ ಭೂಸುಧಾರಣೆ ವಿಚಾರದಲ್ಲಿ ನಾಲ್ಕೈದು ಅಂಶಗಳನ್ನು ಕೊಟ್ಟಿದ್ದಾರೆ. To what lands ceiling should apply; the level at which ceiling is generally fixed; what exemption should be made; the rate of compensation for the lands which are acquired and redistribution of lands which are acquired—ಈ ವಿಚಾರಗಳು ಅಡಕವಾಗಿವೆ. ಆದರೆ steps necessary to prevent *mala fide* transfers ಏನು ಸರ್ಕಾರ ತೆಗೆದುಕೊಂಡಿದೆಯೆಂದು ನೋಡಿದರೆ ಇದುವರೆಗೂ ಏನೂ ತೆಗೆದುಕೊಂಡಿಲ್ಲವೆಂದು ಹೇಳಬೇಕಾಗಿದೆ. ಏಕೆಂದರೆ ಅನೇಕ ರಾಜಕಾರಣಿಗಳು ಇದನ್ನು ದುರುಪಯೋಗಮಾಡಿಕೊಂಡು ತಮ್ಮ ಸ್ವಂತ ಆಸ್ತಿಯನ್ನು ಯಾವರೀತಿ ವಿಲೆ ಮಾಡಬೇಕೋ ಆ ರೀತಿ ಮಾಡುತ್ತಿದ್ದಾರೆ. ಈ ದಿವಸ ಮಾಜಿ ಮುಖ್ಯಮಂತ್ರಿಗಳು ದೆಹಲಿಯಿಂದ ಬಂದು ತಮಗೆ ಸೇರಿದ ಜೋಡಿ ಗ್ರಾಮದಲ್ಲಿ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಜಮೀನನ್ನು ವಿಲೇವಾರಿ ಮಾಡಿದರೆಂದು ಕೇಳಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಅವರು ಬಹಳ ಹಿಂದೆಯೇ ಫೈಸಲು ಮಾಡಿಕೊಂಡಿದ್ದಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಕೆಲವು ಇನಾಂದಾರರು ಹಾಗಾಗುತ್ತದೆ, ಹೀಗಾಗುತ್ತದೆ ಎಂದು ನೂರು ಎಕರೆ ತರಿ ಜಮೀನನ್ನು ಕೂಡ ಬರೆಸಿಕೊಂಡಿದ್ದಾರೆಂದು ತಿಳಿದುಬಂದಿದೆ; ಆಕ್ಷೇಪ ಮಾಡುವುದಿಲ್ಲ. ಹೀಗೆ ಅನೇಕರು ಮಾಡಿದ್ದಾರೆಂದು ತಿಳಿದು ಬಂದಿದೆ. ಹಾಗಿರುವಾಗ ಈ ಭೂಸುಧಾರಣೆ ಏಕಿರಬೇಕು? ಹೀಗೆ ಕಳ್ಳತನದಲ್ಲಿ ಎಷ್ಟೋ ಹಂಚಿಕೆಯಾಗಿದೆ. ಹೆಸರಿಗೆ ಎರಡು ಮೂರು ಸಂಸಾರಗಳೆಂದು ಹೇಳಿಕೊಂಡು ಸೀಲಿಂಗ್ ಪರಿಮಿತಿಗಿಂತ ಜಾಸ್ತಿ ಹೋಗದಹಾಗೆ ಎಷ್ಟೋಜನ ಜಮೀನನ್ನು ಹಂಚಿಕೊಂಡು ಭಾಗವಾಗಿದ್ದಾರೆ. ಪ್ಲಾಂಟೇಷನ್ ಏನಿದೆ ಅದನ್ನು ಇಷ್ಟರವರೆಗೆ ಕನ್‌ವರ್ಟ್ ಮಾಡಬಹುದೆಂದಿದೆ. ಅನೇಕರು ಸೀಲಿಂಗ್ ಲಿಮಿಟ್‌ಗಿಂತ ಜಾಸ್ತಿಯಿರುವುದನ್ನು ಪ್ಲಾಂಟೇಷನ್ನಿಗೆ ಕನ್‌ವರ್ಟ್ ಮಾಡಿದ್ದಾರೆ. ಈ ಬಿಲ್ಲಿನಲ್ಲಿ ಕೆಲವಕ್ಕೆ ರಿಯಾಯಿತಿ, ವಿನಾಯಿತಿ ಕೊಟ್ಟಿದ್ದೇವೆ. ಈ ರಿಯಾಯಿತಿ, ವಿನಾಯಿತಿ ಕೊಟ್ಟಿದ್ದರೂ ಕೂಡ ಸೀಲಿಂಗ್ ಲಿಮಿಟ್‌ವರೆಗೆ ಜಮೀನಿಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಆದುದರಿಂದ ಯಾವ ವಿನಾಯಿತಿ, ರಿಯಾಯಿತಿ ಇದೆಯೋ ಅಂಥ ಜಮೀನು ಮಾಲೀಕರು ಕೂಡ ಪುನಃ ಸೀಲಿಂಗ್ ಲಿಮಿಟ್‌ವರೆಗೆ ಜಮೀನಿಟ್ಟುಕೊಳ್ಳಬಹುದೆಂದು ಹೇಳುವುದರಲ್ಲಿ ಅರ್ಥವಿದೆಯೆ? ರೆವೆನ್ಯೂ ಮಂತ್ರಿಗಳು ಹೇಳಿದಹಾಗೆ, ಈ ದಿವಸ ಸುಮಾರು ಎರಡು-ಮೂರು ಲಕ್ಷ ಎಕರೆಗಳಷ್ಟು ಜಮೀನು ಬರಬಹುದು. ಹಾಗೆ ಬಂದಾಗ 35 ಸಾವಿರ ಜನವೋ ಏನೋ ಕಾಫಿ ಪ್ಲಾಂಟರುಗಳಿರುವವರು ಅವರು ಹತ್ತು ಎಕರೆಗಳ ಪ್ರಕಾರ ಕೊಂಡುಕೊಂಡರೆ ಮೂರು ಲಕ್ಷ ಎಕರೆ ವಿನಾಯಿತಿ ಹೊಂದಿದ ಎಸ್ಟೇಟ್ ಓನರ್ಸ್ ವಶವಾಗುತ್ತದೆ. ಆದ್ದರಿಂದ ಸೀಲಿಂಗ್ ಲಿಮಿಟ್‌ವರೆಗೆ ಹೆಚ್ಚು ಭೂಮಿ ಪಡೆಯಬಹುದೆ ಎನ್ನುವುದು ಒಂದು ಮುಖ್ಯಪ್ರಶ್ನೆ. ಮದ್ರಾಸಿನಲ್ಲಿ ಟೆನೆಂಟುಗಳಿಂದ ಬಿಡಿಸಿಕೊಳ್ಳಲು ಅವಕಾಶ ಮಾಡಿರುವ ಸಂದರ್ಭದಲ್ಲಿ ಸ್ವಂತ ಸಾಗುವಳಿಗಾಗಿ ಜಮೀನನ್ನು ವಾಪಸು ಪಡೆಯುವಾಗ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಅಥವಾ ಸೇಲ್ಸ್‌ಟ್ಯಾಕ್ಸ್ ಕೊಡುತ್ತಿದ್ದರೆ ಅಂಥವರು ವಾಪಸು ತೆಗೆದುಕೊಳ್ಳಕೂಡದೆಂದಿದೆ. ಹೊಸದಾಗಿ ಒಬ್ಬನಿಗೆ 100–200 ಎಕರೆ ಪ್ಲಾಂಟೇಷನ್ ಇರಬಹುದೆಂದು ಮಾಡಬಹುದು. ಹಾಗಾದರೆ ಬೇರೆಯವರು ಸೀಲಿಂಗ್ ಲಿಮಿಟ್‌ವರೆಗೆ ಜಮೀನು ಕೇಳಬಹುದು ಮತ್ತು ಇರುವ ಜಮೀನಿನಲ್ಲಿ ಪ್ಲಾಂಟೇಷನ್ ಬೆಳೆಸಬಹುದು. ಹಾಗೆ ಅವಕಾಶವಿರುವಾಗ ಭೂಸುಧಾರಣೆ ಯಶಸ್ವಿಯಾಗಿ ಮಾಡುವುದಕ್ಕೆ ಸಾಧ್ಯವೇ ಎಂದು ಅನುಮಾನವಿದೆ. ಈ ದಿವಸ ವಿನಾಯಿತಿ ಕೊಟ್ಟಿರುವುದು ತುಂಬಾ ಅನ್ಯಾಯ, ಏಕೆಂದರೆ ಈಗ ನಮ್ಮ ಕಡೆ ಅನೇಕರಿಗೆ ಮೂರು ನಾಲ್ಕು ಸಾವಿರ ತೆಂಗಿನ ಗಿಡಗಳಿವೆ. ಈಚೆಗೆ ಕಳೆದ ವರ್ಷದಿಂದ ಅನೇಕರು ಸುಮಾರು ನಾಲ್ಕಾರು ಸಾವಿರ ಎಕರೆಗಳಲ್ಲಿ ಭೂಸುಧಾರಣೆಯಾದರೆ ವಿನಾಯಿತಿ

(ಶ್ರೀ ಸಿ. ಕೆ. ರಾಜಯ್ಯಶೆಟ್ಟಿ)

ದೊರೆಯುತ್ತದೆಂದು ಹೊಸದಾಗಿ ಪ್ಲಾಂಟೇಷನ್ ಮಾಡಿದ್ದಾರೆ. ಹೀಗಾದರೆ ಹೆಚ್ಚು ಆಹಾರ ಹೇಗೆ ಬೆಳೆಯುವುದು ? ಭೂಸುಧಾರಣೆಯಿಂದ ಕಮರ್ಷಿಯಲ್ ಪ್ಲಾಂಟೇಷನ್ ಮಾಡುವುದಕ್ಕೆ ನೀವು ಅವಕಾಶ ಮಾಡಿದಹಾಗಾಗುತ್ತದೆ.

ಶ್ರೀ ಕೆ. ಎಲ್. ನರಸಿಂಹಯ್ಯ (ಹೆಬ್ಬೂರು).—ತೆಂಗಿನ ಗಿಡಗಳನ್ನು ಭೂಮಿಯ ತುಂಬ ಬೆಳೆಯುವುದಿಲ್ಲ. ಮಧ್ಯೆ ಬೇರೆ ಬೆಳೆ ಬೆಳೆಯಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾವು ಹೇಳುವುದು ಮದುವೆ ಮಾಡುತ್ತೇವೆ, ದಾನ ಕೊಡಿ ಎಂದರೆ ಸಾಸಿವೆ ಕಾಳಿನ ಬಾಬ್ತು ಖರ್ಚು ನನ್ನದಿರಲಿ ಎಂದು ಶೆಟ್ಟರು ಹೇಳಿದ ಹಾಗಾಯಿತು. ನೆರಳಲ್ಲಿ ಎಷ್ಟು ಬೆಳೆಯಬಹುದು? ತೆಂಗಿನಗಿಡಗಳಿಗೆ ಹಿಂಗಾರು ಗೆಯ್ಮೆ ಬಹಳ ಮುಖ್ಯವಾದದು. ಆ ಗಿಡಗಳ ಮಧ್ಯೆ ರಾಗಿ ಬೆಳೆದರೆ ಅದು ಕುಯ್ಲಿಗೆ ಬರುವವರೆಗೆ ಕಟಾವು ಮಾಡುವುದಕ್ಕಾಗುವುದಿಲ್ಲ. ಅದುವರೆಗೆ ನೆಲ ಒಣಗಿರುತ್ತದೆ. ಹಸಿರು ಗೊಬ್ಬರಕ್ಕಾಗಿ ಸ್ವಲ್ಪ ಏನಾದರೂ ಅಲ್ಲ ಹಾಕಬಹುದೇ ಹೊರತು ಯಾರೂ ಕೂಡ ಇತರ ಫಸಲುಗಳನ್ನು ಬೆಳೆಯುವುದಕ್ಕಾಗುವುದಿಲ್ಲ. ಬೆಳೆದರೂ ಮುಂಗಾರು ಬೆಳೆ ತೆಗೆಯಬೇಕಾಗುತ್ತದೆ.

ಈ ದಿವಸ ಮ್ಯಾಲಫೈಡಿ ಟ್ರಾನ್ಸ್‌ಫರ್ಸ್ ಏನಿದೆ ಅದನ್ನು ಪೂರ್ಣವಾಗಿ ಆರ್ಡಿನೆನ್ಸ್ ಮೂಲಕ ತಕ್ಷಣ ತಡೆಮಾಡದಿದ್ದರೆ ಮೂರು ಲಕ್ಷ ಎಕರೆ ಖಂಡಿತ ಬರುವುದಿಲ್ಲ.

ಆಮೇಲೆ ಸೀಲಿಂಗ್ ಲಿಮಿಟ್ ಬಗ್ಗೆ ಹಳ್ಳಿಗಳಲ್ಲಿ ಭಯವಿದೆ. ಈಗ 14 ಸಂಸ್ಥಾನಗಳಲ್ಲಿ ಸೀಲಿಂಗ್ ಲಿಮಿಟ್ ಹಾಕಿದ್ದಾರೆ. ಮಂತ್ರಿಗಳ ಭಾಷಣದಲ್ಲಿ ಎಷ್ಟು ವಿಸ್ತೀರ್ಣ ಖುಷ್ಕಿ, ತರಿ ಮತ್ತು ಬಾಗಾಯ್ತು ಜಮೀನು ಬರಬಹುದೆಂದು ಹೇಳಿದರೋ ಅದರ ಎರಡು ಮೂರರಷ್ಟು ವಿಸ್ತೀರ್ಣವಿದೆ. ಈ ದಿವಸ ಸೀಲಿಂಗ್ ಹಾಕಬೇಕಾದರೆ 1952ನೆಯ ಇಸವಿ ಧಾರಣೆ ಆಧಾರದಮೇಲೆ ಹಾಕಬೇಕೆಂಬ ಅಭಿಪ್ರಾಯವಿದೆ, 1952 ರಲ್ಲಿ ಬತ್ತದ ದರ 20 ರೂಪಾಯಿ, ರಾಗಿಯ ದರ 20 ರೂಪಾಯಿ ಇತ್ತು. ಈಗ ರಾಗಿ ಮತ್ತು ಬತ್ತದ ದರ ದ್ವಿಗುಣವಾಗಿ ಜಾಸ್ತಿಯಾಗಿದೆ. ಈ ದಿವಸ ರಾಗಿ ಬೆಲೆ 40 ರೂಪಾಯಿಗಳಿಗೇರಿದೆ. ಆದರೆ 7,200 ರೂಪಾಯಿ ಆದಾಯ ಬರುವಷ್ಟು ಜಮೀನಿಟ್ಟುಕೊಳ್ಳಬಹುದೆಂದು ಹೇಳಿದಂತಾಯಿತು. ಇತರ ದೇಶಗಳಿಗೆ ಹೋಲಿಕೆಮಾಡಿ ಪರಮಾವಧಿ ಎಷ್ಟು ಬೆಳೆಯಬಹುದೆಂದು ನೋಡಿ ಸ್ವಲ್ಪ ಹೆಚ್ಚು ಕಡಮೆ ಅದಕ್ಕೆತಕ್ಕಂತೆ ನಿಗದಿಮಾಡಬೇಕಾಗಿದೆ. ಈದಿವಸ ಐದು ಜನರಿರುವ ಸಂಸಾರಕ್ಕೆ 180 ಎಕರೆ, ಎಂಟು ಜನರಿರುವುದಕ್ಕೆ 360 ಎಕರೆ ಎಂದು ಗೊತ್ತುಮಾಡಿದರೆ ಅದೇನು ಭೂಸುಧಾರಣೆಯೋ ಅಥವಾ ಭೂರಗಳೆಯೋ ಅರ್ಥವಾಗುವುದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ನಾನು ವಿಸ್ತೀರ್ಣವನ್ನು ಉದಾಹರಣೆ ರೂಪವಾಗಿ ಹೇಳಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತಾವು ಹೇಳಿದ್ದರಲ್ಲಿ 50 ಎಕರೆ ಕಡಮೆ ಮಾಡಿದರೂ 300 ಎಕರೆಯಾಗುತ್ತದೆ. ನಮ್ಮ ಭಾರತದಲ್ಲಿ ಭೂ ವಿಸ್ತೀರ್ಣ ವೆಷ್ಟಿದೆ ಮತ್ತು ವ್ಯವಸಾಯವೇ ಎಷ್ಟು ಜನರಿಗೆ ಜೀವನಾಧಾರವಾಗಿದೆ ಎಂಬುದನ್ನು ಗಮನಿಸಬೇಕು. ಮೈಸೂರು ದೇಶದಲ್ಲಿ ಶೇಕಡ 71 ರಷ್ಟಿದೆಯೆಂದು ಜಂಟಿ ಸಮಿತಿ ವರದಿಯಿಂದ ಗೊತ್ತಾಗುತ್ತದೆ. ಇದರ ಪ್ರಕಾರ 1·5 ಎಕರೆ ಒಬ್ಬೊಬ್ಬರಿಗೆ ಬರುತ್ತದೆ.

5 P.M.

ದೇಶದ ಶೇಕಡ 71 ಜನ ಸಂಖ್ಯೆಗೆ ಸುಮಾರು 1.5 ಎಕರೆ ಬರುತ್ತದೆ. ತಾವು ಹೇಳುವಂತೆ ಎಂಟು ಜನರ ಒಂದು ಸಂಸಾರಕ್ಕೆ ಬಿಟ್ಟ ಪಕ್ಷದಲ್ಲಿ ತಲೆ ಒಂದಕ್ಕೆ ಎಷ್ಟು ಎಕರೆ ಆಯಿತು ಎಂಬುದನ್ನು ತಾವು ತಿಳಿದುಕೊಳ್ಳಬೇಕು. ಇನ್ನೊಂದು ಮುಖ್ಯವಾದ ಅಂಶ ಸರ್ಕಾರದವರು ಗಮನಿಸಬೇಕಾದದ್ದು ಎಂದರೆ ಇವತ್ತಿನ ದಿವಸ ಒಂದು ಗುರಿ ಇಟ್ಟುಕೊಂಡು ದೊಡ್ಡ ಭಾರಿ ಭಾರಿ ನೀರಾವರೀ ಕಾಂಗಾರಿಗಳನ್ನು ಸರ್ಕಾರ ಕೈಕೊಂಡಿದೆ ಸುಮಾರು 5-10 ವರ್ಷದಲ್ಲಿ ಹತ್ತಾರು ಲಕ್ಷ ಎಕರೆ ಜಮೀನನ್ನು ತರೀ ಜಮೀನನ್ನಾಗಿ ಪರಿವರ್ತಿಸಲು ಒಂದು ಅವಕಾಶವಿದೆ, ಇವತ್ತಿನದಿವಸ ಈ ಸೀಲಿಂಗ್ ಇಟ್ಟುಕೊಳ್ಳಬೇಕಾಗಿದ್ದರೆ ಮುಂದೆ ಯಾವ ತರಹದ irregularityಯೂ ಬರಬಾರದು. ಆ ತರಹ ಒಂದು ಆಧಾರದಮೇಲೆ ಇರಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಅಭಿಪ್ರಾಯದಲ್ಲಿ ಸೀಲಿಂಗ್ average basis ಮೇಲೆ ನಿಗದಿ ಮಾಡಬಹುದೇ ?

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—Average basis ಮೇಲೇ ನಿಗದಿ ಮಾಡಬೇಕು. ಇವತ್ತಲ್ಲ ನಾಳೆ ಆದರೂ ನೀರಾವರಿ ಯೋಜನೆಗಳು ಕಾರ್ಯಗತವಾದ ಮೇಲೆ ಹತ್ತಾರು ಲಕ್ಷ ಎಕರೆ ಜಮೀನು ಸಿಕ್ಕುತ್ತದೆ. ಹತ್ತಾರು ವರ್ಷಗಳಲ್ಲಿ ಪ್ರತಿಯೊಬ್ಬ ಮನುಷ್ಯನು ಆಗ ಇಷ್ಟು ಎಕರೆ ತರೀ, ಇಷ್ಟು ಎಕರೆ ಖುಷ್ಕಿ, ಬಾಗಾಯ್ತು ಜಮೀನು ಹೊಂದಿರಬಹುದು ಎಂದು ಮಾಡಿದಮೇಲೆ ಮುಂದೆ ಈ ಸೀಲಿಂಗ್ ಏನಾದರೂ ಆಗಬಹುದು ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಆಗ ಪುನಃ ಭೂಮಾಲೀಕರನ್ನು ಸೃಷ್ಟಿ ಮಾಡಿದ ಹಾಗಾಗುತ್ತದೆ. ಅಂಥಾದ್ದಕ್ಕೆ ಅವಕಾಶವಿಲ್ಲದಂತೆ ಮುಂದೆಯೂ ಕೂಡ ಸೀಲಿಂಗ್ ಲಿಮಿಟ್ ಅಂದರೆ ಇಷ್ಟೇ ಎಕರೆ ತರೀ ಖುಷ್ಕಿ, ಬಾಗಾಯ್ತು ಜಮೀನು ಎಂದು ಆಗಬೇಕು.

Classification of lands ವಿಚಾರದಲ್ಲಿ ನನ್ನ ಮಾನ್ಯ ಮಿತ್ರರೊಬ್ಬರು ಇಡೀ ಸಂಸ್ಥಾನವನ್ನು ಸರ್ವೇ ಮಾಡಿ ಕ್ಲಾಸಿಫೈ ಮಾಡಿದರೆ ವ್ಯವಸ್ಥಿತವಾದ ರೀತಿಯಲ್ಲಿ ಆಗುತ್ತದೆ ಎಂದು ಹೇಳಿದರು. ಲ್ಯಾಂಡ್ ಕಮೀಷನ್ ಎಲ್ಲಾ ಭಾಗವನ್ನೂ ಸುತ್ತಿ, ಲ್ಯಾಂಡ್ ಕ್ಲಾಸಿಫೈ ಮಾಡಿ, ರೆಂಟ್ ಫಿಕ್ಸ್ ಮಾಡಿ ಆಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೆ, ಇದು ನಿಜವಾಗಿಯೂ ಕೂಡ ವಾಸ್ತವವಾಗಿ ನಮ್ಮ ದೇಶದ ವಿಸ್ತಾರವನ್ನು ನೋಡಿದರೆ ಕೊನೆಯಪಕ್ಷ ಎರಡು ಮೂರು ವರ್ಷವಾಗುತ್ತದೆ. ಮದರಾಸಿನವರು ಒಂದು ಎಕರೆ ತರೀ ಜಮೀನಿಗೆ ಎರಡು ಎಕರೆ ಬಾಗಾಯ್ತು ಸಮ ನಾಲ್ಕು ಎಕರೆ ಖುಷ್ಕಿ ಸಮ ಎಂದು ಮಾಡಿದ್ದಾರೆ. ಹಾಗೆ ನಮ್ಮ ಇಲ್ಲಿನ ಒಂದು ಸಂದರ್ಭಕ್ಕಾನುಸಾರವಾಗಿ ಬೇಕಾದರೆ ಐದು ತರಹ ಕ್ಲಾಸಿಫೈ ಮಾಡಿ ಒಂದು ಎಕರೆ ನೀರಾವರೀ ತರೀ ಜಮೀನು ಎರಡು ಎಕರೆ ಸಾಮಾನ್ಯ ತರೀ ಜಮೀನು, ಎರಡು ಎಕರೆ ಬಾಗಾಯ್ತು ಜಮೀನಿಗೆ ಸಮ ಎಂದೂ ನಾಲ್ಕು ಎಕರೆ ಖುಷ್ಕಿ ಜಮೀನಿಗೆ ಸಮ ಎಂದೂ, ಆರು ಅಥವಾ ಎಂಟು ಎಕರೆ ಪಾರು ಭೂಮಿಗೆ ಸಮ ಎಂದೂ ಮಾಡಿ. ಈ ರೀತಿ ಐದು ತರಹ ವಿಭಾಗ ಮಾಡಿ ಅದರ ಆಧಾರದಮೇಲೆ ಸೀಲಿಂಗ್ ನಿಗದಿ ಮಾಡಬೇಕೇ ಹೊರತು ಇವತ್ತಿನ ದಿವಸ ಸರ್ವೇ ಮಾಡುವುದು

ಆಗಲಿ, ಲ್ಯಾಂಡ್ ಕಮೀಷನ್ ದೇಶದ ವಿವಿಧ ಭಾಗಗಳಲ್ಲಿ ಸಂಚಾರ ಮಾಡಿ ಒಂದು ತೀರ್ಮಾನಕ್ಕೆ ಬರಬೇಕೆಂದರಾಗಲಿ ಖಂಡಿತವಾಗಿಯೂ ಕೂಡ ಒಂದು ಗೋಪಾದದಷ್ಟು ಭೂಮಿ ಉಳಿಯುವುದಿಲ್ಲ.

Sri H. M. CHANNABASAPPA.—How about the ceiling ofother sections?

Sri C. K. RAJAIAH SETTY.—I am one to accept your statement. ಸೀಲಿಂಗ್ ಎಲ್ಲಾ ರಂಗದಲ್ಲೂ ಇರಬೇಕು. ಆದರೆ ಎಲ್ಲಾ ರಂಗಗಳಲ್ಲೂ ಕೂಡ ಇಷ್ಟೇ ಆದಾಯ ಸಂಪಾದನೆ ಮಾಡಿ ಎಂದು ಸೀಲಿಂಗ್ ಹಾಕುವುದಕ್ಕೆ ಆಗುವುದಿಲ್ಲ. ಒಂದು ಆದಾಯದ ಪರಿಮಿತಿಗೆ ಬಂದಮೇಲೆ ತೆರಿಗೆ ಹಾಕಬೇಕಾಗುತ್ತದೆ.

ಶ್ರೀ ಟಿ. ಎನ್. ಮೂಡಲಗಿರಿಗೌಡ (ಕುಣಿಗಲ್).—ನಮ್ಮ ಕಡೆ ಒಂದು ಗಾದೆ ಇದೆ 'ಮಣಿ ಕಾಸು ಮೇಲೆ ಬಿತ್ತು' ಎಂದು ಅದು ತಮಗೆ ಗೊತ್ತೇ?

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಈ ಬಿಲ್ಲು ಜಾರಿಗೆ ಬಂದ ಪಕ್ಷದಲ್ಲಿ ಮೂಡಲಗಿರಿಗೌಡರಿಗಿಂತಲೂ ನನ್ನ ಮೇಲೆಯೇ ಹೆಚ್ಚು ಪರಿಣಾಮವಾಗುತ್ತದೆ. ನಾನು ಕೆಲವು ಜಮೀನನ್ನು ಟೆನೆಂಟ್ಸ್‌ಗೇ ಬಿಟ್ಟು ಬಿಡಬೇಕಾಗುತ್ತದೆ. ಇವತ್ತಿನ ದಿವಸ ಎಂಟು ಜನರಿರುವ ಒಂದು ಸಂಸಾರಕ್ಕು ಕೂಡ ಕೊನೆಯ ಪಕ್ಷ 100 ಎಕರೆ ಜಮೀನಿಗಿಂತ ಜಾಸ್ತಿ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ತರೀ ಜಮೀನಾದರೆ 50 ಎಕರೆಗಿಂತ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಸೀಲಿಂಗ್ ಇಟ್ಟಾಗ ಯಾವ ಸಂದರ್ಭದಲ್ಲೂ ಕೂಡ ಯಾವ ಒಬ್ಬ ಭೂಮಾಲೀಕನ ಜಮೀನಿನ ವಿಸ್ತೀರ್ಣವೂ 100 ಎಕರೆಗಿಂತ ಜಾಸ್ತಿ ಆಗಕೂಡದು ಎನ್ನುವ ಒಂದು ಜನರಲ್ ಕ್ಲಾಸ್ ಮಾಡಬೇಕಾಗುತ್ತದೆ.

ಶ್ರೀ ಕಡಿದಾಳ್ ಮಂಜಪ್ಪ.—100 ಎಕರೆ ಎಂದರೆ ಹೇಗೆ ಹೇಗೆ ಇರಬೇಕು ಎಂಬುದನ್ನು ಹೇಳಿ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—a,b,c,d,e ಎಂದು ಹೇಳಿ ಕ್ಲಾಸಿಫೈ ಮಾಡಿ.

ಈ ಟೆನೆನ್ಸಿ ಒಳಗೆ ಕೆಲವು ಕ್ಲಿಷ್ಟ ತೊಂದರೆಗಳು ಇವೆ. ನಮ್ಮ ಈ ಬಿಲ್‌ನಲ್ಲಿ ನೋಡಿದ ಪಕ್ಷದಲ್ಲೂ ಕೂಡ ಅದು ನಿವಾರಣೆ ಆದ ಹಾಗೆ ಇಲ್ಲ. ಒಬ್ಬ ಮನುಷ್ಯನಿಗೆ ಒಂದು ಕಡೆ ಟೆನೆನ್ಸಿ ಇಲ್ಲದೆ, ಎರಡು ಮೂರು ಕಡೆ ಅವನು ಟೆನೆಂಟ್ ಆಗಿದ್ದ ಪಕ್ಷದಲ್ಲಿ ಆಗ ಸೆಲ್ಫ್ ಕಲ್ಟಿವೇಷನ್ನಿಗೆ ಯಾವ ಜಮೀನನ್ನು ಬಿಡುವುದು? ರೆಸ್ಯೂಂ ಮಾಡಿಕೊಳ್ಳುವಾಗ ಸೆಲ್ಫ್ ಕಲ್ಟಿವೇಟರ್ ಟೆನೆಂಟ್ ಆಗಿದ್ದ ಪಕ್ಷದಲ್ಲಿ ಯಾವ ವಿಧಾನವನ್ನು ಅನ್ವಯಿಸಬೇಕೆನ್ನುವುದು ಈ ಬಿಲ್ಲಿನಲ್ಲಿ ನಮೂದು ಆಗಿಲ್ಲ. ನಾಳೆ ದಿವಸ ಒಂದು ಶಾಸನ ಆದಮೇಲೆ ಗೊಂದಲವಾಗದಂತೆ ಈಗಲೇ ನೋಡಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಅದೆಲ್ಲಾ ಇದೆ.

Sri C. K. RAJAIAH SETTY.—It is only for the self-cultivator that that clause is provided and not for the tenant.

ಈಗ ಸರ್ಕಾರದವರು ಕೋ-ಆಪರೇಟೀವ್ ಫಾರ್ಮಿಂಗ್ ಮಾಡಬೇಕೆಂದು ಹೇಳುತ್ತಿದ್ದಾರೆ. ನನಗೆ ಅನಿಸುತ್ತದೆ ಈ ಕೋ-ಆಪರೇಟಿವ್ ಫಾರ್ಮಿಂಗ್ ಆಗಬೇಕಾಗಿದ್ದರೆ ಎರಡು ರೀತಿಯಲ್ಲಿ ಆಗಬೇಕಾಗುತ್ತದೆ. ಒಂದು ಕಮ್ಯುನಿಸ್ಟ್ ರಾಜ್ಯ ಆಗಬೇಕು, ಇಲ್ಲದೇ ಇದ್ದರೆ ವಿನೋಬಾಭಾವೆಯವರ ಧರ್ಮರಾಜ್ಯವಾಗಬೇಕು. ಇವೆರಡೂ ಇಲ್ಲದೇ ಹೋದರೆ ಇದು ಆಗಲಿಕ್ಕಿಲ್ಲ. ನಮ್ಮಲ್ಲಿ ಸರ್ವೀಸ್ ಕೋ-ಆಪರೇಟಿವ್ಸ್ ತರಹ ಮಲ್ಟಿಪರ್‌ಪಸ್ ಕೋ-ಆಪರೇಟಿವ್ಸ್ ಕೆಲಸ ಮಾಡುತ್ತ ಇವೆ. ಇವತ್ತಿನ ದಿವಸ ವ್ಯವಸಾಯ ಇಲಾಖೆಯ ಮಲ್ಟಿಪರ್‌ಪಸ್ ಕೋ-ಆಪರೇಟಿವ್ ಸೊಸೈಟಿಯಿಂದ 23 ಲಕ್ಷ ರೂಪಾಯಿ ಬಾಕಿ ಬರಬೇಕಾಗಿದೆ. ಹೀಗಿರುವಾಗ ಒಂದು ಅನುಮಾನ ಏನು ಬರುತ್ತದೆ ಎಂದರೆ ನಿಜವಾಗಿಯೂ ಕೂಡ ಇಲ್ಲಿನ ಒಂದು ನೈತಿಕಮಟ್ಟ, ಇಲ್ಲಿನ ಸರ್ಕಾರದ ದಕ್ಷತೆ ಮತ್ತು ಇಲ್ಲಿರುವ ಜನಗಳು ಅವರಲ್ಲಿ ಎಷ್ಟು ಪ್ರಾಮಾಣಿಕತೆ ಇದೆ ಎಂಬುದನ್ನೆಲ್ಲಾ ಲೆಕ್ಕಹಾಕಿದರೆ, ಮೊದಲು ಕ್ಯಾಷ್ ಕ್ರೆಡಿಟ್ ಸೊಸೈಟಿಗಳು ಎಂದು ಮಾಡಿದ್ದರು. ಶ್ರೀ ಮಾಲಮರಿಯಪ್ಪನವರು ಬಿಲ್ಲಿನಮೇಲೆ ಉತ್ತರ ಕೊಡುವಾಗ ಅವು ಬಹಳ ಚೆನ್ನಾಗಿ ಮುಂದುವರಿದಿವೆ ಎಂದು ಹೇಳಿದರು. ಇವತ್ತಿನ ದಿವಸ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಷಾರ್ಟ್ ಟರ್ಮ್, ಲಾಂಗ್ ಟರ್ಮ್ ಲೋನ್ ತೆಗೆದುಕೊಂಡು ಮಾರ್ಕೆಟಿಂಗ್ ಸೊಸೈಟಿಯಿಂದ ಪ್ರಾಡ್ಯೂಸ್ ಲೋನ್ ತೆಗೆದುಕೊಂಡು ಆರ್. ಎ. ಸಿ. ಇಂದ ಇಂಡಸ್ಟ್ರಿಯಲ್ ಲೋನ್ ತೆಗೆದುಕೊಂಡು ಆ ಬಂಡವಾಳದಿಂದ ಅಂಗಡಿ ಇಟ್ಟಿರುವವರು ಎಷ್ಟು ಜನ, ಮೋಟಾರು, ಲಾರಿ ತೆಗೆದುಕೊಂಡಿರುವವರು ಎಷ್ಟು ಜನ ಎಂಬುದನ್ನು ಲೆಕ್ಕ ತೆಗೆದುಕೊಂಡ ಪಕ್ಷದಲ್ಲಿ ಖಂಡಿತವಾಗಿಯೂ ಶೇಕಡ 50ಕ್ಕಿಂತಲೂ ಹೆಚ್ಚು ಜನ certified purposeಗೆ ಉಪಯೋಗ ಮಾಡಿಲ್ಲ. ನಿಜವಾಗಿಯೂ ಬಡವರಿಗೆ ಸೊಸೈಟಿಗಳಲ್ಲಿ ಸಾಲ ಸಿಕ್ಕುವುದಿಲ್ಲ. ಬಡರೈತರು ಭೂಮಾಲೀಕರ ಕೃಪೆಯಮೇಲೆ ಅವಲಂಬಿಸಿಕೊಂಡು ಇರಬೇಕಾಗುತ್ತದೆ. ಈ ಮಸೂದೆಯಿಂದ ಭೂಮಾಲೀಕರ ಹಿತರಕ್ಷಣೆಯಾಗುತ್ತದೆಯೇ ವಿನಾ ಗೇಣಿದಾರರ ಹಿತರಕ್ಷಣೆಯಾಗುವುದಿಲ್ಲ. ಆದುದರಿಂದ ಬಡ ರೈತರಿಗೆ ಸುಲಭವಾಗಿ ತೀವ್ರವಾಗಿ ಸಾಲ ದೊರಕುವ ಹಾಗೆ ಏರ್ಪಾಡು ಮಾಡಬೇಕಾದುದು ಅಗತ್ಯವಾಗಿದೆ.

ಇನ್ನು ಕೋ-ಆಪರೇಟಿವ್ ಫಾರ್ಮಿಂಗ್ ಎನ್ನುವ ವಿಚಾರದಲ್ಲಿ ಹೇಳುವುದಾದರೆ, ಇವತ್ತಿನ ದಿವಸ ಇದೊಂದು ರಾಜಕಾರಣಿಗಳಿಗೆ ತಮ್ಮ ಪುಂಡಾಟಿಕೆ ಪ್ರಭಾವ ಬೀರುವ ಕಾರ್ಯ ಕ್ಷೇತ್ರವಾಗಿದೆ. ನಮ್ಮ ಊರಿನ ಒಂದು ಉದಾಹರಣೆಯನ್ನು ಹೇಳುವುದಾದರೆ ನಮ್ಮೂರಿನಲ್ಲಿ 45 ಜನರು, ಹರಿಜನರು ಸೇರಿಕೊಂಡು ಒಂದು ಸೊಸೈಟಿ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ಬೇಕಾದ ಸಹಾಯ ದೊರಕುತ್ತಿಲ್ಲ. ಮಂತ್ರಿಗಳ ಹತ್ತಿರಹೋಗಿ ಕೇಳಿಕೊಂಡರೂ ಯಾವ ಪ್ರಯೋಜನವೂ ಆಗಿಲ್ಲ. ನಿಜವಾಗಿಯೂ ಕೋ-ಆಪರೇಟಿವ್ ಫಾರ್ಮಿಂಗ್ ಬಗ್ಗೆ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲ. ಕೆಲವು ಜನರು ಮಧ್ಯೆ ಸೇರಿ ತಿಳುವಳಿಕೆಯಿಲ್ಲದ ಜನರಿಗೆ mislead ಮಾಡುತ್ತಾರೆ. ಜನರ ದುಡ್ಡು ತೆಗೆದುಕೊಂಡು ಅನೇಕ ತೊಂದರೆಗಳನ್ನು ಉಂಟುಮಾಡುತ್ತಾರೆ. ತಿಳುವಳಿಕೆಯಿಲ್ಲದ ಜನರಿಗೆ ಇಂಥವರು ಬಹಳ ಅನ್ಯಾಯ ಮಾಡುತ್ತಿದ್ದಾರೆ. ಇದನ್ನು ಕೂಡಲೇ ತಡೆಗಟ್ಟಬೇಕು. ಪಂಚವಾರ್ಷಿಕ ಯೋಜನೆಯಲ್ಲಿ ಈ ಬಗ್ಗೆ ಈ ರೀತಿ ಹೇಳಿದೆ:

It has been stated in the Report of the Second Five Year Plan that care should be taken to ensure that the concessions are extended to genuine societies only and it should not lead to the formation of mushroom

(SRI C. K. RAJAIAH SETTY)

societies which may be wound up after involving the State Government in heavy losses.

ಕೇಂದ್ರ ಸರ್ಕಾರದವರು ಈ ರೀತಿ ಹೇಳಿದ್ದರೂ ಕೂಡ ಕೋ-ಆಪರೇಟಿವ್ ಫಾರ್ಮಿಂಗ್ ಬಗ್ಗೆ ದೊಡ್ಡ ದೊಡ್ಡ ಶಬ್ದಗಳನ್ನುಪಯೋಗಿಸಿ ಪ್ರಕಟನೆಗಳನ್ನು ಹೊರಡಿಸಿದ್ದಾರೆ. ಎಲ್ಲೆಲ್ಲಿ surplus land ಇದೆಯೋ ಅಂಥ ಕಡೆಯಲ್ಲಿ ಒಂದೊಂದು ಸೊಸೈಟಿ ಮಾಡಿ ಇದಗ ಪ್ರಯೋಗ ಮಾಡಿ ನೋಡಬೇಕು. ಎನ್. ಇ. ಎಸ್. ಪ್ರದೇಶಗಳಲ್ಲಿ ಸರ್ಕಾರದ ಜಮೀನುಗಳಲ್ಲಿ ಮೊದಲು ಸಹಕಾರಿ ಕೃಷಿ ಪದ್ಧತಿಯನ್ನು ಪ್ರಯೋಗ ಮಾಡಿ ಅನಂತರ ಬೇರೆ ಕಡೆಗೆ ಜಾರಿಗೆ ತರುವುದು ಸೂಕ್ತ. ಈ ಅಂಶವು ಮಸೂದೆಯಲ್ಲಿಲ್ಲ. ಆದ್ದರಿಂದ ಸರಕಾರದ ಜಮೀನಿನಲ್ಲಿ ಪ್ರಯೋಗ ಮಾಡಿನೋಡಿ ಅದರ ಪರಿಣಾಮವೇನಾಗುತ್ತದೆ ಎನ್ನುವುದನ್ನು ನೋಡಬೇಕು.

ಈ ರೀತಿ ಮಾಡುವುದಕ್ಕೆ ಸಾಕಷ್ಟು ಅವಕಾಶವನ್ನಿಟ್ಟುಕೊಳ್ಳಬೇಕು. ಇಲ್ಲದಿದ್ದರೆ ಈ ಅವಕಾಶವನ್ನು ದುರುಪಯೋಗಪಡಿಸಿಕೊಂಡು ಕೆಲವರಿಂದ ಸರ್ಕಾರದ ಹಣಕ್ಕೆ ಲೋಪ ಬರುವುದಕ್ಕೆ ಅವಕಾಶವಿದೆ. ಈ ಕೋ-ಆಪರೇಟಿವ್ ಸೊಸೈಟಿಗೆ ವ್ಯವಸಾಯದಲ್ಲಿ ಪರಿಣತರಾದವರನ್ನು ಸೆಕ್ರೆಟರಿಯನ್ನಾಗಿ ನೇಮಕ ಮಾಡಿದರೆ ಒಳ್ಳೆಯದಾಗುತ್ತದೆ. ಆದರೆ ಇವತ್ತಿನದಿವಸ ನಿಜವಾಗಿಯೂ ಯಾವದೊಂದು ನೇಮಕ, ನಾಮಿನೇಷನ್, ಸೆಲೆಕ್ಷನ್, ಪ್ರಮೋಷನ್ ಯಾವುದರಲ್ಲಿಯಾದರೂ political influence ಇದ್ದುದು ಕಂಡುಬರುತ್ತದೆ. ಹೊರಗೆ ಮಾತ್ರ ಅದು ಕಾಣುವುದಿಲ್ಲ ಅಷ್ಟೇ. ಈ ರೀತಿ ಆಗುವದಾದರೆ ದೇಶದ ಹಿತವಾಗುವುದಿಲ್ಲ. ದೇಶದ ಹಿತದೃಷ್ಟಿಯಿಂದ ಸರ್ಕಾರ ಇದನ್ನು ಯೋಚನೆ ಮಾಡಬೇಕು. ಎಲ್ಲ ವಿಚಾರಗಳನ್ನೂ ಎಲ್ಲರಿಗೂ ವಿಚಾರ ಮಾಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಒಂದು ವಿಷಯದಲ್ಲಿ ಯಾರು ತಜ್ಞರು ಇದ್ದಾರೆಯೋ ಅಂಥವರಿಗೆ ಈ ಕೆಲಸವನ್ನು ಕೊಟ್ಟ ಪಕ್ಷದಲ್ಲಿ ನಿಜವಾಗಿಯೂ ಸರ್ಕಾರದ ಉದ್ದೇಶ ಸಾಧನೆಯಾಗುತ್ತದೆ. ಅಂಥ ತಜ್ಞರನ್ನು ನೇಮಕ ಮಾಡಿದರೆ ಪ್ರಯೋಜನವಾಗುತ್ತದೆ, ಜನರಿಗೂ ಉಪಕಾರವಾಗುತ್ತದೆ. ಕೋ-ಆಪರೇಟಿವ್ ಫಾರ್ಮಿಂಗಿನಲ್ಲಿ ಮೂರನೆಯ ಒಂದು ಭಾಗ ಸದಸ್ಯರನ್ನು ನಾಮಿನೇಷನ್ ಮಾಡಬೇಕೆಂದು ಇದೆ. ಇದು ಖಂಡಿತವಾಗಿಯೂ ನಾಚಿಕೆಗೇಡಿನ ಮಾತು. ಸಂಬಂಧಪಟ್ಟವರು ಅಲ್ಲಿ ಸದಸ್ಯರಾಗಿ ಕೆಲಸ ಮಾಡಬೇಕಾದುದು ನ್ಯಾಯ. ಅಂಥಲ್ಲಿ ಸರ್ಕಾರದವರು ನಾಮಿನೇಷನ್ ಮಾಡತಕ್ಕ ಪ್ರಮೇಯವೇನಿದೆ ? ಕೆಲವರನ್ನು ನಾಮಿನೇಷನ್‌ನಿಂದ ಅಲ್ಲಿ ಪ್ರತಿಷ್ಠೆ ಮಾಡಿ ಕಾಂಗ್ರೆಸ್ಸಿಗೆ ಓಟು ದೊರಕಿಸಿಕೊಳ್ಳುವುದಕ್ಕೆ ಇದೊಂದು ಹೊಸ ದಾರಿ ಹಾಕಿಕೊಟ್ಟಂತಾಗಿದೆ ಎಂದು ಕಾಣುತ್ತದೆ. ಒಬ್ಬರು ಮಾನ್ಯ ಸದಸ್ಯರು ಮಾತನಾಡುತ್ತಾ ಜಪಾನು ದೇಶದಲ್ಲಿ ಏನೇನು ಸಾಧನೆ ಮಾಡಿದ್ದಾರೆ, ವ್ಯವಸಾಯ ಹೇಗಿದೆ ದೇಶವನ್ನು ಹೇಗೆ ಅಭಿವೃದ್ಧಿ ಪಡಿಸಿದ್ದಾರೆ ಎನ್ನುವುದನ್ನು ಹೇಳಿದರು. ಸರ್ಕಾರದವರು ಏನೇನು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ, ವ್ಯವಸಾಯದಲ್ಲಿ ಏನೇನು ಲೋಪಗಳಿವೆ ಈ ಅಂಶಗಳನ್ನು ಸಹ ನಾವು ಗಮನಿಸಬೇಕು. ಜಪಾನಿನಲ್ಲಿ 1946ನೆಯ ಇಸವಿಯಿಂದ ಈಚೆಗೆ ಯಶಸ್ವಿಯಾಗಿ ಜಾರಿಗೆ ತಂದಿದ್ದಾರೆ. ಆದರೆ ಜಪಾನಿನಲ್ಲಿರತಕ್ಕ ಪರಿಸ್ಥಿತಿಗಿಂತಲೂ ಇಲ್ಲಿಯ ಪರಿಸ್ಥಿತಿಯು ತೀವ್ರವಾಗಿದೆ. ಆದ್ದರಿಂದ ಜಪಾನಿನಲ್ಲಿ ಹಾಗಿದೆ ಹೀಗಿದೆ ಎಂದು ಹೇಳಿದರೆ ಪ್ರಯೋಜನವಿಲ್ಲ. ನಮ್ಮ ಅಪ್ಪ ಮಾಡಿದ ದುಡ್ಡಿದೆಯೆಂದು ಖರ್ಚು ಮಾಡಿ ಜಪಾನಿಗೆ ಹೋಗಿ ನೋಡಿಕೊಂಡು ಬಂದು ಹೇಳಿದರೆ ಪ್ರಯೋಜನವಾಗುವುದಿಲ್ಲ.

[MR. DEPUTY SPEAKER in the Chair]

ನಾನು ನನ್ನ ಜಮೀನನ್ನು ಸಂತೋಷವಾಗಿ ಮಾರಿದರೂ ನಮ್ಮ ತಾಯಿಯವರು ಅಳುತ್ತ ಕುಳಿತುಕೊಂಡರು. ಹಾಗೆಯೇ ಅವರು ತಮ್ಮ ಜಮೀನನ್ನು ಬಿಡುವುದಕ್ಕೆ ಎಷ್ಟು ವ್ಯಥೆಪಟ್ಟುಕೊಳ್ಳುತ್ತಾರೆಯೋ ? ಸಾಮಾನ್ಯವಾಗಿ ಸ್ತ್ರೀಯರ ಸ್ವಭಾವವೇಹಾಗೆ ಎಂದು ನಾನು ಭಾವನೆ ಮಾಡಬೇಕಾಗಿದೆ. ಪ್ರಗತಿಹೊಂದಿದ್ದ ಯಾವ ಒಂದು ರಾಜಕೀಯ ಪಕ್ಷದಲ್ಲಿ ಕೂಡ ಸಮಾಜವಾದಬೇಕು ಎನ್ನುವವರು ಈ ಕಾನೂನು ಬಂದಾಗ ತಮ್ಮ ಜಮೀನು ಹೋಗುತ್ತದೆಂದು ಜಮೀನಿನ ಚಿತ್ರವನ್ನು ಮುಂದಿಟ್ಟುಕೊಂಡು ಮಾತನಾಡುವುದರಲ್ಲಿ ಅರ್ಥವಿಲ್ಲ.

ನಮ್ಮ ದೇಶದಲ್ಲಿ ಇವೊತ್ತು land ceiling fix ಮಾಡಿದರೆ, ನೂರು ಎಕರೆಗಳಿಗಿಂತ ಯಾರಿಗೂ ಹೆಚ್ಚಾಗಿರಕೊಡದೆಂದು ಲೆಕ್ಕ ಹಾಕಿದರೂ ಕೂಡ ತಲೆಯೊಂದಕ್ಕೆ ಒಬ್ಬ ಮನುಷ್ಯನಿಗೆ 1·5 ಎಕರೆ ಭೂಮಿ ಬರುತ್ತದೆ. ಅದರಲ್ಲಿ ವ್ಯವಸಾಯಕ್ಕೆ ಲಾಯಖ್ಖಾದ ಜಮೀನು 1.25 ಎಕರೆ ಬರುತ್ತದೆ. ನೂರು ಎಕರೆಗೂ, 1.25 ಎಕರೆಗೂ ಎಷ್ಟು ಅಂತರವಿದೆ ! ಸಮಾಜವಾದದ ಉದ್ದೇಶವಾದರೂ ಜಾಸ್ತಿ ಇರುವವರಿಂದ ತೆಗೆದುಕೊಂಡು ಕಡಮೆ ಇರುವವರಿಗೆ ಕೊಟ್ಟು ಅಂತರವನ್ನು ಕಡಮೆ ಮಾಡಬೇಕೆಂಬುದೇ ಆಗಿದೆ. ನಾನು ಹೇಳುವ ಲೆಕ್ಕದಲ್ಲಿ ಹೋಲಿಸಿ ನೋಡಿದರೆ ಒಂದಕ್ಕೆ ಎಷ್ಟು ಆಯಿತು ? ಈ ಒಂದು ಅರ್ಥದಲ್ಲಿ ನಾವು ಅಂಕಿಅಂಶಗಳನ್ನು ವಿಚಾರ ಮಾಡಿದ ಮೇಲೆ ನಾವು ನಿಜವಾಗಿಯೂ ಪರಮಾವಧಿಯ ಮಿತಿಯನ್ನು ಒಪ್ಪಿಕೊಳ್ಳಲೇಬೇಕು. ನಮ್ಮ ಸ್ನೇಹಿತರಾದ ಶಂಕರಪ್ಪನವರು ಸ್ವಂತ ಫಾರಂ ಇಟ್ಟುಕೊಂಡಿದ್ದಾರೆ. ಅದರಲ್ಲಿ ಎಕರೆಯೊಂದಕ್ಕೆ 15 ಪಲ್ಲ ಇರಿಗೇಟೆಡ್ ರಾಗಿ ಬೆಳೆಯುತ್ತಾರೆ, ವರ್ಷಕ್ಕೆ ಎರಡು ಮೂರು ಬೆಳೆಯನ್ನು ತೆಗೆದುಕೊಳ್ಳುತ್ತಾರೆ. ವಿಸ್ತಾರವಾದ ಜಮೀನನ್ನಿಟ್ಟುಕೊಂಡು, ಹೆಚ್ಚು ವ್ಯವಸಾಯ ಮಾಡುತ್ತೇವೆ, ಹೆಚ್ಚು ಆಹಾರ ಧಾನ್ಯ ಬೆಳೆಯುತ್ತೇವೆಂದರೆ ಸಾಧ್ಯವಿಲ್ಲ. ನಮ್ಮ ದೇಶದ ಜನ ಸಂಖ್ಯೆ, ಇಲ್ಲಿನ ಜಮೀನಿನ ವಿಸ್ತೀರ್ಣ, ಭೌಗೋಳಿಕ ಸ್ಥಿತಿ ಇವುಗಳನ್ನು ನೋಡಿಕೊಂಡ ಪಕ್ಷದಲ್ಲಿ intensive cultivation ಮಾಡಿಕೊಳ್ಳಬೇಕು. ಬೇರೆ ಸಾಧ್ಯವಿಲ್ಲ. ಆಮೇಲೆ 3,600 ರೂಪಾಯಿನಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ. ಯಾರೂಕೂಡ ವ್ಯವಸಾಯದ ಜೊತೆಗೆ ಬೇರೆ ಕಸಬನ್ನು ಮಾಡಬೇಡಿ, ವ್ಯಾಪಾರ ಮಾಡಬೇಡಿ ಅಥವಾ ನಿಮ್ಮ ಮಕ್ಕಳನ್ನು ಕೆಲಸಕ್ಕೆ ಕಳಿಸಬೇಡಿ ಎಂದು ಹೇಳಿಲ್ಲ. ಬೇರೆ ರೀತಿಯಲ್ಲಿ ಆದಾಯ ಬಂದರೆ ಅದನ್ನೂ ಲೆಕ್ಕ ಹಾಕುತ್ತೇವೆಂದು ಸರ್ಕಾರ ಈ ಮಸೂದೆಯಲ್ಲಿ ಎಲ್ಲೂ ತಿಳಿಸಿಲ್ಲ. ಇವೊತ್ತು ಜಪಾನ್ ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನೂ ಮೂರು ಎಕರೆ ಭೂಮಿಯನ್ನಿಟ್ಟುಕೊಂಡಿದ್ದರೂ ಒಂಬತ್ತು ಸಾವಿರ ರೂಪಾಯಿಗಳವರೆಗೂ ಆದಾಯವನ್ನು ಹೊಂದಿರುತ್ತಾನೆಂದು ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳಿದರು. ಅಲ್ಲಿಯ ಜನ ಕೇವಲ ವ್ಯವಸಾಯವನ್ನೇ ಮಾಡದೆ ವ್ಯವಸಾಯಕ್ಕೆ ಅನುಕೂಲವಾದ ಪಶುಪಾಲನೆ, ಹಂದಿ ಸಾಕುವುದು, ಕೋಳಿ

ಸಾಕುವುದು ಹೀಗೆ allied enterprises ಏನಿವೆ ಅಂಥ ಒಂದೊಂದು ಉಪಕಸಬನ್ನಿಟ್ಟುಕೊಂಡು ವ್ಯವಸಾಯ ಮಾಡುತ್ತಾರೆ. ನಮ್ಮಲ್ಲಿಯೂ ಅದೇ ರೀತಿಯಾಗಿ ಮಾಡಬೇಕೇ ವಿನಾ ವ್ಯವಸಾಯದಲ್ಲಿಯೇ ಪೂರ್ತಿಯಾಗಿ ಹಣ ಬರುತ್ತದೆಂದು ಹೇಳುವುದಕಾಗುವುದಿಲ್ಲ. ಈಗ 3,600 ರೂಪಾಯಿ ಅಥವಾ ಇಷ್ಟು ಎಕರೆ ಜಮೀನು ಎಂದು ಮಿತಿಯನ್ನು ಹಾಕುವುದು ಒಂದು ಯೂನಿಟ್ ಎಷ್ಟಿರಬೇಕು ಎಂಬುದನ್ನು ತೀರ್ಮಾನ ಮಾಡುವುದಕ್ಕೋಸ್ಕರ. 3,600 ರೂಪಾಯಿ ವರಮಾನವಿರಬೇಕು ಎಂದರೆ ಎಷ್ಟು ವಿಸ್ತೀರ್ಣದ ಜಮೀನು ಆಗುತ್ತದೆ? ಒಂದು ಸಾವಿರ ಎಕರೆ ಐದು ನೂರು ಎಕರೆ ಹೀಗೆ ಎಷ್ಟು ಬೇಕಾದರೂ ಬರಬಹುದು. ಅದಕ್ಕೋಸ್ಕರ ಸೀಲಿಂಗ್ ಬೇಡವೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಯಾವ ದೇಶವೇ ಆಗಲಿ ಕೆಲವರು ತ್ಯಾಗ ಮಾಡಿದ ಹೊರತು ಹೊಸಕ್ರಾಂತಿಯಾಗಲು ಸಾಧ್ಯವಿಲ್ಲ. ಇವೊತ್ತು ಭೂಮಿಯ ಕ್ರಾಂತಿ ನಮ್ಮ ದೇಶದಲ್ಲಿ ಆಗಬೇಕಾಗಿದೆ. ಹೆಚ್ಚು ಬೆಳೆಯನ್ನು ಬೆಳೆಯಬೇಕಾಗಿದೆ, ಒಂದು ಎಕರೆಗೆ ಸರಾಸರಿ ಹತ್ತು ಪಲ್ಲ ಭತ್ತವನ್ನು ನಮ್ಮಲ್ಲಿ ಬೆಳದರೆ ಜಪಾನಿನ ಮಾದರಿಯಲ್ಲಿ 40 ಪಲ್ಲ ಬೆಳೆಯುವುದಕ್ಕೆ ಅವಕಾಶವಿದೆ. ಈ ರೀತಿ ಹೆಚ್ಚಿಗೆ ಬೆಳೆದರೆ 3,600 ರೂಪಾಯಿಗಿಂತ ನಿಮ್ಮ ಆದಾಯ ಜಾಸ್ತಿಯಾಯಿತೆಂದು ಯಾರೂ ಭೂಮಿಯನ್ನು ಕಿತ್ತುಕೊಳ್ಳುವುದಿಲ್ಲ. ಯಾರುಯಾರಿಗೆ ಎಷ್ಟು ಭೂಮಿ ಇರಬೇಕು ಎಂಬುದನ್ನು ನಿಷ್ಕರ್ಷೆ ಮಾಡುವುದಕ್ಕೆ basic holding, family holding, ceiling limit ಎಂದು ಮಾಡಿದ್ದಾರೆ. ಜಾಸ್ತಿ ಆದಾಯ ಬಂದರೆ ತೆಗೆದುಕೊಳ್ಳಬೇಕೆಂಬ ಉದ್ದೇಶ ಸರ್ಕಾರಕ್ಕೆ ಇಲ್ಲ. ಆದುದರಿಂದ ಸೀಲಿಂಗ್ ಲಿಮಿಟ್ ಒಪ್ಪಿಕೊಳ್ಳಲೇಬೇಕು. ಮುಂದೆ ಸರ್ಕಾರದ ಸಹಾಯದಿಂದ ಆಗಬೇಕಾದಂಥ ಅನೇಕ ನೀರಾವರಿ ಕಾಮಗಾರಿಗಳಿವೆ—ಹತ್ತಾರು ಸಾವಿರ ಎಕರೆ ಖುಷ್ಕಿ ಜಮೀನು ಸಾಗುವಳಿಯಾಗಿ ತರೀಜಮೀನಾಗಿ ಮಾರ್ಪಾಡು ಆಗಬೇಕಾಗುತ್ತದೆ. ಅಂಥ ಸಂದರ್ಭಗಳಲ್ಲಿ ಒಂದು ಮಿತಿಯನ್ನು ಹಾಕಿ ಹೆಚ್ಚು ಜಮೀನನ್ನು ಹೊಂದಿರುವುದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಸರ್ಕಾರದವರು ಒಂದು ಮಿತಿಯನ್ನಿಟ್ಟುಕೊಂಡು ಎಷ್ಟು ಎಕರೆ ಖುಷ್ಕಿ ಜಮೀನು, ಎಷ್ಟು ಎಕರೆ ತರೀ ಜಮೀನು, ಎಷ್ಟು ಎಕರೆ ಬಾಗಾಯಿತು ಜಮೀನು ಇರಬೇಕೆಂಬುದನ್ನು ನಿಷ್ಕರ್ಷೆ ಮಾಡಬೇಕು.

ಕಾಂಪೆನ್ಸೇಷನ್ ವಿಚಾರದಲ್ಲಿ ಹೇಳಬೇಕಾದರೆ, ಜಪಾನ್ ದೇಶದಲ್ಲಿ ಕೂಡ 40ರಷ್ಟು 45ರಷ್ಟು ಕೊಡುವಂಥಾದ್ದು ಇದೆ. ಕಾಂಪೆನ್ಸೇಷನ್ ಕೊಡುವುದರಲ್ಲಿ ಎರಡುಮೂರು ಅಂಶಗಳನ್ನು ಗಮನಿಸಬೇಕು. ಹಿಂದಿನ ಅನೇಕ ಕಥೆಗಳನ್ನು ಕೇಳಿದ್ದೇವೆ. ರಾಜಾಸ್ಥಾನದಲ್ಲಿ ಮಂತ್ರ ಹೇಳಿದವರು, ನಶ್ಯತೀಡಿಕೊಟ್ಟವರು, ಹೀಗೆ ಯಾರುಯಾರೋ ಭಾರಿ ಜಮೀನ್ದಾರರಾದರು. ಶ್ರೀಮತಿ ನಾಗರತ್ನಮ್ಮನವರು ಕಷ್ಟಪಟ್ಟು ದುಡ್ಡು ಕೊಟ್ಟು ಜಮೀನನ್ನು ತೆಗೆದುಕೊಂಡಿರಬಹುದು. ಇಳಂದೂರು ಜಹಗೀರಿಯನ್ನು ದುಡ್ಡು ಕೊಟ್ಟು ತೆಗೆದುಕೊಂಡರೆಂದು ಹೇಳುವುದಕ್ಕಾಗುವುದಿಲ್ಲ. ಒಳ್ಳೆಯ ಸೇವೆ ಮಾಡಿದರೆಂದು ಆಗಿದ್ದ ರಾಜಮಹಾರಾಜರುಗಳು ಪ್ರೀತಿಯಿಂದ ಕೊಟ್ಟರು. ಜಮೀನು ಯಾವ ಮೂಲದಿಂದ ಬಂತು, ಇನಾಮು ರೂಪದಲ್ಲಿ ಬಂತೋ ಬೇರೆ ರೂಪದಲ್ಲಿ ಬಂತೋ ಅದನ್ನು ನೋಡಿಕೊಂಡು ಕಾಂಪೆನ್ಸೇಷನ್ ಗೊತ್ತು ಮಾಡಬೇಕೆಂದು ಕಾಣುತ್ತದೆ. ಜಮೀನು ಯಾವಾಗ ಒಬ್ಬ ಮನುಷ್ಯನಿಗೆ ಬಂತು, ನಿಜವಾಗಿಯೂ ಕೂಡ ಆ ಮನುಷ್ಯ ಸರಿಯಾದ ಬೆಲೆಯನ್ನು ಕೊಟ್ಟಿರುತ್ತಾನೆಯೇ ಮತ್ತು ಮೂರನೆಯದಾಗಿ ಎಷ್ಟು ವಿಸ್ತೀರ್ಣವಿದೆ ಎಂಬುದನ್ನು ವಿಮರ್ಶೆ ಮಾಡಬೇಕು. ಪ್ಲಾನಿಂಗ್ ಕಮಿಷನವರ ಅಭಿಪ್ರಾಯವೂ ಕೂಡ graduated scales ಪ್ರಕಾರ ಕೊಡಬೇಕೆಂದಿದೆ. ಆದುದರಿಂದ ಒಂದು ಸ್ಕೇಲ್ ಅಥವಾ slab system ಮೇಲೆ ನಿಗದಿ ಮಾಡಬೇಕಾದದ್ದು ಉಚಿತ. ಇವೊತ್ತಿನದಿವಸ ಕೆಲವು ಕಡೆಗಳಲ್ಲಿ ತರಿಜಮೀನಿನ ಬೆಲೆ ಒಂದು ಎಕರೆಗೆ ಆರು ಸಾವಿರ ರೂಪಾಯಿ ಇದೆ. ಸಾವಿರ ಎಕರೆ ಇರುವ ಮನುಷ್ಯನಿಗೂ ಒಂದೇ, 50 ಎಕರೆ, ಐದು ಎಕರೆ ಇರುವ ಮನುಷ್ಯನಿಗೂ ಒಂದೇ ರೀತಿಯ ಕಾಂಪೆನ್ಸೇಷನ್ ಕೊಟ್ಟರೆ ತುಂಬ ಅನ್ಯಾಯವಾಗುತ್ತದೆ. ಅದಕ್ಕೋಸ್ಕರ ಕಾಂಪೆನ್ಸೇಷನ್ ಕೊಡುವಾಗ ಜಮೀನು ಯಾವ ಮೂಲಕ ಬಂತು, ಕಡಮೆ ಮೊತ್ತಕ್ಕೆ ತೆಗೆದುಕೊಂಡದ್ದೇ, ಸರ್ಕಾರದ ಸಹಾಯದಿಂದ ಬಂದಿದ್ದೇ ಎಂಬುದನ್ನೆಲ್ಲ ವಿಮರ್ಶೆ ಮಾಡಿ ಕಾಂಪೆನ್ಸೇಷನ್ ನಿಷ್ಕರ್ಷೆ ಮಾಡಬೇಕು.

ಹತ್ತು ಮೈಲ ದೂರದ ಒಂದು ಮಿತಿಯನ್ನಿಟ್ಟುಕೊಂಡಿದ್ದಾರೆ. ಕೆಲವು ಕಡೆ ಸಂಚಾರ ಸೌಲಭ್ಯಗಳಿಲ್ಲದೆ ಹೋಗಿಬರುವುದಕ್ಕೆ ಬಹಳ ಕಷ್ಟವಾಗಿರುತ್ತದೆ, ಹತ್ತಿರದಲ್ಲಿ ಜನರಿರುವ ಹಳ್ಳಿಗಳಿರುವುದಿಲ್ಲ. ಅಂಥಕಡೆ ಕೆರೆ ತುಂಬಿದಾಗ ಮಾತ್ರ ಅಥವಾ ಕೆರೆಯಲ್ಲಿ ನೀರಿನ ಅವಕಾಶವಿರುವಾಗ ಮಾತ್ರ ದೂರದಲ್ಲಿರುವ ಜನಗಳು ಹೋಗಿ ಗದ್ದೆಯ ವ್ಯವಸಾಯ ಮಾಡಬೇಕಾಗುತ್ತದೆ. ಆ ತರಹ ವ್ಯವಸಾಯ ಮಾಡುವಾಗ ಹತ್ತು ಮೈಲ, ಹದಿನೈದು ಮೈಲಿ ಹೋಗಿ ಬರಬೇಕಾಗುತ್ತದೆ. ಇದರಲ್ಲಿರುವಂತೆಯೇ ಕಾನೂನಾದರೆ, ನಾಳೆಯ ದಿವಸ ಅಲ್ಲಿಗೆ ಹೋಗಿ ನೆಲಸಿ ಜನಗಳಿಗೆ ಸ್ಕೂಲನ್ನು ಕೊಡುವುದಕ್ಕಾಗುತ್ತದೆಯೇ, ಕುಡಿಯುವ ನೀರಿನ ಸೌಕರ್ಯವನ್ನು ಕೊಡುವುದಕ್ಕಾಗುತ್ತದೆಯೇ, ಅಥವಾ ಮಳೆಯ ಆಶ್ರಯದಿಂದ ತುಂಬುವಂಥ ಕೆರೆಗಳು ಸದಾ ಕಾಲದಲ್ಲಿಯೂ ತುಂಬುತ್ತವೆಯೇ, ಎನ್ನುವುದನ್ನೆಲ್ಲ ಯೋಚನೆ ಮಾಡಬೇಕು. ಇದು ದೊಡ್ಡ ಸಮಸ್ಯೆಯಾಗುತ್ತದೆ. ವ್ಯವಸಾಯ ಮಾಡುವುದು ಆಯಾ ಭಾಗದ ಸ್ಥಿತಿಗತಿಗಳ ಮೇಲೆ ಹೋಗುತ್ತದೆ. ಆದ್ದರಿಂದ ಹತ್ತು ಮೈಲಿಯ ಅಂತರವನ್ನು ತೆಗೆದುಹಾಕಬೇಕು.

5-30 P.M.

ನಮ್ಮಲ್ಲಿ ಕಾಂಪ್ಯಾಕ್ಟು ಬ್ಲಾಕು ಇದೆ. ಪ್ಲಾಂಟೇಷನ್ನುಗಳಿಗೆ ಬೇರೆ ಎಕ್ಸೆಂಪ್ಷನ್ನು ಕೊಟ್ಟಿದೆ. ಈ ತರಹ ಚೆನ್ನಾಗಿ ಎಕ್ವಿಪ್ಪು ಮಾಡಿದಂತಹ ದೊಡ್ಡ ಜಮೀನುಗಳನ್ನು ಇಟ್ಟುಕೊಳ್ಳಬಹುದು ಮತ್ತು ಇತರ ಜಮೀನುಗಳನ್ನೂ ಇಟ್ಟುಕೊಳ್ಳಬಹುದು ಎನ್ನುವ ಅರ್ಥವಿದೆ. ಈ ಜಮೀನನ್ನು ಕಾಂಪ್ಯಾಕ್ಟು ಬ್ಲಾಕು ಆಗಿ ಇಟ್ಟುಕೊಂಡು ಬೇರೆ ತರಹ ಜಮೀನನ್ನೂ ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಡಬಾರದು.

ಇಷ್ಟು ಮಾತನಾಡಲು ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಹೆಚ್. ಎಸ್. ರುದ್ರಪ್ಪ (ಹೊನ್ನಾಳಿ).—ಮಾನ್ಯ ಅಧ್ಯಕ್ಷರೇ, ಕಳೆದ ಮೂರುದಿನಗಳಿಂದ ಇಲ್ಲಿ ಭೂಸುಧಾರಣೆಯ ಮಸೂದೆ ಚರ್ಚೆಯಾಗುತ್ತಿದೆ. ಇದರಲ್ಲಿ ಮುಖ್ಯವಾಗಿ ಕಂಡುಬರುವುದು, ಗೇಣೀದಾರರ ಮತ್ತು ಜಮೀನುದಾರರ ಪ್ರಶ್ನೆ ಎಂದು

(ಶ್ರೀ ಎಚ್. ಎಸ್. ರುದ್ರಪ್ಪ)

ಇದನ್ನು ಚರ್ಚೆ ಮಾಡಬಾರದು. ಇದು ನ್ಯಾಷನಲ್ ಪ್ರಾಬ್ಲಂ ಎಂದು ಚರ್ಚೆಗೆ ಆ ರೀತಿ ತೆಗೆದುಕೊಳ್ಳಬೇಕು. ಈ ಸಮಸ್ಯೆಯನ್ನು ಬಿಡಿಸುವುದರಲ್ಲಿ ಜಮೀನುದಾರರಿಗಾಗಲಿ, ಬಾಕಿ ಹಿಡುವಳಿದಾರರಿಗಾಗಲಿ ವಿರಸವಿಲ್ಲದ ರೀತಿಯಲ್ಲಿ ಮತ್ತು ಹೆಚ್ಚಿಗೆ ಅನ್ಯಾಯವಾಗದ ರೀತಿಯಲ್ಲಿ ಪರಿಶೀಲನೆಮಾಡಬೇಕು. ಈ ರೀತಿ ನೋಡಿಕೊಳ್ಳಲು ಬಹುಶಃ ಕಾಂಗ್ರೆಸ್ಸಿನ ಪಾರ್ಟಿಯವರಲ್ಲದೆ ಇತರ ಎಲ್ಲ ಪಾರ್ಟಿಗಳವರೂ ನೋಡಿಕೊಳ್ಳುವುದು ಅವರ ಕರ್ತವ್ಯ. ಆ ರೀತಿಯಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡಬೇಕು. ನಮ್ಮ ದುರದೃಷ್ಟವೋ ಏನೋ ಎನ್ನುವಂತೆ ನಮ್ಮ ಕಾಂಗ್ರೆಸ್ಸಿನ ಪಾರ್ಟಿಯವರು ಬಂಡವಾಳಗಾರರ ಸಂಸ್ಥೆಗೆ ಸೇರಿದವರೆಂದು ಅನೇಕ ಸ್ನೇಹಿತರುಗಳು ಕಾಂಗ್ರೆಸ್ಸಿನ ಪಾರ್ಟಿಯನ್ನು ಬಿಟ್ಟು ಸೋಷಿಯಲಿಸ್ಟು ಪಾರ್ಟಿಗೆ ಸೇರಿದರು. ಅದರಲ್ಲೂ ಕಮ್ಯೂನಿಸ್ಟಾದರು ಎಂದರು. ಈಚೆಗೆ ಸ್ವತಂತ್ರ ಪಾರ್ಟಿ ಎಂದು ಆಯಿತು ಮತ್ತು ಅದಕ್ಕೆ ಹೋಗಿಬಿಟ್ಟರು. ಈ ರೀತಿಯಾದುದು ತಪ್ಪು. ದೇಶದಲ್ಲಿ ಈ ರೀತಿಯ ಭಾವನೆಯನ್ನುಂಟುಮಾಡಿರುವುದು ಸದ್ಭಾವನೆಯಲ್ಲ. ಆದುದರಿಂದ ಈ ಸಮಸ್ಯೆಯನ್ನು ಎಲ್ಲ ಪಾರ್ಟಿಗಳವರೂ ಸೇರಿಕೊಂಡು ಸುಗಮವಾಗಿ ಬಿಡಿಸಬೇಕು. ಈ ಮಸೂದೆ ಈಗ ಸೆಲೆಕ್ಟು ಕಮಿಟಿಗೆ ಹೋಗಿ ಸ್ವಲ್ಪ ಬದಲಾವಣೆಯಾಗಿ ಬರುತ್ತದೆ. ಅದನ್ನೂ ಕೂಡ ಪುನಃ ಬದಲಾವಣೆ ಮಾಡಬೇಕಾದರೆ ಈ ಸಭೆಯ ಮುಂದೆ ಬರುತ್ತದೆ. ಆಗ ಬೇಕಾದರೆ ಮಾಡಬಹುದು. ಮುಖ್ಯವಾಗಿ ಹಳ್ಳಿಯಲ್ಲೇ ವಾಸಮಾಡುತ್ತಿದ್ದು ಭೂಮಿಯನ್ನು ವ್ಯವಸಾಯಮಾಡಿ ಉತ್ತಮಪಡಿಸುವುದಕ್ಕೆ ಸಾಧ್ಯವೇ ಎನ್ನುವುದನ್ನು ನಮ್ಮ ನಾಯಕರುಗಳೆಲ್ಲ ಯೋಚನೆ ಮಾಡುತ್ತಿದ್ದಾರೆ ಮತ್ತು ದೇಶದಲ್ಲಿರುವ ಇತರ ಪಾರ್ಟಿಗಳವರೂ ತಮ್ಮತಮ್ಮ ಅಭಿಪ್ರಾಯಗಳನ್ನು ಕೊಡುತ್ತಿದ್ದಾರೆ. ಆದರೆ ಈಗ ನಮ್ಮ ಮುಂದೆ ಇರುವ ಸಮಸ್ಯೆ ಎಂದರೆ ಇನಾಂದಾರರು, ದೊಡ್ಡದೊಡ್ಡ ಜಮೀನುದಾರರು ಇವರನ್ನು ಮೊಟಕು ಮಾಡುತ್ತಾರೆಂದು ಹೇಳುತ್ತಾರೆ. ಇದಲ್ಲದೆ ಸಣ್ಣಸಣ್ಣ ಹಿಡುವಳಿದಾರರು, ಗೇಣೀದಾರರು ಬೇರೆ ಇದ್ದಾರೆ. ಈ ಜಮೀನುದಾರರ ಮತ್ತು ಗೇಣಿದಾರರ ಸಂಬಂಧವನ್ನು ನಿವೃತ್ತಿ ಮಾಡುತ್ತಾರೆನ್ನುವ ವಾದ ಸರಿಯಲ್ಲ. ವ್ಯವಸಾಯದಿಂದ ಯಾರೂ ಹೆಚ್ಚಾಗಿ ಸಂಪಾದನೆಯನ್ನು ಮಾಡುತ್ತಿಲ್ಲ. ಜಪಾನು ಮತ್ತು ಅಮೇರಿಕದ ಪ್ರಶ್ನೆಯನ್ನು ಬಿಟ್ಟುಬಿಡಿ. ನಮ್ಮ ಮಾನ್ಯ ಸದಸ್ಯರಾದ ಮೂಕಪ್ಪನವರಿಗೂ ಗೊತ್ತಿದೆ. ಕೆ. ಜಿ. ಒಡೆಯರು ಎಂದು ಇದ್ದರು. ಆಗ ಗೇಣೀದಾರರಿಗೂ ಮತ್ತು ಜಮೀನುದಾರರಿಗೂ ಒಂದು ದೊಡ್ಡ ಸತ್ಯಾಗ್ರಹ ಎಂದರೆ ಕಾಗೋಡು ಸತ್ಯಾಗ್ರಹ ಎನ್ನುವುದು ನಡೆಯಿತು. ಆಗ ಏನಾಯಿತು ಎನ್ನುವುದು ನಮ್ಮ ಶ್ರೀ ಮೂಕಪ್ಪನವರಿಗೂ ಚೆನ್ನಾಗಿ ಗೊತ್ತು. ಅವರೇನೋ ಆಗ ಪಾರ್ಲಿಮೆಂಟಿನ ಮೆಂಬರಾಗಿದ್ದರು. ಒಡೆಯರು ಎಂದರೆ ಪಲ್ಲಕ್ಕಿ ಒಡೆಯರೆಂದು ಬಿರುದುಬಾವಲಿ ಹಾಕಿಕೊಂಡು ಇರುವಂತಹವರು, ಮೂರುಸಾವಿರ ರೂಪಾಯಿಗಳಷ್ಟು ಕಂದಾಯ ಕೊಡತಕ್ಕವರು ಅವರು ಯಾವಾಗಲೂ ಸಾಲದಲ್ಲೇ ಇದ್ದರು. ಗೇಣೀದಾರರೂ ಅವರೂ ಬಹುಕಾಲದಿಂದಲೂ ಒಂದೇ ಸಂಬಂಧದವರಂತೆ ಇದ್ದರು ಎನ್ನುವಂತಹ ಭಾವನೆ ಇದೆ. ಏನೋ ಈಗ ಕಾರಣಾಂತರಗಳಿಂದ ವ್ಯತ್ಯಾಸವಾಗಿಬಿಟ್ಟಿದೆ. ಪ್ರತಿಯೊಬ್ಬರೂ ಅವರ ಮನೆತನಕ್ಕೆ ಸೇರಿದವರಂತೆ ಇದ್ದರು. ಕೆಲವರನ್ನು ದತ್ತು ಕೂಡ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ಎಷ್ಟೋ ಜನ ವಿದ್ಯಾವಂತರಾದರು ಮತ್ತು ಕಾಲವೂ ಬದಲಾವಣೆಯಾಗುತ್ತಿದೆ.

ಶ್ರೀ ಕಡಿದಾಳ್ ಮಂಜಪ್ಪ.—ಅದು ಕಾಲಮಹಿಮೆ.

ಶ್ರೀ ಹೆಚ್. ಎಸ್. ರುದ್ರಪ್ಪ.—ಇದಕ್ಕೆ ಜಮೀನುದಾರರೇ ಕಾರಣರೇ ಅಥವಾ ಇನ್ನಾರಾದರೂ ಕಾರಣರೇ ಎನ್ನುವುದನ್ನು ಯೋಚನೆಮಾಡಿ ಅದಕ್ಕೆ ತಕ್ಕಂತೆ ಕಾನೂನನ್ನು ಬದಲಾವಣೆಮಾಡಬೇಕು. ಈಗ ಕಾನೂನು ಬಂದಿದೆ. ನಮ್ಮ ದೇಶದ ಆರ್ಥಿಕಸ್ಥಿತಿ ಮತ್ತು ಉತ್ಪನ್ನ ಸರಿಯಾಗಿರಬೇಕು. ಇನ್ನು ಕೆಲವರಲ್ಲಿ ಸೂರ್ಯ ಚಂದ್ರರಿರುವತನಕ ಅವರಿಗೇ ಭೂಮಿಯೇ ಗಂಟು, ಇದಕ್ಕೆ ಏಕೆ ವ್ಯಾಜ್ಯ ಎನ್ನುವ ವಾದವೂ ಬಂದಿದೆ. ಭೂಮಿಯನ್ನು ಸಾಗು ಮಾಡುವುದಕ್ಕೆ ಮನೆಬಿಟ್ಟು ಬಂದು ಅವರೇನಾದರೂ ಪ್ರಯತ್ನಮಾಡಿದ್ದಾರೆಯೇ ಎನ್ನುವುದನ್ನು ತಾವು ಸ್ವಲ್ಪ ಯೋಚನೆಮಾಡಬೇಕು. ಹಳ್ಳಿಯಲ್ಲಿರುವರು ಭೂಮಿಯ ಸಂಬಂಧವನ್ನು ಇಟ್ಟುಕೊಂಡಿರುವರು ಬಹಳ ಸುಖವಾಗಿರತಕ್ಕವರು ಎಂದು ತಿಳಿದಿದ್ದಾರೆ. ನಮ್ಮ ದೇಶದಲ್ಲಿ ಬಹಳ ಸಣ್ಣ ಹಿಡುವಳಿ ಎಂದರೆ ಐದು ಎಕರೆಯಿಂದ ಹತ್ತು ಎಕರೆಗಳವರೆಗೆ ಇರುವುದೇ ಬಹಳ ಜಾಸ್ತಿ. ದೊಡ್ಡ ಹಿಡುವಳಿಗಳು ಕಡಮೆ. ನಮ್ಮಲ್ಲಿರುವ ಅಂಕಿ ಸಂಖ್ಯೆಗಳ ಪ್ರಕಾರ ನೋಡಿದರೆ, ಹತ್ತು ಎಕರೆಗಿಂತ ಕಡಮೆ ಇರತಕ್ಕವರು ಸುಮಾರು ಶೇಕಡ 30 ಇದರ ವಿಸ್ತೀರ್ಣ ಶೇಕಡ 65ರಷ್ಟು ಜಮೀನು. 100ಎಕರೆಗಿಂತ ಕಡಮೆ ಹಿಡುವಳಿ ಇರತಕ್ಕವರು ಒಟ್ಟು ನೂರರಲ್ಲಿ 99.44. ಇದರ ವಿಸ್ತೀರ್ಣ ಶೇಕಡ89.80. ನೂರು ಎಕರೆಯಿಂದ ಇನ್ನೂರು ಎಕರೆಯವರೆಗೆ ಇರುವವರು ಶೇಕಡ 0·44 ಮತ್ತು ಅದರ ವಿಸ್ತೀರ್ಣ ಶೇಕಡ 5.36. ಇನ್ನೂರುಎಕರೆಗಿಂತ ಜಾಸ್ತಿ ಇರತಕ್ಕವರು ·12 ಮತ್ತು ವಿಸ್ತೀರ್ಣ 4·84. ಇನ್ನು ಗೇಣೀದಾರರು ಸ್ವಂತವಾಗಿ ಸಾಗುವಳಿ ಮಾಡುವವರು ಎಷ್ಟು ಹಿಡುವಳಿದಾರರಿದ್ದಾರೆ ಎನ್ನುವುದನ್ನು ನೋಡಿದರೆ ನಮಗೇ ಗೊತ್ತಾಗುತ್ತದೆ. ಆದುದರಿಂದ ಈ ಸಮಸ್ಯೆಯನ್ನು ಇಷ್ಟು ದೊಡ್ಡದಾಗಿ ಮಾಡದೆ ಇದನ್ನು ಯಾವ ರೀತಿಯಾಗಿ ಸರಿಪಡಿಸಬೇಕು ಎನ್ನುವುದನ್ನು ಯೋಚನೆ ಮಾಡಬೇಕು. ಈಗ ವ್ಯವಸಾಯದಲ್ಲಿ 71.2ರಷ್ಟು ಜನ ತೊಡಗಿದ್ದಾರೆ. ಇದರಲ್ಲಿ 4.76 ಸ್ವಂತ ಸಾಗುವಳಿದಾರರು, 9.3 ಗೇಣೀದಾರರು, 10.9 ಕೂಲಿಗಾರರು, 3.4 ಗುತ್ತಿಗೆದಾರರು. ಈ ಸಮಸ್ಯೆ ಏನಾಗಿದೆ ಎಂದರೆ ಒಟ್ಟು ಜನಸಂಖ್ಯೆಯ ಶೇಕಡ 3·4 ರಷ್ಟು ಜನರು ಮಾತ್ರ ಇದರಿಂದ ತೊಂದರೆಗೆ ಒಳಗಾಗುತ್ತಾರೆ. ಪರಿಮಿತಿಯನ್ನು 3,600 ಎಂದು ಮಾಡಿರುವ ವಿಚಾರ ಒಂದು ಮಾತು. ಇಲ್ಲಿ ಯಾರನ್ನಾದರೂ ಮಾಹೆಯಾನ 300 ರೂಪಾಯಿಗಳಷ್ಟು ಸಂಬಳ ಬೇಕೋ, ಇಲ್ಲವೇ ವರ್ಷಕ್ಕೆ 3,600 ರೂಪಾಯಿಗಳಷ್ಟು ಆದಾಯ ಬರುವ ಜಮೀನು ಬೇಕೋ ಎಂದು ಕೇಳಿದರೆ ಯಾವುದನ್ನು ಒಪ್ಪುತ್ತಾರೆ ಎನ್ನುವುದು ತಮಗೇ ಗೊತ್ತಾಗುತ್ತದೆ. ಆದುದರಿಂದ ಈ ಜಮೀನಿನ ಪ್ರಶ್ನೆ ಬಹಳ ಜಟಿಲವಾದ ಪ್ರಶ್ನೆ. ವ್ಯವಸಾಯದಿಂದಲೇ ಹೆಚ್ಚಿನ ಉತ್ಪನ್ನವಾಗುತ್ತದೆ ಎನ್ನುವುದು ತಪ್ಪು. ಮುನ್ನೂರು ರೂಪಾಯಿಗಳಷ್ಟು ಕಂದಾಯ ಕೊಡುತ್ತಿರುವವನ ಸ್ಥಿತಿಯನ್ನು ನೋಡಿದರೆ, ಅವನು ಬೆಳೆದ ದವಸಕ್ಕೆ ಧಾರಣೆಗಳ ಅವ್ಯವಸ್ಥೆಗಳೇ ಕಾರಣ. A period of boom will be followed by a period of slump again. ಆದುದರಿಂದ ಇದೇ ಧಾರಣೆ ಇರುತ್ತದೆ ಎಂದು ನಾವು ತಿಳಿದುಕೊಳ್ಳಬಾರದು. ಜಮೀನು ಒಂದು

ದೊಡ್ಡ ಆಸ್ತಿ ಎಂದು ತಿಳಿದುಕೊಳ್ಳಬಹುದು. ವ್ಯವಸಾಯಮಾಡುವವನ ಆರ್ಥಿಕಸ್ಥಿತಿ ಸರಿಯಾಗುವುದಕ್ಕೆ ಬಹಳ ತೊಂದರೆಪಡಬೇಕಾಗುತ್ತದೆ. ಅದಕ್ಕೆ ಅವರಿಗೆ ಲಾಗೂ ಮಾಡತಕ್ಕ ಜಮೀನು ಏನಿವೆ, ಅದಕ್ಕೆ ಸೆಕ್ಯೂರಿಟಿ of tenure ಇರಬೇಕು. ಸ್ವಂತ ಸಾಗುಗಳಿ ಮಾಡಿಕೊಂಡರೆ ಉತ್ತಮ. ಸ್ವಂತ ಸಾಗುವಳಿಮಾಡುವುದರಿಂದ ಆಹಾರದ ಉತ್ಪತ್ತಿ ಜಾಸ್ತಿ ಆಗುತ್ತದೆ ಎಂದು ಅನೇಕರು ಹೇಳುತ್ತಾರೆ, ಅದು ನಿಜ. ಆದರೆ ನಣ್ಣಸಣ್ಣ ಹಿಡುವಳಿ ಏನು ಇದೆ, ಅದರಲ್ಲಿ ಹೆಚ್ಚು ಉತ್ಪತ್ತಿ ಮಾಡುವುದಕ್ಕೆ ಆಗುವುದಿಲ್ಲ. ಅನೇಕ ಮಾನ್ಯ ಸದಸ್ಯರು ಜಪಾನ್ ವಿಷಯ ಹೇಳಿದರು. ಜಪಾನಿನಲ್ಲಿರತಕ್ಕ ಆರ್ಥಿಕ ವ್ಯವಸ್ಥೆ ಏನಿದೆ, ಅದು ನಮ್ಮ ರೈತರಿಗೆ ಇಲ್ಲ. ಅಲ್ಲಿರತಕ್ಕ ಸೌಲಭ್ಯ ಇಲ್ಲಿ ಇಲ್ಲ. ಇಲ್ಲಿ ನೀರಿನ ಸೌಲಭ್ಯ ಜಾಸ್ತಿ ಇದೆ. ಪ್ರಯತ್ನಪಟ್ಟರೆ, ಉತ್ತಮ ವ್ಯವಸಾಯಮಾಡಿದರೆ ಸುಲಭವಾಗಿ ಜೀವನಮಾಡಬಲ್ಲೆವು. ಆ ದೃಷ್ಟಿ ಇಟ್ಟುಕೊಂಡು ಪ್ರಯತ್ನಮಾಡಬೇಕು. ಅನೇಕರು ಹೇಳಿದರು, ಅಡಿಕೆ, ತೆಂಗು, ಕಾಫೀ, ಏಲಕ್ಕಿ ಎಲ್ಲಕ್ಕೂ ಎಗ್ಜಮ್ಷನ್ ಕೊಟ್ಟುಬಿಟ್ಟಿದ್ದಾರೆ ಎಂದು. ಅದಕ್ಕೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದರು, ಅವೆಲ್ಲಕ್ಕೂ ರಿಯಾಯಿತಿ ಕೊಡಬೇಕೆಂದು ಪ್ಲಾನಿಂಗ್ ಕಮಿಷನ್‌ನವರು ಹೇಳಿದ್ದಾರೆ, ಆದ್ದರಿಂದ ಎಗ್ಜೆಮ್ಷನ್ ಕೊಟ್ಟೆವು ಎಂದು. ಪ್ಲಾನಿಂಗ್ ಕಮಿಷನ್‌ನವರು ಹೇಳಲಿ, ಬಿಡಲಿ, ವಿಮರ್ಶೆಮಾಡುವುದು ನಮ್ಮ ಕರ್ತವ್ಯ. ಈಗ ಹತ್ತು ವರ್ಷಗಳಿಂದ ಎಷ್ಟೋ ಉತ್ಪಾದನೆ ಮಾಡಿದ್ದಾರೆ. ಆದ್ದರಿಂದ ಅವರಿಗೆ ಪ್ರೋತ್ಸಾಹ ಕೊಡುವುದು ನ್ಯಾಯ. ನಮ್ಮ ದೇಶದ ನ್ಯಾಷನಲ್ ಇನ್‌ಕಂ ಜಾಸ್ತಿಮಾಡುವುದು ಬಹಳ ಮುಖ್ಯವಾದುದು. ನಮ್ಮ ದೇಶ ಮುಂದುವರಿಯಬೇಕಾದರೆ ಯಾರುಯಾರು ಸಂಪಾದನೆಮಾಡುತ್ತಾರೋ ಅವರಿಗೆ ಪ್ರೋತ್ಸಾಹಕೊಡಬೇಕು. ಉತ್ಪನ್ನ ಜಾಸ್ತಿಯಾಗಬೇಕಾದರೆ ಫ್ರೀ ಎಕಾನಮಿ ಇರಬೇಕು, ಫ್ರೀ ಎಕಾನಮಿ ಪ್ರಕಾರ ಜಾಸ್ತಿಆಗುತ್ತದೆ ಎಂದು ಹೇಳುತ್ತಾರೆ. ಕಂಟ್ರೋಲ್ಡ್ ಎಕಾನಮಿ ಪ್ರಕಾರ ಜಾಸ್ತಿ ಆಗಬಹುದು. ನಮ್ಮ ದೇಶ ಪೂರ್ತಿ ಡೆವಲಪ್ ಆಗಿಲ್ಲ. ಪ್ರಜಾಪ್ರಭುತ್ವದಲ್ಲಿ ಫ್ರೀ ಎಕಾನಮಿಯಿಂದ ಪ್ರಯೋಜನವಾಗಿಲ್ಲ. ಆದ್ದರಿಂದ ನಮ್ಮಲ್ಲಿ ಸ್ವಲ್ಪ ಮಿಕ್ಸೆಡ್ ಎಕಾನಮಿ ಇದೆ. ಅದು ನ್ಯಾಯವಾದದ್ದು ಎಂದು ಕಾಣುತ್ತದೆ. ಅನೇಕ ಟೀಕೆಗಳು ಬರುತ್ತವೆ. ಅವು ಬರುವುದು ಸ್ವಾಭಾವಿಕ.

Sri C. J. MUCKANNAPPA.—Will the Hon'ble Member explain, what is meant by mixed economy?

ಶ್ರೀ ಎಚ್. ಎಸ್. ರುದ್ರಪ್ಪ.—ಮಿಕ್ಸೆಡ್ ಎಕಾನಮಿಯಲ್ಲಿ both public and private sectors ಎರಡೂ ಸೇರಿವೆ. ಹೀಗೆ ನಾವು ಯೋಚನೆಮಾಡಬೇಕು. ನಮ್ಮ ದೇಶದಲ್ಲಿ ಕಾಫಿಗೆ ಏತಕ್ಕೆ ಎಗ್ಜಮ್ಷನ್ ಮಾಡಿದ್ದಾರೆ? ನಾನು ಸರ್ಕಾರದವರಲ್ಲೂ, ಮತ್ತು ಮಾನ್ಯ ಸದಸ್ಯರಲ್ಲೂ ಕೇಳಿಕೊಳ್ಳುತ್ತೇನೆ. ಕಾಫಿ ಅವನ ಆಸ್ತಿಯೆಂದು ಭಾವಿಸುವುದಕ್ಕೆ ಆಗುವುದಿಲ್ಲ. ಅದನ್ನು ಯಾರು ಉತ್ಪತ್ತಿಮಾಡಿದರೂ ಅದು ದೇಶದ ಆಸ್ತಿಯೆಂದು ಭಾವಿಸಬೇಕು. ಅದನ್ನು 100 ಎಕರೆಗೆ ಮಿತಿಮಾಡಿದ್ದು ತೊಂದರೆಯಾಗುತ್ತದೆ ಎಂದು ಹೇಳುತ್ತೇನೆ. ದೇಶದ ಪರವಾಗಿ ಅವನು ಕಾಫಿಬೆಳೆಯುತ್ತಿದ್ದಾನೆಂದು ಹೇಳಬಹುದು.

ಶ್ರೀ ವಿ. ಶ್ರೀನಿವಾಸಶೆಟ್ಟಿ.—ಮ್ಯಾನೇಜ್‌ಮೆಂಟ್ ಎಂದರೆ, Trustees of the Board ಎಂದು ಹೇಳಿದ ಹಾಗೆ.

ಶ್ರೀ ಎಚ್. ಎಸ್. ರುದ್ರಪ್ಪ.—ದೇಶದಲ್ಲಿ ಅಪಾರವಾದ ದುಡ್ಡು ಸಂಪಾದನೆ ಆಗುತ್ತದೆ. ಅದನ್ನು ಎಲ್ಲರೂ ಅನುಭವಿಸುವುದಕ್ಕೆ ಅನುಕೂಲಮಾಡಬೇಕು. 100 ಎಕರೆ ಪರಮಾವಧಿ ಇರಬೇಕೆಂದು, ಪ್ಲಾನಿಂಗ್ ಕಮಿಷನ್ನಿನವರು ಮಾಡಿದ್ದಾರೆ ಎಂದು ಹೇಳುತ್ತಾರೆ. ಪ್ಲಾನಿಂಗ್ ಕಮಿಷನ್‌ನವರು ಯಾವ ಬಂಡವಾಳಗಾರರ ಪರವಾಗಿಯೂ ಮಾಡಿಲ್ಲ. ನಮ್ಮ ದೇಶದ ಪರಿಸ್ಥಿತಿಯನ್ನು ನೋಡಬೇಕು. ನಮ್ಮ ದೇಶದಲ್ಲಿ ಬೆಳೆಯತಕ್ಕ ಕಾಫಿ ಪ್ರಪಂಚದಲ್ಲಿ ಬೆಳೆದ ಕಾಫಿಯ ಒಂದು ಪರ್ಸೆಂಟ್ ಆಗಿದೆ. ಒಂದುಲಕ್ಷ 60 ಸಾವಿರ ಎಕರೆಯಲ್ಲಿ ಕಾಫಿ ಬೆಳೆಯುತ್ತಿದ್ದಾರೆ. ಕಾಫೀ ಬೆಳೆಯಲು ಲಾಯಕ್ಕಾದ ಜಮೀನು ಇನ್ನೂ ಇದೆ. ನಮ್ಮ ದೇಶದಲ್ಲಿರುವ ಜಮೀನಿನಿಂದ ಹೆಚ್ಚು ಸಂಪಾದನೆ ಮಾಡುವುದು ನಮ್ಮ ಕರ್ತವ್ಯ. 1900ನೆಯ ಇಸವಿಯಲ್ಲಿ ಮೂರುಲಕ್ಷ ಎಕರೆ ಕಾಫಿ ಬೆಳೆಯುವ ಜಮೀನು ಇತ್ತು. ಧಾರಣೆ ಬಿದ್ದದ್ದರಿಂದ ಆ ಜಮೀನಿನ ವಿಸ್ತೀರ್ಣ ಬಿದ್ದುಹೋಯಿತು. ಕಾಫಿ ಹೊರಗೆ ಕಳುಹಿಸಿ ಬೇಕಾದಷ್ಟು ದ್ರವ್ಯ ಸಂಪಾದನೆಮಾಡಬಹುದು. 100ಲಕ್ಷ ಎಕರೆಗಳಿಗಿಂತಲೂ ಇನ್ನೂ ಜಾಸ್ತಿ ಜಮೀನು ಹಾಗೆಯೇ ಇದೆ. ನಾರ್ತ್ ಕೆನರಾ ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಅನೇಕ ಭಾಗಗಳಲ್ಲಿ ಹಾಗೆಯೇ ಇದೆ. ಅವುಗಳನ್ನು ಉಪಯೋಗಮಾಡಿಕೊಳ್ಳಬೇಕು.

An HON'BLE MEMBER.—What is the condition of plantation labour in those places?

ಶ್ರೀ ಎಚ್. ಎಸ್. ರುದ್ರಪ್ಪ.—ಶ್ರೀ ಜತ್ತಿಯವರು ರಿಪೋರ್ಟ್‌ತಯಾರುಮಾಡಿದ್ದಾರೆ. ಗೇಣೀದಾರರು ಮತ್ತು ಲೇಬರರ್ಸ್ ವಿಚಾರ ಏನು ಹೇಳಿದ್ದಾರೆ ಎನ್ನುವುದು ಅದರಲ್ಲಿ ಇದೆ. ಅವರ ಅಭಿಪ್ರಾಯ ಏನು ಎಂಬುದನ್ನು ತಿಳಿಯಬೇಕು. ಈ ತೋಟಗಳನ್ನು ಒಡೆಯಬೇಕು ಎಂದು ಲೇಬರರ್ಸ್ ಹೇಳಿದರೆ ಒಡೆಯೋಣ. ಒಬ್ಬನೇ ಸಂಪಾದನೆ ಮಾಡುವುದಕ್ಕಿಂತ ನಾನೂ ಮಾಡುತ್ತೇನೆ ಎಂದರೆ ಅದಕ್ಕೆ ಅವಕಾಶಕೊಡಬೇಕು. ಕಾಂಗ್ರೆಸ್ ಸಮಿತಿಯಿಂದ ಕಮಿಟಿಮಾಡಿ ಯಾರು ಬೇಕಾದರೂ ಒಂದು ಸಮಿತಿಯ ಮುಂದೆ ವಿಚಾರ ಹೇಳಬಹುದು ಎಂದು ಹೇಳಿದ್ದರು. ಎಲ್ಲರೂ ಪ್ಲಾಂಟೇಷನ್ ಪರವಾಗಿ ಬಂದರು. ಆದರೆ ಒಬ್ಬಿಬ್ಬರು ಟ್ರೇಡ್ ಯೂನಿಯನ್ನಿನ ಪರವಾಗಿ ಬಂದು ಹೇಳಿದರು. ಸಣ್ಣಸಣ್ಣ ಪ್ಲಾಂಟೇಷನ್ ಇದ್ದರೆ ಲೇಬರರ್ಸ್‌ಗೆ ಸೌಕರ್ಯ ದೊರೆಯುವುದಿಲ್ಲ ಎಂದು ಅನೇಕರು ಹೇಳಿದರು. ಲೇಬರರ್ ಜೊತೆಗೆ ಕೋ-ಆಪರೇಟ್‌ಮಾಡಿ ಮಾಡುತ್ತೀರಾ ಎಂದು ಕೇಳಿದ್ದಕ್ಕೆ ಅವರು ಒಪ್ಪಲಿಲ್ಲ. ಲೇಬರರ್ಸ್‌ಗೆ ಹೆಚ್ಚಿಗೆ ವೇಜಸ್ ಕೊಡುವುದು ಒಳ್ಳೆಯದು ಎಂಬುವನ್ನು ನಾನು ಒಪ್ಪುತ್ತೇನೆ ಬೇರೆ ಲೇಬರರ್ಸ್ ಸೇರಿ ಮ್ಯಾನೇಜ್‌ಮೆಂಟಿನಲ್ಲಿ ಷೇರು ಕೊಡಿ ಎಂದು ಹೇಳಿದರೆ ಅದು ತಪ್ಪಾಗಲಾರದು ಅವರು ಕೂಲಿಗಾರರು ಎಂದು ಹೇಳತಕ್ಕದ್ದು ತಪ್ಪು. ಅವರು ಇದರಲ್ಲಿ ಭಾಗವಹಿಸಿ ದೇಶದಲ್ಲಿ ಸಂಪಾದನೆ ಮಾಡುವ ಅವಕಾಶ ಅವರಿಗೆ ದೊರೆಯಬೇಕು. ಈ ರೀತಿ ಮಾಡುವುದು ಪ್ಲಾಂಟೇಷನ್‌ನಲ್ಲಿ ಉತ್ತಮ ಎಂದು ಕಾಣುತ್ತದೆ. ಬೇಕಾದಷ್ಟು ಜಮೀನು ಇದ್ದು ಅಲ್ಲಿ ಬೆಳೆದ ಕಾಫಿಯನ್ನು ಹೊರದೇಶಕ್ಕೆ ಕಳುಹಿಸಿ ದುಡ್ಡು ಸಂಪಾದನೆ ಮಾಡುವುದನ್ನು ಏತಕ್ಕೆ ಬಿಟ್ಟಿ

(ಶ್ರೀ ಹೆಚ್. ಎಸ್. ರುದ್ರಪ್ಪ)

ದ್ದಾರೆ ಎಂದು ಕೇಳಿದ್ದಾರೆ. ಈ ಭೂಸುಧಾರಣೆ ಯಿಂದ ಏನಾಗುತ್ತದೆ ಎಂದು ನೋಡುವ ಮೊದಲೇ ದುಡ್ಡು ಚೆಲ್ಲುವುದು ಕಷ್ಟ ಎಂದು ಹೇಳಿದರು. ಅನೇಕರು ಹೇಳಿದರು, 500 ಎಕರೆ ಕೆಲವರಿಗೆ ಇದೆ ಎಂದು. ಆದರೆ 100 ಎಕರೆ ಇರುವವರು ಕೊಂಡುಕೊಳ್ಳುವ ಹಾಗಿಲ್ಲ ಎಂದು ಹೇಳಿದ್ದಾರೆ. ನಾನು ಅವರೊಡನೆ ಚರ್ಚೆಮಾಡಿದ್ದೇನೆ. ಈಗ ಇರತಕ್ಕ ಪ್ಲಾಂಟೇಷನ್ಸ್ ಏನು ಇವೆ, ಅವುಗಳನ್ನು ಮಾರುವುದಕ್ಕೂ ತೆಗೆದುಕೊಳ್ಳುವುದಕ್ಕೂ ಅಡ್ಡಿಮಾಡಿದರೆ ಯಾರು ತೆಗೆದುಕೊಳ್ಳುತ್ತಾರೆ? ಅದಕ್ಕೋಸ್ಕರ 100 ಎಕರೆ ಎಂದು ಮಾಡಬೇಡಿ. 100 ಎಕರೆ ಇರುವ ಕಾಫಿ ತೋಟಗಳ ವಿವರಗಳನ್ನು ಕಾಫೀ ಬೋರ್ಡಿನವರು ತಯಾರುಮಾಡಿದ್ದಾರೆ. 100 ಎಕರೆ ಇರತಕ್ಕವರು ಎಕರೆಗೆ 190 ಪೌಂಡ್ಸ್ ಆವರೇಜ್ ಪ್ರೊಡ್ಯೂಸ್ ಮಾಡಿದ್ದಾರೆ. ಆದರೆ 100ಕ್ಕಿಂತ ಜಾಸ್ತಿ ಇರುವವರು 400 ಪೌಂಡ್ ಬೆಳೆದಿದ್ದಾರೆ. ಉತ್ಪತ್ತಿ ಜಾಸ್ತಿ ಮಾಡುವವರು ಸೇರಬೇಕು. ನಾನು ಹೇಳುವುದು ಭೂಸುಧಾರಣೆ ಮಾಡಿದಾಗ್ಯೂ ಪರಮಾವಧಿ ಏತಕ್ಕೆ ಇಡುತ್ತೀರಿ? ಈ ದಿವಸ ಪರಮಾವಧಿಯನ್ನು ಏತಕ್ಕೆ ನಿಗದಿಮಾಡಬೇಕು? 100 ಎಕರೆಗಿಂತ ಜಾಸ್ತಿ ಇರುವ ಜಮೀನು ಇನ್ನೂ ಎರಡುಲಕ್ಷ ಎಕರೆ ಕಾಫಿ ಬೆಳೆಯತಕ್ಕದ್ದು ಇದೆ. ಮೆಣಸಿನಬೀಜ ಹಾಕುವುದಕ್ಕೆ ಎರಡು ಲಕ್ಷ ಎಕರೆ ಇರಬಹುದು. ಏಲಕ್ಕಿ ಹಾಕುವುದಕ್ಕೆ ಎರಡುಲಕ್ಷ ಅಥವಾ ಮೂರುಲಕ್ಷ ಎಕರೆ ಇರಬಹುದು. ಅನೇಕರಿಗೆ ತೋಟಮಾಡಿ ಎಂದು ಹೇಳಿದೆ. ಅವರು ಸ್ವಲ್ಪ ಭಯಪಟ್ಟರು. ಈ ಸಮಸ್ಯೆಯನ್ನು ಸೆಲೆಕ್ಟ್ ಕಮಿಟಿಯವರು ನೋಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ. ಈಗ ಇರುವ ಪ್ಲಾಂಟೇಷನ್ ಹಾಳಾಗಬಾರದು. ಇನ್ನೂ ಎರಡುಲಕ್ಷ ಎಕರೆ ಜಮೀನಿನಲ್ಲಿ ಇವೊತ್ತು ಕಾಫೀ ಬೆಳೆಯುವುದಕ್ಕೆ ಅವಕಾಶವಿದೆ. ಜಮೀನು ಯಾರಿಗೆ ಇಲ್ಲವೋ ಅಂಥವರಿಗೆ ಅವಕಾಶಮಾಡಿಕೊಡಿ. ಕಷ್ಟಪಟ್ಟು ವ್ಯವಸಾಯ ಮಾಡಿದರೂ ಎಕರೆಗೆ ಎಂಟು ಪಲ್ಲ ಬತ್ತ ಬೆಳೆಯುವ ಜಮೀನು ಏತಕ್ಕೆ ಕೊಡಿಸುತ್ತೀರಿ? ಎರಡು-ಮೂರು, ನಾಲ್ಕು ಎಕರೆ ಕೊಟ್ಟು ಕೋ-ಆಪರೇಟಿವ್ ಬೇಸಿಸ್ ಮೇಲೆ ತೋಟಮಾಡಿಸಿ ಒಬ್ಬೊಬ್ಬರು ಒಂದು ಎಕರೆ ಮಾಡಿದರೂ ಸಾಕು. ಸಾವಿರಾರು ರೂಪಾಯಿ ಸಂಪಾದನೆ ಮಾಡುವ ಶಕ್ತಿ ಇದೆ. ಈಗಇದು ನ್ಯಾಷನಲ್ ವೇಸ್ಟ್ ಆಗುತ್ತದೆ.

Sri KADIDAL MANJAPPA.—In a taluk there are four to five thousand acres. I am prepared to give these lands within a few months, if people are ready to go there.

ಶ್ರೀ ಎಚ್. ಎಸ್. ರುದ್ರಪ್ಪ.—ಜಮೀನು ಹಂಚುವುದಕ್ಕೆ ಏನು ಮಾಡಿದ್ದೀರಿ ಅದರಲ್ಲಿ ಜಮೀನು ಇಲ್ಲದವರಿಗೆ ಮೊದಲು ಕೊಡಿ, ಆಮೇಲೆ ಸಣ್ಣ ಜಮೀನ್ದಾರರಿಗೆ ಕೊಡಿ, ಆಮೇಲೆ ದೊಡ್ಡ ಜಮೀನ್ದಾರರಿಗೆ ಕೊಡಿ. ಆ ವ್ಯವಸ್ಥೆಮಾಡಬೇಕು. ಜಮೀನು ಬಹಳ ಕಾಲ ಅದೇ ರೀತಿ ಇರಕೂಡದು. ನಾಳೆ ಭೂಮಿಯನ್ನು ಪೂರ್ತಿ ಡೆವಲಪ್ ಆದಮೇಲೆ ಹಂಚಿ, ಲೇಬರರ್ಸ್ ಯಾರಾದರೂ ಜಮೀನುಮಾಡುತ್ತೇವೆ ಎಂದು ಮುಂದೆಬಂದರೆ ಅವರಿಗೂ ಕೊಡಿ.

ಶ್ರೀ ಡಿ. ಮೂಕಪ್ಪ.—ಹೆಚ್ಚು ಭೂಮಿ ಇದ್ದರೆ ಹೆಚ್ಚು ಉತ್ಪನ್ನಮಾಡಬಹುದು ಎಂತಲೋ ತಮ್ಮ ಅಭಿಪ್ರಾಯ?

ಶ್ರೀ ಎಚ್. ಎಸ್. ರುದ್ರಪ್ಪ.—ಶ್ರೀ ಮೂಕಪ್ಪನವರು ಪ್ರಶ್ನೆ ಕೇಳುವುದು ನ್ಯಾಯವಾದದ್ದು. ಜಪಾನ್, ಚೈನಾ ನೋಡಿದರೆ ಗೊತ್ತಾಗುತ್ತದೆ. ಅಮೇರಿಕಾ ನೋಡಿದರೆ ಅಲ್ಲಿನ ಸ್ಥಿತಿ ಇನ್ನೂ ವಿಚಿತ್ರವಾಗಿದೆ.

ಶ್ರೀ ಬಿ. ಎನ್. ಬೋರಣ್ಣಗೌಡ (ಬೇಲೂರು).—ಜಪಾನಿನಲ್ಲಿ ಮ್ಯಾಗ್ಸಿಮಮ್ ಹೋಲ್ಡಿಂಗ್ಸ್ ಎಷ್ಟಿದೆ?

ಶ್ರೀ ಎಚ್. ಎಸ್. ರುದ್ರಪ್ಪ.—ಆವರೇಜ್ ಹೋಲ್ಡಿಂಗ್ಸ್ ಸುಮಾರು ನಾಲ್ಕು ಎಕರೆ ಇದೆ.

ಶ್ರೀ ಎಂ. ರಾಮಪ್ಪ.—ಇನ್ಕಂ ಜಾಸ್ತಿ, ಎಕ್ಸ್‌ಪೆಂಡಿಚರ್ ಕಡಮೆ ಎಂದು ಕಾಫಿ ವಿಚಾರದಲ್ಲಿ ಹೇಳುತ್ತಿದ್ದೀರಿ. ಅದರಲ್ಲಿ ಅಡಿಕೆ, ತೆಂಗು ಸೇರಿದೆಯೇ ಹೇಗೆ?

ಶ್ರೀ ಎಚ್. ಎಸ್. ರುದ್ರಪ್ಪ.—ವ್ಯವಸಾಯದಲ್ಲೇ ಆಗಲಿ ಇಂಡಸ್ಟ್ರಿಯಲ್ಲಾಗಲಿ ಯಾವ ಸೆಕ್ಟರ್‌ನಲ್ಲೇ ಆಗಲಿ ಲಾರ್ಜ್ ಸ್ಕೇಲಿನಲ್ಲಿ ಮಾಡಿದರೆ ಅದರ ಖರ್ಚು ಕಡಮೆ ಆಗುತ್ತದೆ. ಉತ್ಪತ್ತಿ ಜಾಸ್ತಿ ಆಗುತ್ತದೆ. ಅದು ಸ್ವಾಭಾವಿಕವಾದದ್ದು.

ಶ್ರೀ ಎಂ. ರಾಮಪ್ಪ.—ತಾವು ಕಾಫಿ ಬೋರ್ಡಿನವರು ಇಷ್ಯೂಮಾಡಿದ ಸ್ಟ್ಯಾಟಿಸ್ಟಿಕ್ಸ್ ಕೋಟ್ ಮಾಡಿದಿರಿ. ಅದೇರೀತಿ ಅಡಿಕೆ, ತೆಂಗು ಇವುಗಳ ಸ್ಟ್ಯಾಟಿಸ್ಟಿಕ್ಸ್ ಯಾರಾದರೂ ಪಬ್ಲಿಷ್‌ಮಾಡಿದ್ದಾರೆಯೇ? ಅದನ್ನು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಎಚ್. ಎಸ್. ರುದ್ರಪ್ಪ.—ನನ್ನ ಸ್ನೇಹಿತರು ಹೇಳುವುದು ಬಾಕಿ ಪ್ಲಾಂಟೇಷನ್‌ಗಳನ್ನೂ ಲಿಮಿಟ್ ಮಾಡಬೇಕು ಎಂದು. ಯಾವುದಾದರೂ ದೊಡ್ಡದಾಗಿ ಮಾಡಿದರೆ ಖರ್ಚುಕಡಮೆ ಆಗುತ್ತದೆ. ಏತಕ್ಕೆಂದರೆ ತಾವು ಕೋ-ಆಪರೇಟಿವ್ ಫಾರಂಮಾಡಿದರೆ ದುಡ್ಡು ಕಡಮೆ ಆಗುತ್ತದೆ, ಈಲ್ಡ್ ಜಾಸ್ತಿ ಆಗುತ್ತದೆ ಎಂದು ಯೋಜನೆಮಾಡಿದ್ದೀರಿ. ಜಾಸ್ತಿ ಜನ ಸೇರಿ ಮಾಡಿದರೆ ಹೆಚ್ಚು ಆದಾಯಬರುತ್ತದೆ. ಕೋ-ಆಪರೇಟಿವ್ ಫಾರ್ಮಿಂಗ್ ದೊಡ್ಡದು. ಆದಷ್ಟು ಖರ್ಚುಕಡಮೆ ಆಗುತ್ತದೆ, ಮತ್ತು ಎಫಿಷಿಯೆಂಟಾಗಿ ಮಾಡಬಹುದು ಎಂದು ಮಾಡಿದ್ದೀರಿ. ದೊಡ್ಡದು ಮಾಡಬೇಕಾದರೆ ಫೈನಾನ್ಸ್ ಇರಬೇಕು. ಯಾವ ಉದ್ಯಮವೇ ಆಗಲಿ ಇಂಡಸ್ಟ್ರಿಯೇ ಆಗಲಿ ಎಷ್ಟು ಫೈನಾನ್ಸ್ ಖರ್ಚುಮಾಡುತ್ತಾರೆ ಅಷ್ಟು ದುಡ್ಡು ಉತ್ಪತ್ತಿ ಆಗುತ್ತದೆ.

ಶ್ರೀ ಡಿ. ಮೂಕಪ್ಪ.—ಮುಂಚೆ ತಾವು ವ್ಯವಸಾಯ ಮಂತ್ರಿಗಳಾಗಿದ್ದಾಗ ಹೇಳಿದಿರಿ, ರೈತವಾರಿ ಮಾಡತಕ್ಕ ಮನುಷ್ಯ ಎಷ್ಟು ಕಡಮೆ ಪ್ರಮಾಣದಲ್ಲಿ ಜಮೀನು ಇಟ್ಟುಕೊಳ್ಳುತ್ತಾನೋ, ಅಂಥವನು ಹೆಚ್ಚಿಗೆ ಉತ್ಪತ್ತಿ ಮಾಡಲು ಸಾಧ್ಯ ಎಂದು. ಉದಾಹರಣೆಗೆ ಜಪಾನ್ ಮಾದರಿ ಕ್ರಮ ಹೇಳುತ್ತಿದ್ದೀರಿ, ಮೂರು ಎಕರೆ ಜಮೀನು ಇಟ್ಟುಕೊಂಡು ಮನುಷ್ಯ 30ಸಾವಿರ ರೂಪಾಯಿ ಉತ್ಪನ್ನ ಬೆಳೆಯುತ್ತಾನೆ. 20 ಎಕರೆ ಇರುವವನೂ ಕೂಡ ಹತ್ತುಸಾವಿರ ಉತ್ಪನ್ನ ಬೆಳೆಯುತ್ತಿಲ್ಲ. ಆದ್ದರಿಂದ ಕಡಮೆ ಪ್ರಮಾಣದಲ್ಲಿ ಜಮೀನು ಇದ್ದರೆ ಹೆಚ್ಚಿಗೆ ಉತ್ಪನ್ನಮಾಡಲು ಸಾಧ್ಯ ಎಂದು ತಾವು ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದಾಗ ಹೇಳಿದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಚ್. ಎಸ್. ರುದ್ರಪ್ಪ.—ಈಗಲೂ ಅದೇ ಅಭಿಪ್ರಾಯದಲ್ಲಿರುವುದು. ಚಿಕ್ಕದು, ದೊಡ್ಡದು ಎಂದು ಲೆಕ್ಕಮಾಡಿಲ್ಲ. ಚಿಕ್ಕದು ಎಂದರೆ ಮೂರು-ನಾಲ್ಕು ಎಕರೆ ಇದ್ದರೆ ಚಿಕ್ಕದು ಅಲ್ಲ. ನೀವು ಮೂರು-ನಾಲ್ಕು ಎಕರೆ ಸಾಗುಮಾಡುತ್ತೀರಿ. ಅದರಿಂದ ಏನಾಗುತ್ತದೆ ಎಂದು ನೋಡುತ್ತಿದ್ದೀರಿ. ಜಪಾನಿನಲ್ಲಿರುವ ವ್ಯವಸಾಯ ಪದ್ಧತಿ ನಮ್ಮಲ್ಲಿದ್ದರೆ

ಒಳ್ಳೆಯದು ಎಂದು ಹೇಳಿದೆ. ಇಲ್ಲಿನ ಐದು ಎಕರೆ ಇದ್ದರೂ ಅದರಿಂದ ಏನಾಗುತ್ತಿದೆ ಎಂದು ನೋಡಿದ್ದೀರಿ. ಶ್ರೀ ಕಡಿದಾಳ್ ಮಂಜಪ್ಪನವರು ಹತ್ತು ಎಕರೆ ಇರುವ ಸಂದರ್ಭದಲ್ಲಿಯೂ ಲಾಭದಾಯಕ ಆಗಿಲ್ಲ, ಎನ್ನುವ ದೃಷ್ಟಿಯಿಂದ ಹೇಳುತ್ತಿದ್ದಾರೆ. ಜಪಾನಿನಲ್ಲಿ ಇರುವುದನ್ನು ಅನುಕರಣಮಾಡಬೇಕು. ಅದನ್ನು ಜಾರಿಗೆ ತರುವ ದೃಷ್ಟಿಯಿಂದ ದೊಡ್ಡ ಹಿಡುವಳಿ ಬೇಡ, ಸಣ್ಣ ಹಿಡುವಳಿಮಾಡಿ ಅದಕ್ಕೆ ಸೌಲಭ್ಯ ಕೊಡಬೇಕು ಎಂದು ಹೇಳಿದೆ. ಇಲ್ಲಿ ಭೂಮಿಯ ಒತ್ತಡ ಇದೆ. ಎಲ್ಲರೂ ಊಟಮಾಡಬೇಕು. ದೊಡ್ಡ ಹಿಡುವಳಿಮಾಡುವುದಕ್ಕೆ ಸಾಧ್ಯವಿಲ್ಲ. ದೊಡ್ಡ ಪ್ರಮಾಣದಲ್ಲಿ ವ್ಯವಸಾಯಮಾಡಿ ಹೆಚ್ಚು ಉತ್ಪತ್ತಿಮಾಡಬಹುದು. ಅದನ್ನು ಅನುಸರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ನಮ್ಮ ದೇಶದ ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ ನೋಡಬೇಕು. ಇದು ನ್ಯಾಷನಲ್ ಪ್ರಾಬ್ಲಮ್. ಅದಕ್ಕೋಸ್ಕರ ಈ ವಿಷಯವನ್ನು ಹೇಳಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ದೇಶದಲ್ಲಿ ಜಮೀನು ಹಂಚುವುದೇ ಕಮ್ಮಿ. ಯಾವ ಕಾಲದಲ್ಲಿಯಾದರೂ ಮೈಸೂರು ದೇಶದಲ್ಲಾಗಲಿ, ಇಂಡಿಯಾ ದೇಶದ ಯಾವ ಭಾಗದಲ್ಲಿಯೆ ಆಗಲಿ, ಸಕಾಲಕ್ಕೆ ಮಳೆಯಾಗಿದೆ ಎಂದು ಯಾರಾದರೂ ಇಲ್ಲಿ ಹೇಳುತ್ತಾರೆಯೇ? ಎಲ್ಲರೂ ಇಲ್ಲಿ ಅನಾನುಕೂಲವಿದೆ ಅಲ್ಲ ಅನಾನುಕೂಲವಿದೆಯೆಂದು ಹೇಳುತ್ತಾರೆಯೇ ವಿನಾ ಅನುಕೂಲವಿದೆಯೆಂದು ಯಾರೂ ಹೇಳುತ್ತಿಲ್ಲ.

ಶ್ರೀ ಎಚ್. ಎಸ್. ರುದ್ರಪ್ಪ.—ಸಕಾಲದಲ್ಲಿ ಮಳೆ ಬಾರದೇ ಇರುವುದು ನಿಜ. ಒಟ್ಟಿನಲ್ಲಿ ವ್ಯವಸಾಯ ಸರಿಯಾಗಿ ಆಗಿಲ್ಲ. ಖುಷ್ಕಿ ಜಮೀನಿನಲ್ಲಿ ಶೇಕಡ 7.2 ರಷ್ಟು ಜಮೀನಿಗೆ ಮಾತ್ರ ನೀರಾವರಿ ಅನುಕೂಲವಿದೆ. ಅದಕ್ಕೋಸ್ಕರ ವ್ಯವಸಾಯಾಭಿವೃದ್ಧಿಗೆ ನಮ್ಮ ಸರ್ಕಾರದವರು ನೀರಾವರಿ ಅನುಕೂಲ ಹೆಚ್ಚಿಗೆ ಮಾಡಿಕೊಡಬೇಕು. ವ್ಯವಸಾಯದಲ್ಲಿ ಉತ್ತಮವಾದಂಥ ಶೋಧನೆಮಾಡಿ ಉತ್ತಮ ವ್ಯವಸಾಯ ಮಾಡುವಂಥ ಆಸಕ್ತಿ ರೈತರಲ್ಲಿ ಉಂಟಾಗುವಂತೆ ವ್ಯವಸ್ಥೆಮಾಡಬೇಕು. ಸಣ್ಣ ಹಿಡುವಳಿದಾರರಾಗಲಿ, ದೊಡ್ಡ ಹಿಡುವಳಿದಾರರಾಗಲಿ ಅವರು ನಮ್ಮ ದೇಶದಲ್ಲಿ ಶೇಕಡ 70—80 ಭಾಗದಷ್ಟು ರೂರಲ್ ಏರಿಯಾದಲ್ಲಿಯೇ ಇದ್ದಾರೆ. ಅದರಿಂದಲೇ ವ್ಯವಸಾಯ ಕಸಬಿಗೆ ವಿಶೇಷವಾಗಿ ಜನರು ಆಸಕ್ತಿ ವಹಿಸುತ್ತಾರೆ. ಅಮೇರಿಕಾದಲ್ಲಿಯೂ ಶೇಕಡ 70—80 ಭಾಗದಷ್ಟು ಜನ ಭೂಮಿ ಉತ್ಪತ್ತಿಯಿಂದಲೇ ಊಟಮಾಡುತ್ತಾರೆ, ವ್ಯವಸಾಯದಲ್ಲಿ ತೊಡಗಿರುತ್ತಾರೆ. ಚೈನಾ, ಜಪಾನ್ ದೇಶಗಳನ್ನು ತೆಗೆದುಕೊಳ್ಳಿ, ಅಲ್ಲಿಯೂ ವಿಶೇಷವಾಗಿ ಜನ ವ್ಯವಸಾಯ ಕಸುಬಿನಲ್ಲಿಯೇ ತೊಡಗಿರುವುದರಿಂದ ಆ ದೇಶಗಳಲ್ಲಿ ಆಹಾರೋತ್ಪತ್ತಿ ಹೆಚ್ಚು. ಪಾಶ್ಚಾತ್ಯದೇಶಗಳಲ್ಲಿ ಜನರು ಸುಖವಾಗಿ ವ್ಯವಸಾಯಮಾಡಲು ಈಗ ಮತ್ತೊಂದು ವಿಧವಾದಂಥ ವ್ಯವಸ್ಥೆಯನ್ನು ಜೀವನೋಪಾಯಕ್ಕನುಗುಣವಾಗಿ ಪ್ರಾರಂಭ ಮಾಡುತ್ತಿದ್ದಾರೆ. ವ್ಯವಸಾಯ ಕಸಬಿನಲ್ಲಿಯೇ ಅನೇಕರು ಆ ದೇಶಗಳಲ್ಲಿ ಜೀವನಮಾಡುತ್ತಿದ್ದಾರೆ. ಆದ್ದರಿಂದ ಇಲ್ಲಿ ಏಕಾನಾಮಿಯಲ್ಲಿ ವ್ಯವಸಾಯ ಕಸಬಿನಿಂದ ಜೀವನಮಾಡುವ ಒಂದು ಯೋಜನೆಯನ್ನು ಮಾಡಬೇಕಾಗಿದೆ. ಅದಕ್ಕಾಗಿ ಎಷ್ಟೋಜನ ಇಲ್ಲಿ ಮೂರು-ನಾಲ್ಕು ಎಕರೆಯಿಂದಲೇ ವ್ಯವಸಾಯ ಕಸುಬನ್ನು ಮಾಡುತ್ತಿದ್ದಾರೆ. ಆದರೂ ಬಹುತೇಕ ಜನ ಏಕಾನಮಿಯಿಂದ ಜೀವಿಸುವುದಕ್ಕಾಗುತ್ತಿಲ್ಲ. ಏಕೆಂದರೆ ಬಡತನ ಜಾಸ್ತಿಯಾಗುತ್ತಿದೆ. ಆದ್ದರಿಂದ 3,600 ರೂಪಾಯಿ ನಿವ್ವಳ ಆದಾಯದ ಜಮೀನು ಪ್ರದೇಶವನ್ನು ಇಲ್ಲಿ ಪರಿಮಿತಿಯಾಗಿ ನಿರ್ಧರಿಸಿದೆ. ಅದು ಸಾಲದು. ಜತ್ತೀವಂದಿ ಪ್ರಕಾರ 5,400 ರೂಪಾಯಿಗಳು ಎಂಬುದಾಗಿ ಪರಿಮಿತಿ ಇಡುವುದು ಸರಿಯೆಂದು ನಾನು ಭಾವಿಸುತ್ತೇನೆ. ನೀವು ಇದನ್ನು ಕೇವಲ ಟೆಂಪೊರರಿಯಾಗಿ ಈ ಮಸೂದೆಯಲ್ಲಿ ತೋರಿಸಿದ್ದೀರಿ. ಇದನ್ನು ಇನ್ನು ಸೆಲೆಕ್ಟ್ ಕಮಿಟಿಯವರು ಪರ್ಯಾಲೋಚಿಸಬೇಕಾಗಿರುವುದರಿಂದ, ಇದನ್ನು ಬಹಳ ಹುಷಾರಾಗಿ ಆಲೋಚಿಸಿ ಈಗಿರುವ ಪರಿಮಿತಿಗಿಂತ ಹೆಚ್ಚಿನ ಪರಿಮಿತಿಯನ್ನು ಇಡಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಏಕೆಂದರೆ ಈಗ ಜನಸಂಖ್ಯೆ ಜಾಸ್ತಿ ಆಗುತ್ತಿದೆ.

6 P.M.

ಆದ್ದರಿಂದ ಈಗ ಮೂರನೆಯ ಯೋಜನೆಯಲ್ಲಿಯೂ ಸಹ ದೇಶದಲ್ಲಿ ಪೂರ್ತಿ ಆಹಾರ ಉತ್ಪತ್ತಿ ಮಾಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದಾರೆ. ಇದನ್ನು ನಾವೂ ಒಪ್ಪಿಕೊಂಡಿರುತ್ತೇವೆ. ಈ ಮಸೂದೆ ಎಷ್ಟರಮಟ್ಟಿಗೆ ಆಹಾರ ಸಮಸ್ಯೆಯನ್ನು ಬಗೆಹರಿಸುತ್ತದೆಂಬುದು ನಾನೂ ತಾವೂ ಯೋಚನೆ ಮಾಡತಕ್ಕಂಥ ವಿಷಯ. ನಮ್ಮ ಮೇಲೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ತಮ್ಮ ಮೇಲೆಯೂ ಇದೆ. ಈ ಮಸೂದೆಯಲ್ಲಿರುವುದು ಅಷ್ಟೇನೂ ತೊಡಕಿನ ಸಮಸ್ಯೆಯಲ್ಲ. ಜಮೀನನ್ನು ಬಿಟ್ಟುಕೊಡುವುದು ತೆಗೆದುಕೊಳ್ಳುವುದು ಸ್ವಲ್ಪ ಹೆಚ್ಚುಕಡಮೆ ಬದಲಾಣೆಯಾಗಬಹುದು. ನಮ್ಮ ದೇಶದಲ್ಲಿ ಕೆಲವರು ದುಡಿಯುತ್ತಾರೆ; ಕೆಲವರು ಊಟಮಾಡುತ್ತಾರೆ. ಎಲ್ಲರೂ ಕೆಲಸಮಾಡಲಿ, ಕೆಲಸ ಮಾಡದೆ ಇರುವವರೇ ಇರಕೂಡದು. ಚೈನಾದಲ್ಲಿ, ಅಮೇರಿಕಾದಲ್ಲಿದ್ದಂತೆ all must work and eat. ಕೆಲಸಮಾಡುವವನ ಶೋಷಣೆಯಾಗುತ್ತಾ ಇದೆ; ಅದನ್ನು ನಿಲ್ಲಿಸುವುದಕ್ಕೋಸ್ಕರ ಈ ಬಿಲ್ಲನ್ನು ತಂದಿರುವುದು. ಶೋಷಣೆ ನಿಲ್ಲಬೇಕು. ದುಡಿಯುವವರಿಗೆ ಈ ಬಿಲ್ಲು ಬಹಳ ಸಹಾನುಭೂತಿಯಿಂದಿದೆ. ಬಹಳ ಸಂತೋಷ. ಆದರೆ ಇದರಿಂದಲೇ ಆಹಾರ ಸಮಸ್ಯೆ ಬಗೆಹರಿಯುವುದಿಲ್ಲ.

Sri C. J. MUCKANNAPPA.--Is it your opinion that land reform should be dropped?

ಶ್ರೀ ಎಚ್. ಎಸ್. ರುದ್ರಪ್ಪ.—ಅದರಿಂದ temporary remedy ಮಾಡಿಕೊಳ್ಳಬಹುದು ಖಾಯಂ ರೆಮಿಡಿ ಆದರೆ ದೇಶದಲ್ಲಿ ಆಹಾರದ ಕೊರತೆ ಹೋಗುತ್ತದೆ.

Sri C. J. MUCKANNAPPA.—In my opinion you are holding a brief on behalf of landlords and the capitalists.

ಶ್ರೀ ಎಚ್. ಎಸ್. ರುದ್ರಪ್ಪ.—ಇನ್ನು ಹೆಚ್ಚಿಗೆ ವಿಷಯ ಹೇಳುವುದಕ್ಕಾಗುವುದಿಲ್ಲ. ಪರಿಮಿತಿ ವಿಷಯದ ಮೇಲೆ ಹೇಳಬೇಕಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅಧ್ಯಕ್ಷರಲ್ಲಿ ಒಂದು ಅರಿಕೆ. ಈಗ ಬೆಳಿಗ್ಗಿನಿಂದ ಕುಳಿತಿದ್ದೇವೆ. Half-an-hour discussion ಬೇರೆ ಇದೆ. ಅದಕ್ಕೆ ಟೈಮ್ ಕೊಡಿ.

ಉಪ ಸಭಾಪತಿಯವರು.—ಅದನ್ನು 6-30 ಕ್ಕೆ ತೆಗೆದುಕೊಳ್ಳೋಣ. We will rise at 7 o'clock.

Sri C. M. ARUMUGHAM.—According to the programme to day it is stated that the Revenue Minister will reply and the Bill will go to a Joint Select Committee. May I know what is going to be done now ?

Sri KADIDAL MANJAPPA.—At the appropriate time a motion will be moved. It was understood in the morning that there were several members who are yet to speak, and so the House will meet tomorrow also to discuss this Bill and if need be the day after tomorrow afternoon.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಿಮಿಷ ನಿಮಿಷಕ್ಕೆ ಸರ್ಕಾರದ ಧೋರಣೆಗಳು ಬದಲಾವಣೆಯಾಗುತ್ತಿವೆ.

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದ ಧೋರಣೆಯಲ್ಲೂ ಮಾನ್ಯಸದಸ್ಯರ ಅಭಿಪ್ರಾಯವನ್ನು ತಗೆದುಕೊಂಡಿದೆ.

Sri C. M. ARUMUGHAM.—Is there a motion for the House to meet tomorrow and on Sunday ?

Sri KADIDAL MANJAPPA.—After my friend Sri Rudrappa finishes his speech I may be permitted to move the motion.

ಶ್ರೀ ಎಚ್. ಎಸ್. ರುದ್ರಪ್ಪ.—ಪರಿಮಿತಿ ವಿಷಯದಲ್ಲ ಅನೇಕ ಸ್ನೇಹಿತರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಕೆಲವರು ಅದು ಕಮ್ಮಿ, ಇದೇ ಸಾಕು ಎಂದು ಹೇಳಿದ್ದಾರೆ. ಕೆಲವರು ಎಫೆಕ್ಟೀವಾಗಿದೆ ಎಂದು ಹೇಳಿದ್ದಾರೆ.

(*At this stage the Chief Minister came and occupied the seat behind the one reserved for him and Sri B. V. Desai was occupying his seat*).

Sri C. J. MUCKANNAPPA.—Sir, I request you to give a ruling whether the Ministers could occupy the members' seats and members the Ministers' seats. Last time I had raised a similar issue.

Sri M. RAMAPPA.—That too when the Leader of the House is present.

Sri B. D. JATTI.—The Hon'ble Member Sri Desai did not see me when I came.

Sri C. J. MUCKANNAPPA.—Under no circumstances I think the seat of the Leader of the House can be occupied by any member or even by a Minister. Otherwise where is the sanctity for it ? I do not think anybody can become a temporary Chief Minister.

Mr. DEPUTY SPEAKER.—So long as that seat is occupied by a member, the occupant is not a Chief Minister. (*Laughter*).

ಶ್ರೀ ಎಚ್. ಎಸ್. ರುದ್ರಪ್ಪ.—ಪರಿಮಿತಿ ವಿಷಯದಲ್ಲ ಸಾಕಾದಷ್ಟು ಅನೇಕರು ಹೇಳಿದ್ದಾರೆ. ಅದು ಹೆಚ್ಚು ಕಡಮೆಯಾಗುವುದು. ಈಗಿನ ಅರ್ಥಿಕ ವ್ಯವಸ್ಥೆಯಲ್ಲ ಬಹಳ ಹೆಚ್ಚು ಕಡಮೆ ಇದೆ, ಅದನ್ನು ಸರಿದೂಗಿಸಬೇಕು. ಒಂದು ಉದ್ಯೋಗದಿಂದ 50 ರೂಪಾಯಿ ಇನ್‌ಕಂ ಬಂದು, ಇನ್ನೊಂದರಿಂದ ಒಂದು ಕೋಟಿ ರೂಪಾಯಿ ಉತ್ಪತ್ತಿ ಬಬಹುದು. ಯಾವ ದೇಶದಲ್ಲಯೇ ಅಗಲ ರಷ್ಯ, ಚೈನ ದೇಶಗಳಲ್ಲಿಯೇ ಆಗಲ, ಫ್ರೀಎಕಾನಮಿ ಇರುವ ಅಮೇರಿಕ, ಇಂಗ್ಲೆಂಡಿನಲ್ಲಾಗಲ, ಇದನ್ನು ಸರಿದೂಗಿಸುವುದಕ್ಕೆ ತೀವ್ರವಾಗಿ ಪ್ರಯತ್ನ ಮಾಡುತ್ತಿದ್ದಾರೆ. ವ್ಯವಸಾಯಗಾರರಲ್ಲ ಇನ್‌ಕಂ ಪರಿಮಿತಿಯನ್ನು ತಂದಿದ್ದೀರಿ. ಅದು ನ್ಯಾಯವಾದುದು ಎಂದು ಹೇಳುತ್ತಾರೆ. ನಾನು ಎಫೆಕ್ಟೀವ್ ಆಗಿ ಹೇಳಿ ಕನ್‌ವಿನ್ಸ್ ಮಾಡಬಲ್ಲೆ. ಭೂಮಿಯನ್ನು ದೇವರು ಕೊಟ್ಟದ್ದು. ಗುಡ್ಡ, ಕಾಡು ಜಮೀನು ಮಾಡುವುದಕ್ಕೆ ವಿಪರೀತ ಪ್ರಯತ್ನ ಮಾಡಬೇಕು. ಖರ್ಚುವೆಚ್ಚ ಸರಿದೂಗಿಸಿಕೊಂಡರೆ, 3,600 ರೂಪಾಯಿ ವರಮಾನಬರುವುದಿಲ್ಲ. ಜಮೀನು ಕೊಟ್ಟರೆ ಅದು ಅಸೆಟ್‌ಅಲ್ಲ. ಈ ರೀತಿ ಮಾಡಿದರೆ ರೂರಲ್ ಲೀಡರ್‌ಷಿಪ್ಪಿಗೆ ಬಹಳ ತೊಂದರೆ ಬಂದೀತು ಎಂದು ಹೇಳುತ್ತಾರೆ. ಎಲೆಕ್ಷನ್ನಿಗೆ ನಿಲ್ಲುವುದಕ್ಕೇ ಬಹಳಕಷ್ಟ. ಅವರೇ ಕೆಲವರಿಗೆ ಬಹಳ ಮುಖ್ಯವಾದುದು. ದೇಶದ ಆಡಳಿತವನ್ನು ನಡೆಸಬೇಕು, ಮಂತ್ರಿಗಳಾಗಬೇಕೆಂದು ಎಲ್ಲರೂ ಎಲೆಕ್ಷನ್ನಿನಲ್ಲ ಭಾಗವಹಿಸುತ್ತಾರೆಂದಲ್ಲ, ಆದರೂ ಪ್ರಯತ್ನವನ್ನು ಮಾಡುತ್ತಾರೆ. ಸಾಮಾನ್ಯವಾಗಿ ಒಂದು ಅಸೆಂಬ್ಲಿ ಸೀಟಿಗೆ ಚುನಾವಣೆಗೆ ನಿಂತರೆ ಎಷ್ಟೋ ದುಡ್ಡು ಖರ್ಚಾಗುತ್ತದೆ. ಸೀಟುಕೊಡಲಿಲ್ಲವೆಂದರೆ ಪಾರ್ಟಿಯಿಂದ ಪಾರ್ಟಿಗೆ ಹೋಗುತ್ತಾರೆ. ವೈಯಕ್ತಿಕವಾಗಿ ಯಾರಿಗೂ ಇದನ್ನು ಹೇಳಲಿಲ್ಲ.

ನಾನು ಮಸೂದೆಯ ಪರವಾಗಿದ್ದೇನೆ, ದೇಶದಲ್ಲ ತೊಂದರೆಯಾಗಬಾರದೆಂದು ಹೇಳುವವನು ನಾನು. ನಮ್ಮಮಿತ್ರರು ಹೇಳುವುದರಲ್ಲೂ ಸತ್ಯಾಂಶವಿದೆ. ಅಮೇರಿಕಾ, ಚೈನಾ, ರಷ್ಯಾಮುಂತಾದ ದೇಶಗಳಲ್ಲ ಪರಮಾವಧಿ ಆದಾಯ ಮತ್ತುಕನಿಷ್ಠ ಪರಿಮಿತಿಯ ಆದಾಯ ಎಷ್ಟಿದೆ ಯೆಂಬುದು ಗೊತ್ತಿದೆ. ಸೋಷಿಯಲಿಸ್ಟ್ ಕಂಟ್ರಿಯಾದ ಇಗ್ಲೆಂಡಿನಲ್ಲಿ ಒಂದಕ್ಕೆ ಹತ್ತರಷ್ಟು ದಾಮಾಷಾವಿದೆ. ಕಮ್ಯೂನಿಸ್ಟ್ ಆಡಳಿತ ಬಂದರೆ ಎಲ್ಲಾಸರಿಹೋಗುತ್ತದೆಂದು ತಿಳಿಯುವುದು ತಪ್ಪು. ಕಮ್ಯೂನಿಸ್ಟ್ ರಾಷ್ಟ್ರದಲ್ಲ ಒಂದಕ್ಕೆ 80 ರಷ್ಟು ದಾಮಾಷಾವಿದೆ. ಅಮೇರಿಕಾದಲ್ಲಿ ಒಂದಕ್ಕೆ 20 ರಷ್ಟು ದಾಮಾಷಾವಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪ (ಲೋಕೋಪಯೋಗಿ ಶಾಖೆಯ ಮಾಂತ್ರಿಗಳು).—ಚೈನಾದಲ್ಲ 700ರೂಪಾಯಿ ಬಹಳ ದೊಡ್ಡ ಸಂಬಳ.

ಶ್ರೀ ಎಚ್. ಎಸ್. ರುದ್ರಪ್ಪ.—ಹಿಂದೆ ಹಳೆಯ ಮೈಸೂರಿದ್ದಾಗಅಸೆಂಬ್ಲಿಯಲ್ಲ ಒಂದುನಿರ್ಣಯವನ್ನು ಸರ್ವಾನುಮತದಿಂದ ಎಲ್ಲಾ ಪಕ್ಷಗಳೂ ಅಂಗೀಕಾರ ಮಾಡಿ ಕಳುಹಿಸಿದ್ದೆವು. ಅದಕ್ಕೆ ಇಂಡಿಯಾ ಸರ್ಕಾರದ ಒಪ್ಪಿಗೆಯಾಗಬೇಕೆಂದು ಅದನ್ನು ಜಾರಿಗೆ ತರಲಿಲ್ಲ. ಮಾನ್ಯ ಸದಸ್ಯರು ಎತ್ತಿರುವ ಆಕ್ಷೇಪಣೆಗಳಿಗೆ ಉತ್ತರ ಹೇಳದಿದ್ದರೆ ಅವರು ತಾವು ಹೇಳಿದ್ದು ಸರಿಯೆಂದು ತಿಳಿದುಕೊಳ್ಳುತ್ತಾರೆ. ದೇಶದಲ್ಲ ವ್ಯವಸಾಯ ಕ್ಷೇತ್ರದಲ್ಲಿರುವ ಉತ್ಪತ್ತಿಗೂ ಮತ್ತು ಇತರ ವಿಧವಾದ

ಉತ್ಪತ್ತಿಗೂ ಬಹಳ ಹೆಚ್ಚು ಕಡಮೆಯಿರಬಾರದೆಂದು ಹೇಳಿದ್ದಾರೆ. ಈಗ ಭೂಮಿ ಹೆಚ್ಚು ಬೆಲೆಬಾಳುವ ಆಸ್ತಿಯಲ್ಲ, ವ್ಯವಸಾಯ ಕನಿಷ್ಠವೃತ್ತಿ ಎಂಬ ಭಾವನೆ ಈ ದಿವಸವಿದೆ. ಗ್ರಾಮಾಂತರ ಪ್ರದೇಶಗಳಿಗೂ ಮತ್ತು ಪಟ್ಟಣಗಳಿಗೂ ಬಹಳ ವ್ಯತ್ಯಾಸ ವಿರಬಾರದೆಂದು ಮಾನ್ಯ ಸದಸ್ಯರನೇಕರು ಹೇಳಿರುವುದು ನ್ಯಾಯವಾಗಿದೆ. ಅದನ್ನು ಸಾಧ್ಯವಾದ ಮಟ್ಟಿಗೆ ಸರಿದೂಗಿಸುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು.

ಸೀಲಿಂಗ್ ವಿಚಾರದಲ್ಲಿ 3,600 ರೂಪಾಯಿಗಳ ಪರಿಮಿತಿಯಿರಬೇಕೆಂದು ಹೇಳಿದೆ. ಆದರೆ ಲೆಕ್ಕಾಚಾರ ಸ್ವಲ್ಪ ಸರಿಯಾಗಿಲ್ಲ, ತರಿ ಜಮೀನಿನಲ್ಲಿ ಶೇಕಡ 50 ರಷ್ಟು ಉತ್ಪತ್ತಿ ಬರುತ್ತದೆಂದು ಹೇಳುವುದು ಸರಿಯಲ್ಲ. ಟ್ರಿಬ್ಯೂನಲ್‌ಗೆ ತಾವು ಸೂಚನೆ ಕೊಟ್ಟಾಗ ಅದನ್ನು disobey ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಪರೀಕ್ಷೆಮಾಡಿ, ಖರ್ಚುಗಳೆಮ ಉತ್ಪತ್ತಿ ಗಣನೆಗೆ ತೆಗೆದುಕೊಳ್ಳಬೇಕೆಂದಿದೆ. ಒಂದೊಂದು ಭಾಗದಲ್ಲಿ ಒಂದೊಂದು ತರಹವಿರುವುದರಿಂದ ಪರಿಶೀಲನೆ ಮಾಡಿ ನ್ಯಾಯವಾದರೀತಿ ವ್ಯವಸ್ಥೆಮಾಡಿ. ಸ್ವಂತ ಸಾಗುವಳಿ ಮಾಡದಿದ್ದರೆ ಜಮೀನು ಬಿಡಬೇಕೆಂಬುದು ನನ್ನ ಅಭಿಪ್ರಾಯ ಸ್ವಂತ ಸಾಗುವಳಿ ಜಮೀನಿನಮೇಲೆ ಸೀಲಿಂಗ್ ಬೇಡ. ಏಕೆಂದರೆ ಟೀ, ರಬ್ಬರ್ ಮುಂತಾದುವುಗಳಿಗೆಲ್ಲಾ ಬಿಟ್ಟಿದ್ದೇವೆ ಹಾಗಿರುವಾಗ ರಾಗಿ, ಜೋಳ ಬೆಳೆಯುವ ಪ್ರದೇಶಕ್ಕೆ ಹಾಕಿದರೆ ಜನರು ಏನಾದರೂ ಅಂದುಕೊಳ್ಳುತ್ತಾರೆ. ಈಗ ಸ್ವಂತ ಸಾಗುವಳಿ ಮಾಡಿದರೆ ಬಹಳ ಜಮೀನು ದೊರೆಯುತ್ತದೆಂದು ಇರುವ ಗೇಣಿದಾರರನ್ನು ಬಿಡಿಸಿ ಜಾಸ್ತಿ ಜಮೀನನ್ನು ಪಡೆಯಲು ಪ್ರಯತ್ನಮಾಡುತ್ತಿದ್ದಾರೆ. ಸ್ವಂತ ಸಾಗುವಳಿಗೆ ಅಷ್ಟನ್ನೂ ಬಿಡುವುದು ನ್ಯಾಯವೇ ಎಂಬುದನ್ನು ಯೋಚನೆಮಾಡಿ. ಸ್ವಂತ ಸಾಗುವಳಿಗಾಗಿ ಸಾವಿರ ಎಕರೆಯಿದ್ದರೆ, ಅಷ್ಟು ಹೆಚ್ಚಾಗಿದ್ದರೆ ಪರಿಮಿತಿಯಿರುವುದು ಸೂಕ್ತ, 3,600 ರೂಪಾಯಿ ಬಹಳ ಕಡಿಮೆಯಾಗುತ್ತದೆ.

Sri H. M. CHANNABASAPPA.—The Hon'ble Member is an agriculturist of long standing and was an agricultural Minister and experinced legislator ; we want him to tell us what is the maximum ceiling that he proposes. The House is anxious to know his considered opinion.

ಶ್ರೀ ಎಚ್. ಎಸ್. ರುದ್ರಪ್ಪ.—ಜತ್ತಿಯವರ ವರದಿಯಲ್ಲಿ ಸೂಚನೆ ಮಾಡಿದ್ದಾರೆ, 5,400 ರೂಪಾಯಿ ಎಂದು ಹೇಳಿದ್ದಾರೆ. ಅದನ್ನು ಬಹುಶಃ ಒಪ್ಪಿಕೊಳ್ಳಬಹುದು ಎಂದು ಕಾಣುತ್ತದೆ. ಕಷ್ಟಪಟ್ಟು ವ್ಯವಸಾಯ ಮಾಡುತ್ತಾರೆ. ಆದ್ದರಿಂದ ಬಹಳ ಹೆಚ್ಚುಬೇಡ ಬಹಳ ಕಡಮೆಯೂ ಬೇಡ. ಆ ದೃಷ್ಟಿಯಿಂದ ಸ್ವಲ್ಪ ರಿಯಾಯಿತಿ ತೋರಿಸುವುದು ನ್ಯಾಯ ಎಂದು ಕಾಣುತ್ತದೆ. ಹಳ್ಳಿಗಳಿಗೆ ಹೋದಾಗ ಕಾಂಗ್ರೆಸ್ ನವರಾಗಲಿ, ಪಿ. ಎಸ್. ಪಿ. ಅವರಾಗಲಿ ಅವರಿಗೆ ಸ್ವಲ್ಪ ಊಟಕ್ಕೆ ಹಾಕುವಷ್ಟಾದರೂ ಅವರಿಗೆ ಸಾಧ್ಯ ಇರಲಿ ಎಂದು ಹೇಳುತ್ತಾ ಇದ್ದೇನೆ. ಅವರಿಗೆ ಎಷ್ಟೋ ತಾಪತ್ರಯ ಇರುತ್ತದೆ. ಆದುದರಿಂದ ಈ ಪರಿಮಿತಿ 5,400 ರೂಪಾಯಿ ನಷ್ಟಾದರೂ ಮಾಡಬೇಕೆಂದು ಹೇಳುತ್ತೇನೆ.

ಇನ್ನೊಂದು ನನ್ನ ಸಲಹೆ ಇದೆ. ಆಂಧ್ರಪ್ರಾಂತದಲ್ಲಿ ಮಾಡಿದ್ದಾರೆ, ಅದನ್ನು ಸೆಲೆಕ್ಟ್ ಕಮಿಟಿಯವರು ವಿಚಾರ ಮಾಡಬಹುದು. ಜನರ ಸಹಕಾರದಿಂದ ಕೋ-ಆಪರೇಟಿವ್ ಫಾರ್ಮಿಂಗ್ ಮಾಡಬೇಕು ಎನ್ನುವುದು it is mere extension of the joint undivided Hindu family. ಆದ್ದರಿಂದ 6 ಜನಕ್ಕೆ ಇಷ್ಟು ಕೊಡಿರಿ, 50 ಜನಕ್ಕೆ ಇಷ್ಟು ಕೊಡಿರಿ ಎಂದು ಹೇಳುವುದು. ನ್ಯಾಯವಲ್ಲ ಆರು ಜನರಿದ್ದರೆ ಸರಿಯಾಗಿ ವಿಭಾಗ ಮಾಡಿಕೊಳ್ಳುತ್ತಾರೆ. ಅದನ್ನು ತಪ್ಪಿಸುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—50 ಜನರಿದ್ದರೆ ದಾಮಾಷಾ ಪ್ರಕಾರ ಕೊಡಬಹುದು ಎಂದು ತಮ್ಮ ಇಚ್ಛೆಯೇ?

[MR. SPEAKER in the Chair]

ಶ್ರೀ ಎಚ್. ಎಸ್. ರುದ್ರಪ್ಪ.—ಅವಿಭಕ್ತ ಕುಟುಂಬ ಆದರೆ ಅದೇ ರೀತಿ ಇರುವುದಕ್ಕೆ ಅವಕಾಶ ಮಾಡಿ ಕೊಡಿ. ಇದೇರೀತಿ ತತ್ವ ಅಳಿಯ ಸಂತಾನದ್ದು ಎಂದು ಕಾಣುತ್ತದೆ. ಅದಕ್ಕೂ ಕೂಡ ಸೆಲೆಕ್ಟ್ ಕಮಿಟಿಯವರು Special consideration ಕೊಡುವ ವಿಷಯದಲ್ಲಿ ಪರಿಶೀಲನೆ ಮಾಡಬೇಕು. ಅವರೂ ಸಹ ತೊಂದರೆಗೊಳಗಾಗಬಾರದು ಎಂದು ಹೇಳುತ್ತೇನೆ, ಗೇಣೀದಾರರಿಗೂ ತೊಂದರೆ ಆಗಬಾರದು, ಜಮೀನ್‌ದಾರರಿಗೂ ತೊಂದರೆ ಆಗಬಾರದು, ಆರೀತಿ ಮಾಡುವುದು ಸೂಕ್ತ ಎಂದು ಕಾಣುತ್ತದೆ. ಇನ್ನು ಪರಿಹಾರದ ವಿಷಯ. ಸ್ಲೈಡೆಡ್ ಸ್ಕೇಲ್ ಪ್ರಕಾರ ಕೊಡಬೇಕೆಂದು ಹೇಳಿದ್ದಾರೆ, ನ್ಯಾಯವಾದದ್ದು ಎಂದು ಕಾಣುತ್ತದೆ. ಬೇಸಿಕ್ ಹೋಲ್ಡಿಂಗ್, ಫ್ಯಾಮಿಲಿ ಹೋಲ್ಡಿಂಗ್ ಇವೆಲ್ಲದರಲ್ಲೂ ವಾಸ್ತವಾಂಶ ತಿಳಿಯದೆ ತೊಂದರೆ ಆದೀತು ಎಂದು ಭಾವನೆಮಾಡಿ ಟ್ರಿಬ್ಯೂನಲ್ ಮಾಡಿದ್ದಾರೆ. ಆದರೆ ಈ ಟ್ರಿಬ್ಯೂನಲ್ಸ್ ಮಾಡುವುದಕ್ಕೆ ಮುಂಚೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ voluntary arbitrary organisations ಸ್ಥಾಪನೆಮಾಡಿ ನ್ಯಾಯತೀರ್ಮಾನ ಮಾಡುವ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

6-30 P.M.

ಎರಡು ಎಕರೆ ಭೂಮಿಯನ್ನು ಕೊಡತಕ್ಕಂಥವರಿಗೆ ಹೆಚ್ಚು ಪರಿಹಾರ ಕೊಡಬೇಕು. ಇನ್ನು ಸಾಗುವಳಿ ಮಾಡಲು ಯೋಗ್ಯವಾದ ಜಮೀನು ಸರಕಾರದ ಹತ್ತಿರವಿರುವದನ್ನು ಕೊಡಬೇಕು. ಸಾಗುವಳಿ ಮಾಡಲು ಜಮೀನು ಸಿಕ್ಕುತ್ತದೆ ಎಂದು ರೈತರು ತಮ್ಮ ಊರುಬಿಟ್ಟು ಮತ್ತೊಂದು ಊರಿಗೆ ಹೋಗಲು ಇಷ್ಟಪಡುವದಿಲ್ಲ. ತಾವಿರುವ ಊರಿನ ಹತ್ತಿರವೇ ಜಮೀನು ಬೇಕಾಗುತ್ತಾರೆ. ವ್ಯವಸಾಯ ಅಭಿವೃದ್ಧಿ ಪಡಿಸುವದಕ್ಕಾಗಿ ಒಂದು ರಿಲೀಫ್ ಫಂಡಿನ ಏರ್ಪಾಡು ಮಾಡಬೇಕು. ಒಟ್ಟಿನಲ್ಲಿ ಇದೊಂದು ಬಹಳ ಮಹತ್ವದ ಅಂಶವಾಗಿದೆ. ಎಲ್ಲರೂ ಸೇರಿ ಈ ಫಂಡಿನ ಹಣ ಕೂಡಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಈ ಫಂಡಿಗೆ ಏನು ಹೆಸರು ಇಡಬೇಕು ?

ಶ್ರೀ ಎಚ್. ಎಸ್. ರುದ್ರಪ್ಪ.—ಇದಕ್ಕೆ ರೈತಾಪಿ ಜನರ ಅಭಿವೃದ್ಧಿ ಫಂಡು ಎಂದು ಹೆಸರು ಇಡಬಹುದು. ಇನ್ನು ಸರಕಾರದ ವಶದಲ್ಲಿ ಸುಮಾರು 35 ಲಕ್ಷ ಎಕರೆ ಭೂಮಿ ಸಾಗುವಳಿ ಮಾಡುವುದಕ್ಕೆ ಬರುವಂಥಾದ್ದಿದೆ. ಇದರಲ್ಲಿ 50 ಪರ್ಸೆಂಟು ಭೂಮಿ

(ಶ್ರೀ ಎಚ್. ಎಸ್. ರುದ್ರಪ್ಪ)

ಯನ್ನು ಕೊಟ್ಟಿದೆ. It shall be brought under effective process of cultivation. ನೂರಾರು ಎಕರೆ ತರೀ ಜಮೀನು ಮಾಡುವದಕ್ಕಾಗುವದಿಲ್ಲ. ಹೆಚ್ಚುವರಿ ಜಮೀನು ಇದ್ದವರು ಸರಂಡರ್ ಮಾಡುತ್ತಾರೆ. ಈ ಎಲ್ಲ ಜಮೀನನ್ನೂ ಸಾಗುವಳಿ ಮಾಡಬೇಕು. ಸರಕಾರದ ವಶದಲ್ಲಿ ಎಷ್ಟು ಸಾಗುವಳಿಗೆ ಯೋಗ್ಯವಾದ ಜಮೀನು ಇದೆಯೋ ಅದನ್ನೆಲ್ಲಾ ಸಾಗಾವಳಿಯಾಗುವ ಹಾಗೆ ಮಾಡಬೇಕು. ಒಂದು ಕುಟುಂಬ ಹಿಡುವಳಿ ಇಷ್ಟು ಕಡಮೆಯಾಗಿರಬಾರದು. ಸಣ್ಣ ಸಣ್ಣ ಜಮೀನುದಾರರ ಆರ್ಥಿಕ ಪರಿಸ್ಥಿತಿ ಸರಿಯಾಗಿರುವುದಿಲ್ಲ. ಸೌಲಭ್ಯಗಳನ್ನು ಒದಗಿಸಿ ಕೊಟ್ಟರೆ ಚೆನ್ನಾಗಿ ಸಾಗುವಳಿ ಮಾಡುತ್ತಾರೆ. ಉತ್ತಮ ರೀತಿಯಿಂದ ಭೂಮಿ ಸಾಗುವಳಿಯಾಗದೇ ಇದ್ದರೆ ಆಹಾರ ಸಮಸ್ಯೆ ಬಗೆಹರಿಯುವದಿಲ್ಲ. ಈ ದೃಷ್ಟಿಯಿಂದ ಜಮೀನುದಾರರಿಗೆ ಸರಿಯಾದ ಪರಿಹಾರ ಕೊಡಬೇಕು. ಸರಕಾರದ ವಶದಲ್ಲಿರುವ 80 ಲಕ್ಷ ಎಕರೆ cultivable waste landನ್ನು ಮೊದಲು ಸಾಗುವಳಿಯಾಗುವ ಹಾಗೆ ಮಾಡಬೇಕು.

ಅಧ್ಯಕ್ಷರು.—ಈಗಾಗಲೇ ತಾವು 65 ನಿಮಿಷ ಮಾತನಾಡಿದ್ದಾಯಿತು, ಬೇಗನೆ ಭಾಷಣ ಮುಗಿಸಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಈಗಾಗಲೇ ಭಾಷಣ ಮುಗಿಸಿದ್ದಾರೆ. ಆದರೆ ಕೆಲವು ಮಾನ್ಯ ಸದಸ್ಯರು clarification ಕೇಳಿದ್ದರಿಂದ ಅವಕ್ಕಾಗಿ ಮಾತನಾಡುತ್ತಿದ್ದಾರೆ.

ಶ್ರೀ ಎಚ್. ಎಸ್. ರುದ್ರಪ್ಪ.—ಇನ್ನೂ ಹೇಳತಕ್ಕಂಥಾದ್ದು ಬಹಳ ಇದೆ. ಆದರೆ ಈಗಾಗಲೇ ಬಹಳ ಕಾಲ ತೆಗೆದುಕೊಂಡಿದ್ದೇನೆ; ಇನ್ನು ಬೇಗನೆ ನನ್ನ ಭಾಷಣ ಮುಗಿಸುತ್ತೇನೆ. ಇತರ ಕ್ಷೇತ್ರಗಳಲ್ಲಿ ಪರಿಮಿತಿಯನ್ನು ವಿಧಿಸದೆ ಇರುವುದರಿಂದ ನಗರಗಳು ಹಾಗೂ ಗ್ರಾಮ ಪ್ರದೇಶಗಳಲ್ಲಿನ ಆದಾಯ ಪ್ರಮಾಣದ ಅಂತರ ತುಂಬ ಹೆಚ್ಚಾಗಿರದಂತೆ ನೋಡಿಕೊಳ್ಳಬೇಕು ಎಂದು ಹೇಳುವದರಲ್ಲಿ ನ್ಯಾಯವಿದೆ. 3,600 ರೂಪಾಯಿ ನಿವ್ವಳ ಆದಾಯದ ಜಮೀನು ಪ್ರದೇಶವನ್ನು ಪರಿಮಿತಿಯಾಗಿ ನಿರ್ಧರಿಸಲಾಗಿದೆ. ಈ ಲೆಕ್ಕ ಅಷ್ಟು ಸರಿಯಾಗಿಲ್ಲ. ಸ್ವಂತ ಸಾಗುವಳಿ ಜಮೀನಿನ ಮೇಲೆ ಪರಿಮಿತಿ ಇರಬಾರದೆಂಬುದು ನನ್ನ ಭಾವನೆಯಾಗಿತ್ತು. ಆದರೆ ಪರಿಮಿತಿ ಇರಬೇಕಾದದು ಅಗತ್ಯ ಮತ್ತು ಅವಶ್ಯಕ; ಆದರೆ 3,600 ರೂಪಾಯಿ ನಿವ್ವಳ ಆದಾಯ ಪರಿಮಿತಿ ಸಾಲದು. ಜತ್ತಿ ಸಮಿತಿಯವರು ಶಿಫಾರಸು ಮಾಡಿರುವಂತೆ 5,400ರೂಪಾಯಿ ನಿವ್ವಳ ಆದಾಯವನ್ನು ಒಪ್ಪಿಕೊಳ್ಳಬಹುದು.

ಇನ್ನು ಕೋ-ಆಪರೇಟಿವ್ ಫಾರ್ಮಿಂಗ ವಿಷಯ ಕೆಲವರು ಹೇಳಿದರು. ಸಹಕಾರಿ ವ್ಯವಸಾಯ ಪದ್ಧತಿಯು ಅತ್ಯುತ್ತಮವಾದದ್ದು. ದೇಶದಲ್ಲಿ ಸಹಕಾರಿ ವ್ಯವಸಾಯ ಪದ್ಧತಿಯು ಜಾರಿಗೆಬರಬೇಕಾದುದು ಅಗತ್ಯ; ಈ ಪದ್ಧತಿಯು ಉತ್ತಮವಾಗಿದ್ದೆ. ಇದಕ್ಕೆ ಪ್ರಾಮಾಣಿಕತೆಯಿಂದ ಕೆಲಸಮಾಡುವವರು ಬೇಕು, ಪ್ರಮಾಣಿಕರಾದವರು ದೊರೆವುದು ಕಷ್ಟ. ಆದುದರಿಂದ ಇದನ್ನು ಯೋಜನೆ ಮಾಡಬೇಕಾಗಿದೆ. ಈ ಪದ್ಧತಿಯಿಂದ ಸಾಗುವಳಿ ಮಾಡಬೇಕು. ಬರೀ ಜಮೀನು ಜನರಿಂದ ತೆಗೆದುಕೊಳ್ಳುವುದು ಸಾಲದು. ಜಮೀನನು ಸಾಗುವಳಿ ಮಾಡತಕ್ಕವರೆಲ್ಲ ಸಮಾನತೆಯಿಂದ ಕೆಲಸಮಾಡಿದರೆ ಬಹಳ ಚೆನ್ನಾಗಿ ಕೆಲಸ ನಡೆಯುತ್ತದೆ. ಕೆಲವು ಕಾಲ ವಾಲಂಟರಿ ಬೇಸಿಸ್ ಮೇಲೆ ನಡೆಯಬೇಕು. ಕೋ-ಆಪರೇಟಿವ್ ಫಾರ್ಮಿಂಗ್ ಒಳ್ಳೆಯದು ಮತ್ತು ಬಹುಮತದಿಂದ ಜನರು ಇದಕ್ಕೆ ಸೇರಬೇಕೆಂದು ಅಪೇಕ್ಷೆಪಟ್ಟರೆ ಉಳಿದವರೂ ಸೇರಬೇಕೆನ್ನುವುದು ತಪ್ಪು ಎಂದು ಹೇಳುವುದಿಲ್ಲ. ತತ್ವ ಸರಿಯಾದದ್ದು. ಆದರೂ ವಾಲಂಟರಿ ಬೇಸಿಸ್ ಮೇಲೆ ನಡೆಸುವುದು ನ್ಯಾಯವಾದುದು. ಜನಗಳಲ್ಲಿ ಸಹಕಾರ ಮನೋಭಾವ ಬೆಳೆಯಬೇಕು. ಸಹಕಾರ ಮನೋಭಾವ ಬೆಳೆದರೆ ವ್ಯವಸಾಯದಲ್ಲಿ, ವ್ಯಾಪಾರದಲ್ಲಿ ಪ್ರತಿಯೊಂದರಲ್ಲಿಯೂ ಇದನ್ನು ಆಚರಣೆಗೆ ತರಬಹುದು. ವ್ಯವಸಾಯಕ್ಕೆ ಸಹಕಾರ ಮನೋಭಾವ ಬಹಳ ಮುಖ್ಯವಾದುದು. Service Co-operatives ಎಂದು ಮಾಡಿರುವುದು ಬಹಳ ಮುಖ್ಯವಾದುದು. ಇದರಿಂದ ಹೆಚ್ಚು ಉತ್ಪತ್ತಿ ಬರುವುದಕ್ಕೆ ಅನುಕೂಲವಾಗುವುದಲ್ಲದೆ ಬಿತ್ತನೆ, ಗೊಬ್ಬರ, ಸಲಕರಣೆಗಳು ಎಲ್ಲವೂ ದೊರೆಯುತ್ತದೆ. ಹೆಚ್ಚಿಗೆ ಬೆಲೆಯೂ ಸಿಕ್ಕುತ್ತದೆ. ಆದರೂ ಸಹ ನಿರ್ಬಂಧವಿರಬಾರದೆಂದು ಹೇಳುತ್ತೇನೆ.

ವಿದ್ಯಾಸಂಸ್ಥೆಗಳಿಗೆ ಕೆಲವರು ಜಮೀನನ್ನು ಕೊಟ್ಟಿದ್ದಾರೆ. ಅದಕ್ಕೂ ಸಹ ಈ ಕಾನೂನು ಅನ್ವಯವಾಗುತ್ತದೆ. ಈ ಸಂಸ್ಥೆಗಳಿಂದ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ದೊರೆಯುವಂತೆ ಮಾಡಬೇಕಾದದ್ದು ನಮ್ಮ ಕರ್ತವ್ಯ. ಅವರಿಗೆ ಪ್ರೋತ್ಸಾಹ ಕೊಡುವುದು ಸೂಕ್ತವಾಗಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—ವಿದ್ಯಾಸಂಸ್ಥೆಗಳ ವಿಚಾರವನ್ನು ಹೇಳಿದಿರಿ. ಮತಸಂಬಂಧವಾದ ಧರ್ಮಸಂಸ್ಥೆಗಳ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು ಹೇಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ವಿದ್ಯಾಸಂಸ್ಥೆಗಳಿಗೆ ಸೇರಿದ ಜಮೀನನ್ನು ಈ ಕಾನೂನಿನಿಂದ ವಿನಾಯಿತಿಗೊಳಿಸಿದರೆ ಉತ್ತಮವಾದೀತೆಂದು ನಾನು ಹೇಳಿದೆ. ಇದರಿಂದ ಅದಕ್ಕೆ ಒಂದುರೀತಿಯ ಉತ್ತೇಜನ ದೊರೆಯುತ್ತದೆ. ಸರ್ಕಾರದವರು ಮಾಡತಕ್ಕ ಕೆಲಸವನ್ನು ಸಾರ್ವಜನಿಕರು ಮಾಡುತ್ತಿದ್ದಾರೆ, ಅವರು ತಮ್ಮ ಕೆಲಸವನ್ನು ಜವಾಬ್ದಾರಿಯಿಂದ ನಡೆಸುತ್ತಿದ್ದಾರೆ. ಈ ಸಂಸ್ಥೆಗಳಿಗೂ ಕಾಂಪೆನ್ಸೇಷನ್ ಕೊಟ್ಟರೆ ಆ ಹಣದಿಂದ ವಿದ್ಯಾಸಂಸ್ಥೆಗಳನ್ನು ನಡೆಸುವುದಕ್ಕೆ ಸಾಧ್ಯವೇ, ಆ ಹಣ ಸಾಕಾಗುತ್ತದೆಯೇ ಎನ್ನುವುದನ್ನು ಯೋಚಿಸಬೇಕು. ಇದಲ್ಲದೆ ಎಷ್ಟೋ ಜನ ದಾನಧರ್ಮ ಮಾಡಿರುತ್ತಾರೆ. ಅವರಿಗೆ ಧರ್ಮದಲ್ಲಿ ನಂಬಿಕೆ ಇರುವುದರಿಂದ ವಿದ್ಯಾಸಂಸ್ಥೆಗಳು ಮುಂತಾದುವುಗಳಿಗೆ ಜಮೀನನ್ನು ಕೊಟ್ಟಿರುತ್ತಾರೆ. ಅವರ ಮನಸ್ಸು ನೋಯಬಾರದು, ಆದುದರಿಂದ ವಿದ್ಯಾ ಸಂಸ್ಥೆಗಳಿಗೆ ಜಮೀನನ್ನು ಉಳಿಸಿ ಕೊಡುವುದು ಸೂಕ್ತವೆಂದು ನನಗೆ ಕಾಣುತ್ತದೆ. ಅದನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಮತ ಮತ್ತು ಧರ್ಮ ಸಂಬಂಧವಾದ ಸಂಸ್ಥೆಗಳ ವಿಚಾರ ಕೇಳಿದರು. ಎಷ್ಟೋ ಸಂದರ್ಭಗಳಲ್ಲಿ ಜಮೀನ್ದಾರರು ಗೇಣಿದಾರರಿಗೆ ಹಿಂಸೆ ಮಾಡಿರುವುದಲ್ಲದೆ trusteeship ಧರ್ಮಸಂಸ್ಥೆಗಳು ಅಲ್ಲಲ್ಲಿ ದುರುಪಯೋಗಮಾಡಿ, ಸರಿಯಾಗಿ ನಡೆಯುತ್ತಿಲ್ಲವೆಂದು ನನ್ನ ಮನಸ್ಸಿಗೆ ಬಂದಿದೆ. ಚೆನ್ನಾಗಿ ಕೆಲಸಮಾಡುವ ಸಂಸ್ಥೆಗಳಿಗೆ ಕೊಡಿ, ಎಲ್ಲೆಲ್ಲಿ ಸಾಧುವೋ ಅದನ್ನೂ ಎಲ್ಲೆಲ್ಲ ಅಸಾಧುವೋ ಅದನ್ನೂ

ತಾವು ಯೋಚನೆಮಾಡಬೇಕು. ಕೆಲವರು ದೇವಾಲಯಗಳಿಗೆ ಜಮೀನನ್ನು ಬಿಟ್ಟಿರುತ್ತಾರೆ. ಆದುದರಿಂದ ಎಲ್ಲೆಲ್ಲಿ ಸದುಪಯೋಗವಾಗುತ್ತದೆಯೋ ಅವರಿಗೆಲ್ಲ ಕೊಡಬೇಕೆಂದು ನನ್ನ ಅಭಿಪ್ರಾಯ. ದುರುಪಯೋಗ ಮಾಡುವವರಿಗೆ ಕೊಡಬೇಕಾಗಿಲ್ಲ ಅದಕ್ಕೆ ನನ್ನ ಅಭ್ಯಂತರವಿಲ್ಲ.

Rent ಎನ್ನುವುದರಲ್ಲಿ ಸರ್ಕಾರದವರು ಮಾಡಿರುವುದು ನ್ಯಾಯವಾದುದೆಂದು ಕಾಣುತ್ತದೆ.

ಅಧ್ಯಕ್ಷರು.—ತಾವು ಬಹಳ ವೇಳೆಯನ್ನು ತೆಗೆದುಕೊಂಡಿರುವಿರಿ. ನನಗಿರುವ ಕಷ್ಟ ತಮಗೆ ಗೊತ್ತಾಗುವುದಿಲ್ಲ, ಬೇಗಮುಗಿಸಿ.

ಶ್ರೀ ಎಚ್. ಎಸ್. ರುದ್ರಪ್ಪ.—ತಾವೆಲ್ಲರೂ ಈ ಮಸೂದೆಗೆ ಬೆಂಬಲ ಕೊಡುವುದು ಸೂಕ್ತವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Business of the House.

Sri KADIDAL MANJAPPA (Minister for Revenue).—Mr. Speaker, Sir, under rule 231 of the Rules of Procedure and Conduct of Business in the Mysore Legislative Assembly, I beg to move that the time allotted for the discussion of the Mysore Land Reforms Bill, 1958, in the eleventh Report of the Business Advisory Committee be extended by ten hours.

Mr. SPEAKER.—The question is:

"That the time allotted for the discussion of the Mysore Land Reforms Bill, 1958, in the eleventh Report of the Business Advisory Committee, under rule 231 of the Rules of Procedure and Conduct of Business in the Mysore Legislative Assembly, be extended by ten hours."

The motion was adopted.

Half-an-hour Discussion on Question No. 96 re: Constitutton of a Coir Board.

*ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಸ್ವಾಮಿ, ನಮ್ಮ ತುಮಕೂರು ಜಿಲ್ಲೆಯಿಂದ ಬಂದಿರುವ learned Hon'ble Minister for Co-operation ಅವರಿಗೆ ಸಂಬಂಧಪಟ್ಟ ಕಾಯಿರ್ ಬೋರ್ಡ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಸರ್ಕಾರ ಯಾವುದಾದರೂ ಒಂದು ಕಮಿಟಿಯನ್ನು ಯಾವುದಾದರೂ ಒಂದು ಉದ್ದೇಶಕ್ಕೆ ಸ್ಥಾಪನೆ ಮಾಡಬೇಕಾದರೆ ಸ್ಥಾಪನೆಯ ಉದ್ದೇಶ ಸಾಧನೆ ಯಾಗಬೇಕೆನ್ನುವುದನ್ನು ಮೊದಲನೆಯ ಮೂಲಾಧಾರವಾಗಿ ಇಟ್ಟುಕೊಳ್ಳುತ್ತಿದ್ದಾರೆ. ಹಾಗೆ ಮಾಡುವಾಗ ಅನುಭವಿಗಳು ಎನ್ನುವ ಕಲಮನ್ನು ಯಾವುದರಲ್ಲಿ ಬೇಕಾದರೂ ಉಪಯೋಗಿಸಬಹುದು. ಅನುಭವಿಗಳು ಎನ್ನುವುದರ ಜೊತೆಗೆ efficiency, integrity, sound commonsense ಎಂದು ಏನೇನೋ ಒಳ್ಳೊಳ್ಳೆಯ ಪದಗಳನ್ನು ಯಾರಿಗೆಬೇಕಾದರೂ ತಗಲು ಹಾಕುತ್ತಿದ್ದಾರೆ. ಕೈಯಲ್ಲಿ ಕಷ್ಟಪಡುವುದಕ್ಕೆ ಇಷ್ಟವಿಲ್ಲದವರು ಶನಿದೇವರ ಪಟವನ್ನು ತೆಗೆದುಕೊಂಡು ಹೊರಡುತ್ತಾರೆ. ಕಷ್ಟಪಡುವುದಕ್ಕೆ ಯಾವಾಗ ಶಕ್ತಿಇಲ್ಲವೋ ಆಕಾಲದಲ್ಲಿ ಶನಿದೇವರ ಪಟವನ್ನು ಹಿಡಿದುಕೊಂಡು ಕಾಸುಕೇಳಲು ಹೊರಡುತ್ತಾರೆ. ನನ್ನಹತ್ತಿರ ಬಬ್ಬಾತನು ಬಂದಾಗ 'ಏಕಯ್ಯ ಶನಿದೇವರ ಪಟವನ್ನು ಹಿಡಿದುಕೊಂಡು ಹೊರಟೆ' ಎಂದು ಕೇಳಿದ್ದಕ್ಕೆ ಅವನು 'ವಾಸ್ತವವಾಗಿ ಹೇಳುತ್ತೇನೆ ಸ್ವಾಮಿ. ದುಡಿಯುವುದಕ್ಕಾಗದೆ ಇರುವುದರಿಂದ ಈರೀತಿ ಪಟವನ್ನು ಹಿಡಿದುಕೊಂಡಿದ್ದೇನೆ' ಎಂದು ತಿಳಿಸಿದ. ಶನಿದೇವರನು ಒಬ್ಬರನ್ನೇ ಹಿಡಿದುಕೊಂಡು ಎಲ್ಲರೂ ಏಕೆ ಗೋಳಾಡಿಸುತ್ತೀರಿ ಬೇರೆ ದೇವರುಗಳನ್ನೂ ಹಿಡಿದುಕೊಳ್ಳಿ ಎಂದು ಹೇಳಿದೆ. ಅದಕ್ಕೆ ಯಾರೂ ಇಷ್ಟಪಡುವುದಿಲ್ಲ. ಅಧಿಕಾರದಲ್ಲಿರುವಾಗ ಅಲ್ಪ ಸ್ವಲ್ಪ ಲೋಪದೋಷಗಳನ್ನು ಮಾಡುವುದು ಸ್ವಾಭಾವಿಕ. ದೇಶದಲ್ಲಿ ಇತರೆ ಜನಗಳೂ ಇದ್ದಾರೆ, ಸ್ಥಳದ ವಿದ್ಯಮಾನಗಳೇನು, ಯಾವ ಕ್ಷೇತ್ರದಲ್ಲಿ ಏನೇನು ಉತ್ಪತ್ತಿಯಾಗುತ್ತದೆ, ಯಾರಿಗೆ ಪ್ರಾತಿನಿಧ್ಯಕೊಡಬೇಕಾಗಿದೆ, ಇತರ ಪಕ್ಷಗಳನ್ನೂ ಗಮನಕ್ಕೆ ತೆಗೆದುಕೊಳ್ಳಬೇಕಾದುದು ಸೂಕ್ತವಲ್ಲವೇ, ನಾವು ಮಾಡತಕ್ಕ ಉದ್ಯೋಗ ಸಫಲವಾಗಬೇಕಾದರೆ ಅದರಲ್ಲಿ ಯಾರಿಗೆ interest ಇದೆ, ಎನ್ನುವುದನ್ನೆಲ್ಲ ಸರ್ಕಾರ ಯೋಚನೆಮಾಡಬೇಕು. ಅಧಿಕಾರಕ್ಕೆ ಬಂದ ತಕ್ಷಣ ನಮ್ಮತಾಲ್ಲೂಕು, ನಮ್ಮ ಜಿಲ್ಲೆ, ನಮ್ಮ ಪಕ್ಷ ಎನ್ನುವ ಮನೋಭಾವವನ್ನು ಬಿಟ್ಟುಬಿಡಬೇಕು. ನಾವು Commonwealth, ಪ್ರಪಂಚ ಸಂಸ್ಥೆ ಹೀಗೆ ಎಲ್ಲವನ್ನೂ ನೋಡಿದಾಗ್ಯೂ ನಮ್ಮ ಸಂಕುಚಿತ ಭಾವನೆ ಹೆಚ್ಚುತ್ತಿದೆ. ಆ ರೀತಿ ಆಗಬಾರದೆಂದು ಹೇಳುತ್ತೇನೆ.

ಮೊನ್ನೆ ಕೇರಳದಲ್ಲಾದ ಪರಿಸ್ಥಿತಿ ಬಂದರೂ ಬರಬಹುದು. ಪ್ಲೇಗು ರೋಗ ಬಂದರೆ ಅದು ಅಂಟು ಜಾಡ್ಯದಂತೆ ಹೇಗೆ ಹರಡುವುದೋ ಅದೇ ರೀತಿ ಈ ರೋಗ ಎಲ್ಲ ದೇಶಕ್ಕೂ ಹರಡುವಂತೆ ಆಗಬಹುದು. ಈ ರೀತಿಯ ಅವ್ಯವಸ್ಥೆಗೆ ಅವಕಾಶಕೊಡದಂತೆ ಕೆಲಸ ಮಾಡುತ್ತೀರೆಂದು ನಂಬುತ್ತೇನೆ.

ಇನ್ನು ಈ Coir Boardನಲ್ಲಿ ನೇಮಿಸಿರುವ ಕೆಲವು ಮೆಂಬರುಗಳು ಲ್ಯಾಂಡ್ ಹೋಲ್ಡರುಗಳು ಎಂದು ಹೇಳಿದ್ದಾರೆ. ಇವರಿಗೆ ಜಮೀನೇ ಇಲ್ಲ, ಮೂರುಕಾಸಿನ ಕಂದಾಯವನ್ನೂ ಕೊಡುವುದಿಲ್ಲ. ಇಂತಹ ಜನರನ್ನು ಇಲ್ಲಿಗೆ ನಾಮಿನೇಟ್ ಮಾಡಿದರೆ ಇವರಿಗೆ ಕಾಯಿ, ಕೊಬ್ಬರಿ ಇವುಗಳ ವ್ಯಾಪಾರದ ಪ್ರತಿಫಲ ಏನಾಗಬಹುದು ಎನ್ನುವುದನ್ನು ಆಲೋಚಿಸಿಲ್ಲ. ಹೋದ ವರ್ಷ ಸರ್ಕಾರ ಪ್ರೈವೇಟಾಗಿ Coir Boardನ್ನು ಮಾಡುವಾಗ ಇದರಿಂದ ನೆರವು ಕೊಡುತ್ತೇವೆಂದು ಹೇಳಲಾಗಿತ್ತು. ಈ ಬೋರ್ಡಿಗೆ ನೇಮಿಸುವಾಗ ಸ್ವಲ್ಪ ಯೋಚನೆ ಮಾಡಿ ಯಾರು ಅನಕ್ತಿಯುಳ್ಳ ಮನುಷ್ಯರು ಎನ್ನುವುದನ್ನು ನೋಡಿ ನೇಮಿಸಬೇಕು. ಆಡಳಿತ ಪಕ್ಷದ